بِسۡمِ اللّٰہِ الرَّحۡمٰنِ الرَّحِیۡمِ نَحۡمَدُہٗ وَنُصَلِّیۡ عَلٰی رَسُوۡلِہِ الۡکَرِیۡمِ وَعَلٰی عَبۡدِہِ الۡمَسِیۡحِ الۡمَوۡعُوۡدِ

وَلَقَدۡ نَصَرَکُمُ اللّٰہُ بِبَدۡرٍ وَّاَنۡتُمۡ اَذِلَّۃٌ

ಕನ್ನಡ **ಬದರ್** ವಾರ ಪತ್ರಿಕೆ

WEEKLY BADAR QADIAN KANNADA

**ವರ್ಷ:** **05**

**ಸಂಚಿಕೆ:** **40**

**ವಾರ್ಷಿಕ ಶುಲ್ಕ ರೂ.600/-**

**ಸಂಪಾದಕರು: ತಾರಿಖ್ ಅಹ್ಮದ್ ಇದ್ರೀಸ್.**

**03 ಅಕ್ಟೋಬರ್ 2024, 03 ಅಖಾ 1403 ಹಿಜರಿ ಶಮ್ಸಿ,**
**29 ರಬೀಉಲ್ ಅವ್ವಲ್ 1445 ಹಿಜರಿ ಖಮರಿ.**


## *ಅಹ್ಮದಿಯಾ ವಾರ್ತೆ*

ಅಲ್‌ಹಮ್ದುಲಿಲ್ಲಾಹ್! ಹುಝೂರ್ ಅನ್ವರ್ ಅಯ್ಯದಹುಲ್ಲಾಹುತಆಲ ಬಿನಸ್ರಿಹಿಲ್ ಅಝೀಝ್‌ರವರು ಆರೋಗ್ಯವಾಗಿದ್ದಾರೆ. ಹುಝೂರ್ ರವರ ಯೋಗಕ್ಷೇಮಕ್ಕಾಗಿ, ಶುಭಕಾರ್ಯಗಳಲ್ಲಿ ಯಶಸ್ಸುಗಳಿಸಲಿಕ್ಕಾಗಿ ದುಆ ಮಾಡುತ್ತಾ ಇರಿ, ಸರ್ವಶಕ್ತನಾದ ಅಲ್ಲಾಹನು ಹುಝೂರ್ ಅವರಿಗೆ ದೀರ್ಘ ಮತ್ತು ಸಕ್ರಿಯ ಜೀವನವನ್ನು ನೀಡಲಿ ಮತ್ತು ಪ್ರತಿಕ್ಷಣ ಸಂರಕ್ಷಿಸಲಿ- **ಆಮೀನ್**

اَللّٰھُمَّ اَیِّدۡ اِمَامَنَا بِرُوۡحِ الۡقُدُسِ
وَبَارِکۡ لَنَا فِیۡ عُمُرِہٖ وَاَمۡرِہٖ۔

## *ಅಲ್ಲಾಹನ ಉಪದೇಶ*

وَلَا تَقُوۡلَنَّ لِشَایۡءٍ
اِنِّیۡ فَاعِلٌ ذٰلِکَ غَدًا
اِلَّاۤ اَنۡ یَّشَآءَ اللّٰہُ

**(ಅಲ್ ಕಹಫ್: 24,25)**

**ಅಂದರೆ: ಖಂಡಿತವಾಗಿಯೂ ನಾನು ನಾಳೆ ಅದನ್ನು ಮಾಡುವೆನು ಎಂದು ನೀನು ಯಾವ ಕಾರ್ಯದ ಬಗ್ಗೆಯೂ ಹೇಳಬೇಡಿ. ಅಲ್ಲಾಹನು ಇಚ್ಛಿಸಿದರೆ ಎಂದು ಸೇರಿಸಿ ಹೇಳುವುದುರ ಹೊರತು.**

## ಪ್ರವಾದಿ ಮುಹಮ್ಮದ್[ಸ]ರವರ ಉಪದೇಶ

**ನಿಮ್ಮ ಪೈಕಿ ಆಡಳಿತ ಹೊಂದಿರುವ ಪ್ರತಿಯೊಬ್ಬ ಆಡಳಿತಗಾರನು ತನ್ನ ಪ್ರಜೆಯ ಬಗ್ಗೆ ಪ್ರಶ್ನಿಸಲಾಗುವನು.**

**(2409)** ಹಝ್ರತ್ ಅಬ್ದುಲ್ಲಾ ಬಿನ್ ಉಮರ್(ರ) ವರದಿ ಮಾಡುತ್ತಾರೆ, ರಸೂಲುಲ್ಲಾಹ್(ಸ) ನುಡಿಯುತ್ತಾರೆ: ನಿಮ್ಮ ಪೈಕಿ ಆಡಳಿತ ಹೊಂದಿರುವ ಪ್ರತಿಯೊಬ್ಬ ಆಡಳಿತಗಾರನಲ್ಲಿ ತನ್ನ ಪ್ರಜೆಗಳ ಬಗ್ಗೆ ಪ್ರಶ್ನಿಸಲಾಗುವುದು. ರಾಜನಾದವನು ಆಡಳಿತ ಹೊಂದಿರುತ್ತಾನೆ. ಆದುದರಿಂದ ಅವನು ಪ್ರಜೆಗಳ ಬಗ್ಗೆ ಪ್ರಶ್ನಿಸಲ್ಪಡುವನು. ಅಂತೆಯೇ ಪ್ರತಿಯೊಬ್ಬ ಮನುಷ್ಯನು ತನ್ನ ಮನೆಯ ಯಜಮಾನ ಆಡಳಿತಗಾರನಾಗಿರುತ್ತಾನೆ. ಆದುದರಿಂದ ಅವನಿಂದಲೂ ಅವನ ಪ್ರಜೆ (ಕುಟುಂಬ)ದ ಬಗ್ಗೆ ಪ್ರಶ್ನಿಸಲ್ಪಡುವನು. ಮಹಿಳೆಯೂ ಸಹ ತನ್ನ ಪತಿಯ ಮನೆಯಲ್ಲಿ ಆಡಳಿತ ಹೊಂದಿರುತ್ತಾಳೆ. ಆದುದರಿಂದ ಅವಳಿಂದಲೂ ಅವಳ ಪ್ರಜೆ (ಕುಟುಬ)ದ ಬಗ್ಗೆ ಪ್ರಶ್ನಿಸಲ್ಪಡುವಳು. ಮನೆಯ ಸೇವಕನು (ನೌಕರನು) ಸಹ ಸಂಪತ್ತಿನ ರಕ್ಷಣೆಗೊಸ್ಕರ ಜವಾಬ್ಧಾರನಾಗಿರುತ್ತಾನೆ. ಅವನೂ ಸಹ ಈ ಪೈಕಿ ಪ್ರಶ್ನಿಸಲ್ಪಡುವನು. (ಹಝ್ರತ್ ಇಬ್ನು ಉಮರ್(ರ) ಹೇಳಿದರು. ನಾನು ರಸೂಲುಲ್ಲಾಹ್(ಸ) ಅವರಿಂದ ಇವೆಲ್ಲ ಜನರ ಪೈಕಿ ಆಲಿಸಿರುತ್ತೇನೆ. ಮತ್ತು ನನ್ನ ಭಾವನೆಯಾಗಿದೆ. ನಬಿ(ಸ) ಹೀಗೂ ನುಡಿದಿದ್ದರು. ಮನುಷ್ಯನು ತನ್ನ ತಂದೆಯ ಸಂಪತ್ತಿಗೂ ಜವಾಬ್ಧಾರನಾಗಿದ್ದಾನೆ. ಅವನೂ ಸಹ ಎಂದರೆ ಆ ಸಂಪತ್ತಿನ ಪೈಕಿ ಪ್ರಶ್ನಿಸಲ್ಪಡುವನು. ಆದುದರಿಂದ ನಿಮ್ಮ ಪೈಕಿ ಪ್ರತಿಯೊಬ್ಬನು ಜವಾಬ್ಧಾರನಾಗಿದ್ದಾನೆ. ಅವನು ತಮ್ಮ ಪ್ರಜೆ (ಸಂಪತ್ತಿನ ರಕ್ಷಣ)ಗಳ ಕುರಿತು ಪ್ರಶ್ನಿಸಲ್ಪಡುವನು. **(ಸಹೀಹ್ ಬುಖಾರಿ, ಸಂಪುಟ-4, ಕಿತಾಬುಲ್ ಇಸ್ತಿಗ್‌ರಾಝ್, 2008 ಖಾದಿಯಾನ್)**


**'ಬದರ್' ವಾರಪತ್ರಿಕೆಯನ್ನು Online ಮುಖಾಂತರ ಓದಲು ಸಂಪರ್ಕಿಸಿ ನಮ್ಮ ವೆಬ್‌ಸೈಟ್: https://akhbarbadr.in/Kannada/#gsc.tab=0**


ವಿಧೇಯತೆಯ ಗುಣದ ಅವಶ್ಯಕತೆ ಎಷ್ಟು ಇದೆಯೋ ಅಷ್ಟು ಕಷ್ಟಪಟ್ಟು ಆರಾಧಿಸುವ ಪ್ರಯತ್ನಗಳ ಅವಶ್ಯಕತೆ ಇರುವುದಿಲ್ಲ
ಆದರೆ ಅದಕ್ಕೆ ಷರತ್ತೇನೆಂದರೆ ವಿಧೇಯತೆಯು ನೈಜರೂಪದ್ದಾಗಿರಬೇಕು, ಆದರೆ ಅದು ಬಹಳ ಕಷ್ಟಕರ ಕಾರ್ಯವಾಗಿದೆ.

## ಸಯ್ಯದುನಾ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರ ಅಧ್ಯಾಪನೆಗಳು

ವಿಧೇಯತೆ ಎಂಬುದು ಎಂತಹ ವಿಷಯವಾಗಿದೆ ಎಂದರೆ ಅದನ್ನು ಪ್ರಾಮಾಣಿಕ ಮನಸ್ಸಿನಿಂದ ಮಾಡಿದರೆ ಹೃದಯದಲ್ಲಿ ಒಂದು ದಿವ್ಯಪ್ರಕಾಶ ಮತ್ತು ಆತ್ಮದಲ್ಲಿ ಸಂತೋಷ ಉಂಟಾಗುತ್ತದೆ. ವಿಧೇಯತೆಯ ಗುಣದ ಅವಶ್ಯಕತೆ ಎಷ್ಟು ಇದೆಯೋ ಅಷ್ಟು ಕಷ್ಟಪಟ್ಟು ಆರಾಧಿಸುವ ಪ್ರಯತ್ನಗಳ ಅವಶ್ಯಕತೆ ಇರುವುದಿಲ್ಲ ಆದರೆ ಅದಕ್ಕೆ ಷರತ್ತೇನೆಂದರೆ ವಿಧೇಯತೆಯು ನೈಜರೂಪದ್ದಾಗಿರಬೇಕು, ಆದರೆ ಅದು ಬಹಳ ಕಷ್ಟಕರವಾದ ವಿಷಯವಾಗಿದೆ. ವಿಧೇಯತೆಯಲ್ಲಿ, ತಮ್ಮ ಸ್ವಯಿಚ್ಛೆಗಳನ್ನು ಬಲಿಕೊಡಬೇಕಾಗುವುದು ಅವಶ್ಯಕವಾಗಿದೆ. ಇಲ್ಲದಿದ್ದರೆ ವಿಧೇಯರಾಗುವುದು ಅಸಾಧ್ಯ. ಸ್ವಾಯಿಚ್ಛೆ ಎಂಬುದು ಬಲಿಷ್ಟ ಏಕದೇವತಾವಾದಿಗಳ ಮನಸ್ಸಿನಲ್ಲಿಯೂ ಪ್ರತಿಮೆಯಾಗಬಲ್ಲದು. ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿವ ಸಲ್ಲಮ್ ಅವರ ಸಹಾಬರ ಮೇಲೆ ಯಾವ ರೀತಿಯ ಅನುಗ್ರಹವಿತ್ತು ಮತ್ತು ಅವರು ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿವ ಸಲ್ಲಮ್ ಅವರ ವಿಧೇಯತೆಯಲ್ಲಿ ಎಷ್ಟು ತಮ್ಮನ್ನು ಶರಣಾಗಿಸಿ ಬಿಟ್ಟರು. ಯಾವುದೇ ಸಮುದಾಯವು ಸಂಪೂರ್ಣ ವಿಧೇಯತೆಯ ತತ್ವವನ್ನು ಅಳವಡಿಸಿಕೊಳ್ಳದ ಹೊರತು ಅವರಲ್ಲಿ ಸಾಮುದಾಯಿಕ ಮತ್ತು ಏಕತೆಯ ಮನೋಭಾವವನ್ನು ತುಂಬಲು ಸಾಧ್ಯವಿಲ್ಲ ಎಂಬುದು ನಿಜಸಂಗತಿಯಾಗಿದೆ. ಒಂದುವೇಳೆ ಅವರಲ್ಲಿ ಭಿನ್ನಾಭಿಪ್ರಾಯಗಳು ಭುಗಿಲೆದ್ದರೆ, ಇವುಗಳು ಅವಿಧೇಯತೆ ಮತ್ತು ಅವನತಿಯ ಚಿಹ್ನೆಗಳು ಎಂದು ಅರ್ಥಮಾಡಿಕೊಳ್ಳಿ. ಮುಸ್ಲಿಮರ ಅವನತಿಗೆ ಹಲವು ಕಾರಣಗಳಲ್ಲಿ ಪರಸ್ಪರ ಬಿನ್ನಮತ, ಜಗಳಗಳು ಒಂದಾಗಿದೆ. ಅವರು ಇವೆಲ್ಲವನ್ನು ತ್ಯಜಿಸಿ ಸರ್ವಶಕ್ತನಾದ ಅಲ್ಲಾಹನ ನಿರ್ದೇಶನದಂತೆ ವಿಧೇಯತೆಯ ಹಾದಿ ಹಿಡಿದರೆ ನೀವು ಏನು ಬಯಸಿದ್ದನ್ನೆಲ್ಲ ಈಡೇರಬಹುದು. ಅಂತಹ ಸಮುದಾಯದ ಮೇಲೆ ಅಲ್ಲಾಹನ ಅಭಯವಿರುತ್ತದೆ. ಇದು ಅದರ ಸಾರವಾಗಿದೆ. ಅಲ್ಲಾಹನು ಏಕತೆಯನ್ನು ಪ್ರೀತಿಸುತ್ತಾನೆ ಮತ್ತು ಅದನ್ನು ಪಾಲಿಸದ ಹೊರತು ಈ ಏಕತೆಯನ್ನು ಸ್ಥಾಪಿಸಲಾಗುವುದಿಲ್ಲ. ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿವ ಸಲ್ಲಮ್ ರ ಕಾಲದಲ್ಲಿ ಸಹಾಬಿಗಳ ಉತ್ತುಂಗ ಸ್ಥಾನ ಪಡೆದಿದ್ದರು ಅದಕ್ಕೆ ಕಾರಣ ಅವರ ಸ್ವಭಾವ ಅದೇ ರೀತಿಯದ್ದಾಗಿತ್ತು. ಅವರಿಗೂ ರಾಜಕೀಯದ ತತ್ವಗಳ ಬಗ್ಗೆ ಚೆನ್ನಾಗಿ ತಿಳಿದಿತ್ತು, ಆದ್ದರಿಂದಲೇ ಅಂತಿಮವಾಗಿ ಹಝ್ರತ್ ಅಬೂಬಕರ್(ರ) ಮತ್ತು ಹಝ್ರತ್ ಉಮರ್(ರ) ಮತ್ತು ಇತರ ಸಹಬೀಯರು ಖಲೀಫರಾದಾಗ ಮತ್ತು ಅವರ ಬಳಿಗೆ ಆಡಳಿತ ಬಂದಾಗ, ಅವರು ಅದನ್ನೆಲ್ಲ ಸಂಪೂರ್ಣವಾಗಿ ಯಶಸ್ಸಿನಿಂದ ನಿರ್ವಹಿಸಿದರು. ಅದರಿಂದ ತಿಳಿಯುವುದು ಏನೆಂದರೆ ಅವರಲ್ಲಿ ಜಾಣ್ಮೆಯ ಗುಣ ಎಷ್ಟೊಂದು ಪ್ರಬಲಗೊಂಡಿತ್ತು, ಆದರೆ ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿವ ಸಲ್ಲಮ್ ಅವರ ಸನ್ನಿಧಿಯಲ್ಲಿ ಅವರ ಸ್ಥಿತಿ ಹೇಗಿರುತ್ತಿತ್ತು ಎಂದರೆ ಅವರು(ಸ) ಏನನ್ನಾದರೂ ಹೇಳಿದಾಗ, ತಮ್ಮ ಎಲ್ಲಾ ಅಭಿಪ್ರಾಯಗಳನ್ನು ಮತ್ತು ಬುದ್ಧಿವಂತಿಕೆಯನ್ನು ಅವರ ಮುಂದೆ ತುಚ್ಛ ಎಂದು ಭಾವಿಸಿದರು ಮತ್ತು ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿವ ಸಲ್ಲಮ್ ಹೇಳಿದನ್ನೆ ಕಡ್ಡಾಯವಾಗಿ ಅನುಸರಣೆಗೆ ಯೋಗ್ಯ ಘೋಷಿಸಿದರು. ಅವರ ವಿಧೇಯತೆಯ ಗುಣ ಎಷ್ಟರ ಮಟ್ಟಿಗೆ ಇತ್ತು ಎಂದರೆ ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿವ ಸಲ್ಲಮ್ ವಝೂವಿನಲ್ಲಿ ಉಳಿದ ನೀರಿನಲ್ಲಿ ಅನುಗ್ರಹವನ್ನು ಹುಡುಕುತ್ತಿದ್ದರು ಮತ್ತು ಅವರ(ಸ) ಅನುಗ್ರಹದಾಯಕ ತುಟಿಗಳನ್ನು ಸಹ ಪವಿತ್ರ ಎಂದು ಪರಿಗಣಿಸುತ್ತಿದ್ದರು, ಆದರೆ ಅವರಲ್ಲಿ ವಿಧೇಯತೆಯ ಇಂತಹ ಗುಣ ಇರದಿರುತ್ತಿದ್ದರೆ ಬದಲಿಗೆ ಅವರಲ್ಲಿ ಪ್ರತಿಯೊಬ್ಬರು ತಮ್ಮದೇ ಅಭಿಪ್ರಾಯ ಹೊಂದಿರುತ್ತಿದ್ದರೆ, ಭಿನ್ನಮತ ಹೊಂದಿರುತ್ತಿದ್ದರೆ ಅವರಿಗೆ ಇಂತಹ ಉತ್ತುಂಗ ಸ್ಥಾನಮಾನವನ್ನು ಪಡೆಯುತ್ತಿರಲಿಲ್ಲ. ನನ್ನ ಪ್ರಕಾರ, ಈ ಒಂದು ವಾದವು ಷಿಯಾಗಳು ಮತ್ತು ಸುನ್ನಿಗಳ ವಿವಾದಗಳನ್ನು ಪರಿಹರಿಸಲು ಸಾಕಾಗುವುದು, ಸಹಾಬಿಗಳ ನಡುವೆ ಯಾವುದೇ ಒಡಕು ಮತ್ತು ದ್ವೇಷ ಇರಲಿಲ್ಲ, ಏಕೆಂದರೆ ಅವರ ಪ್ರಗತಿ ಮತ್ತು ಸಾಧನೆಗಳು ಅವರು ಒಂದಾಗಿದ್ದಾರೆ ಎಂಬ ನಿಲುವು ಹೊಂದಿದ್ದರು


***(ಪುಟ ಸಂಖೆ 07 ರಲ್ಲಿ ಮುಂದುವರಿಸಲಾಗಿದೆ)***

# ಖುತ್ಬ ಜುಮುಅ

'ಇಫ್ಕ್' ಘಟನೆಯಿಂದ ಪರಿಶುದ್ಧರಾದ ಮತ್ತು ಅತ್ಯಂತ ಉನ್ನತ ಮಟ್ಟದ ಮುತ್ತಖಿಯಾದ ಓರ್ವ ಮಹಿಳೆಯ ಗೌರವಕ್ಕೆ ಕಳಂಕ ತರುವುದು ಮಾತ್ರ ಅದರ ಉದ್ದೇಶವಾಗಿರಲಿಲ್ಲ. ಬದಲಾಗಿ ನೇರವಾಗಿ ಇಸ್ಲಾಮಿನ ಸ್ಥಾಪಕರಾದ ಹಝ್ರತ್ ಪೈಗಂಬರ್(ಸ)ರ ಗೌರವಕ್ಕೆ ಧಕ್ಕೆ ಉಂಟುಮಾಡುವುದು ಮತ್ತು ಇಸ್ಲಾಮಿನ ಸಮಾಜದ ಮೇಲೆ ಒಂದು ಅಪಾಯಕಾರಿ ಭೂಕಂಪವನ್ನು ಉಂಟುಮಾಡುವುದು ಅದರ ಮುಖ್ಯ ಉದ್ದೇಶವಾಗಿತ್ತು.

ಹಝ್ರತ್ ಆಯಿಶಾ(ರ) ಹೇಳಿದರು, "ಹಸ್ಸಾನ್ ಅವರು ಹಝ್ರತ್ ಪೈಗಂಬರ್(ಸ) ಹಾಗೂ ಇಸ್ಲಾಮ್ ಧರ್ಮವನ್ನು ರನ್ನು ಬೆಂಬಲಿಸಿ ಅವಿಶ್ವಾಸಿಗಳ ವಿರುದ್ಧ ಕವನ ವಾಚನ ಮಾಡುತ್ತಿದ್ದುದನ್ನು ನಾನು ಮರೆಯಲಾರೆ."

ಈ ಸುಳ್ಳಾರೋಪವನ್ನು ಹೊರಿಸುವುದಕ್ಕೆ ಕಾರಣವನ್ನು ಪ್ರಸ್ತಾಪಿಸುತ್ತಾ ಹಝ್ರತ್ ಮುಸ್ಲಿಹ್ ಮೌಊದ್(ರ) ಹೇಳುತ್ತಾರೆ: ಹಝ್ರತ್ ಆಯಿಶಾ(ರ.ಅ) ವಿರುದ್ಧ ಮಾಡಿದ ಆರೋಪದ ನಿಜವಾದ ಉದ್ದೇಶವೇನು ಎಂಬುದನ್ನು ನಾವು ನೋಡಬೇಕು.

ಈ ಆರೋಪವನ್ನು ಹಝ್ರತ್ ಪೈಗಂಬರ್(ಸ) ಮತ್ತು ಹಝ್ರತ್ ಅಬೂಬಕರ್(ರ)ರಿಗೆ ನಷ್ಟ ಉಂಟುಮಾಡಲಿಕ್ಕಾಗಿ ಹೊರಿಸಿರಬೇಕು. ಏಕೆಂದರೆ ಹಝ್ರತ್ ಆಯಿಶ(ರ) ಹಝ್ರತ್ ಪೈಗಂಬರ್(ಸ)ರ ಪತ್ನಿಯೂ ಹಝ್ರತ್ ಅಬೂಬಕರ್(ರ)ರ ಪುತ್ರಿಯೂ ಆಗಿದ್ದರು. ಅವರಿಬ್ಬರಿಗೆ ಕೆಟ್ಟ ಹೆಸರು ತಂದು ಹಗೆತನವನ್ನು ವರ್ಧಿಸುವುದರಿಂದ ರಾಜಕೀಯವಾಗಿ ಕೆಲವರಿಗೆ ಪ್ರಯೋಜನವಿತ್ತು.

"ಸಹಾಬಿಗಳು ಪರಸ್ಪರ ಮಾತನಾಡಿಕೊಳ್ಳುತ್ತಿದ್ದರು ಮತ್ತು ಹಝ್ರತ್ ಪೈಗಂಬರ್(ಸ) ಅವರ ನಂತರ ಯಾರಿಗಾದರೂ ಸ್ಥಾನವಿದ್ದರೆ ಅದು ಅಬೂಬಕರ್(ರ) ಅವರ ಸ್ಥಾನ ಎಂದು ಹದೀಸ್‌ಗಳಲ್ಲಿ ಸ್ಪಷ್ಟವಾಗಿ ಉಲ್ಲೇಖಿಸಲಾಗಿದೆ."

ಅಲ್ಲಾಹನು ಈ ಆರೋಪದ ಪ್ರಸ್ತಾಪದ ನಂತರ ಕೂಡಲೇ ಖಿಲಾಫತಿನ ಬಗ್ಗೆ ಹೇಳಿದನು. ಖಿಲಾಫತ್ ಅರಸುತನವಲ್ಲ, ಬದಲಾಗಿ ಅದು ಅಲ್ಲಾಹನ ಪ್ರಕಾಶವನ್ನು ನೆಲೆನಿಲ್ಲಿಸಲಿಕ್ಕಾಗಿ ಇರುವ ಮಾರ್ಗವಾಗಿದೆ. ಆದ್ದರಿಂದ ಅದರ ಸ್ಥಾಪನೆಯನ್ನು ಅಲ್ಲಾಹನು ತನ್ನ ಕೈಯಲ್ಲಿ ಇರಿಸಿದ್ದಾನೆ ಎಂದು ಹೇಳಿದನು.

**ಇಫ್ಕ್ ಘಟನೆಯ ಸಂಬಂಧವಾಗಿ ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವ ಸಲ್ಲಮ್ ಅವರ ಪವಿತ್ರ ಜೀವನಚರಿತ್ರೆಯ ಪ್ರಸ್ತಾವನೆ**

ಸುಡಾನ್‌ನ ಇಮಾಮ್ ಮುಹಮ್ಮದ್ ಬೈಲೂ ಸಾಹಿಬ್ ಅವರ ಸದ್ಗುಣಗಳ ಪ್ರಸ್ತಾವನೆ ಹಾಗೂ ನಮಾಝೆ ಜನಾಝ ನಿರ್ವಹಣೆ

ಪ್ರಸ್ತುತ ಯುದ್ಧದ ಕಾರಣದಿಂದ ಅಹ್ಮದಿಯರು ಕೂಡ ತಮ್ಮ ಜೀವ ರಕ್ಷಣೆಗಾಗಿ ಮತ್ತು ಸಮಾಧಾನಕ್ಕಾಗಿ ಸೂಡಾನಿನ ಬೇರೆ ಬೇರೆ ಪ್ರದೇಶಗಳಲ್ಲಿ ಚದುರಿ ಹೋಗಿರುವರು. ಈಗಲೂ ವಿವಿಧ ಪ್ರದೇಶಗಳಲ್ಲಿ ಈ ಜನರು ಬಹಳ ಕಷ್ಟ ಮತ್ತು ಬಡತನದಿಂದ ಜೀವನವನ್ನು ಸಾಗಿಸುತ್ತಿದ್ದಾರೆ. ಅಲ್ಲಾಹನು ಅಹ್ಮದಿಯರ ಈಮಾನನ್ನು ಸುದೃಢಗೊಳಿಸಲಿ. ಅಲ್ಲಾಹನು ಅವರ ಸ್ಥಿತಿಗಳನ್ನು ಬದಲಾಯಿಸಲಿ.

ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಇಸ್ಲಾಮಾಬಾದ್ (ಯು.ಕೆ) ಯ **'ಮಸ್ಜಿದ್ ಮುಬಾರಕ್'** ನಿಂದ **30–08–2024** ರಂದು ನೀಡಿದ **ಖುತ್ಬ ಜುಮುಅ**

أَشْهَدُ أَنْ لَّا إِلٰهَ إِلَّا اللهُ وَحْدَهُ لَا شَرِيكَ لَهُ وَأَشْهَدُ أَنَّ مُحَمَّدًا عَبْدُهُ وَرَسُولُهُ

أَمَّا بَعْدُ فَأَعُوذُ بِاللهِ مِنَ الشَّيْطٰنِ الرَّجِيْمِ - بِسْمِ اللهِ الرَّحْمٰنِ الرَّحِيْمِ

اَلْحَمْدُ لِلّٰهِ رَبِّ الْعَالَمِيْنَ ۔ اَلرَّحْمٰنِ الرَّحِيْمِ ۔ مٰلِكِ يَوْمِ الدِّيْنِ ۔

اِيَّاكَ نَعْبُدُ وَاِيَّاكَ نَسْتَعِيْنُ ۔ اِهْدِنَا الصِّرَاطَ الْمُسْتَقِيْمَ ۔

صِرَاطَ الَّذِيْنَ اَنْعَمْتَ عَلَيْهِمْ غَيْرِ الْمَغْضُوْبِ عَلَيْهِمْ وَلَا الضَّآلِّيْنَ ۔

ಜರ್ಮನಿ ಜಲ್ಸಕ್ಕೆ ಮುಂಚಿನ ಖುತ್ಬಗಳಲ್ಲಿ ಹಝ್ರತ್ ಪೈಗಂಬರ್(ಸ)ರ ಜೀವನಕ್ಕೆ ಸಂಬಂಧಿಸಿ ಪ್ರಸ್ತಾಪಿಸಲಾಗುತ್ತಿತ್ತು. ಅದರಲ್ಲಿ ಹಝ್ರತ್ ಆಯಿಶ(ರ)ರ ಬಗ್ಗೆಗಿನ ಸುಳ್ಳಾರೋಪದ ಘಟನೆಯ ಪ್ರಸ್ತಾಪ ಸಹ ಇತ್ತು. ಈ ಕುರಿತು ಹಝ್ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ: ಭವಿಷ್ಯವಾಣಿಯಾಗಿ ವಾಗ್ದಾನ ಮಾಡಲಾಗುವ ಶಿಕ್ಷೆಯನ್ನು ಇಸ್ತಿಗ್ಫಾರ್, ಪ್ರಾರ್ಥನೆ ಮತ್ತು ಸದಖಗಳ ಕಾರಣದಿಂದ ದೂರ ಮಾಡುತ್ತಾನೆ ಎಂಬುದು ಅಲ್ಲಾಹನ ಸ್ವಭಾವಗುಣಗಳಲ್ಲಿ ಒಂದಾಗಿದೆ. ಅದೇ ರೀತಿಯಲ್ಲಿ ಮನುಷ್ಯನಿಗೆ ಅಲ್ಲಾಹನು ಇದೇ ಸ್ವಭಾವಗುಣವನ್ನು ಕಲಿಸಿಕೊಟ್ಟಿದ್ದಾನೆ. ಇದು ಪವಿತ್ರ ಖುರ್‌ಆನ್ ಮತ್ತು ಹದೀಸಿನಿಂದ ಸಾಬೀತಾಗುತ್ತಿದೆ. ಅದೇನೆಂದರೆ, ಹಝ್ರತ್ ಆಯಿಶ(ರ)ರ ಕುರಿತು ಕಪಟವಿಶ್ವಾಸಿಗಳು ಕೇವಲ ನೀಚತನದಿಂದ ತಪ್ಪಾದ ಸುಳ್ಳಾರೋಪವನ್ನು ಮಾಡಿದಾಗ ಅದನ್ನು ಹರಡುವುದರಲ್ಲಿ ಕೆಲವು ಸರಳ ಸ್ವಭಾವಿಗಳಾದ ಸಹಾಬಿಗಳು ಕೂಡ ಭಾಗಿಯಾಗಿದ್ದರು. ಹಝ್ರತ್ ಅಬೂಬಕರ್(ರ)ರ ಮನೆಯಿಂದ ಎರಡು ಹೊತ್ತಿನ ರೊಟ್ಟಿಯನ್ನು ತಿನ್ನುತ್ತಿದ್ದ ಒಬ್ಬ ಸಹಾಬಿ ಕೂಡ ಅವರಲ್ಲಿ ಇದ್ದರು. ಆ ಸಹಾಬಿಯ ತಪ್ಪಿಗೆ ಶಿಕ್ಷೆಯಾಗಿ ಅವರಿಗೆ ಎಂದಿಗೂ ರೊಟ್ಟಿ ಕೊಡುವುದಿಲ್ಲವೆಂದು ಹಝ್ರತ್ ಅಬೂಬಕರ್(ರ) ಅಲ್ಲಾಹನ ಹೆಸರಲ್ಲಿ ಆಣೆ ಹಾಕಿದರು ಮತ್ತು ಪ್ರತಿಜ್ಞೆ ಮಾಡಿದರು. ಆಗ ಈ ವಚನ ಅವತೀರ್ಣಗೊಂಡಿತ್ತು: **ವಲ್‌ಯಅ್‌ಫೂ ವಲ್‌ಯಸ್‌ಫಹೂ ಅಲಾ ತುಹಿಬ್ಬೂನ ಅನ್ ಯಗ್ಫಿರಲ್ಲಾಹು ಲಕುಮ್. ವಲ್ಲಾಹು ಗ಼ಫೂರುರ್‍ರಹೀಂ. (ಅನ್ನೂರ್: 23)** ಆಗ ಹಝ್ರತ್ ಅಬೂಬಕರ್(ರ) ತನ್ನ ಈ ಪ್ರತಿಜ್ಞೆಯನ್ನು ಮುರಿದರು ಮತ್ತು ಎಂದಿನಂತೆ ರೊಟ್ಟಿ ಕೊಡಲು ಆರಂಭಿಸಿದರು."

ಹಝ್ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ: "ಯಾರಾದರೂ ಯಾರಿಗಾದರೂ ಶಿಕ್ಷೆ ನೀಡುವುದಾಗಿ ಪ್ರತಿಜ್ಞೆ ಮಾಡಿದರೆ ಅದನ್ನು ಮುರಿಯುವುದು ಉತ್ತಮ ಸ್ವಭಾವಗುಣವಾಗಿದೆ. ಉದಾಹರಣೆಗೆ, ಖಂಡಿತವಾಗಿಯೂ ತನ್ನ ಸೇವಕನಿಗೆ ಐವತ್ತು ಚಪ್ಪಲಿಯೇಟು ಕೊಡುವೆನು ಎಂದು ಯಾರಾದರೂ ಆಣೆ ಹಾಕಿ ಪ್ರತಿಜ್ಞೆ ಮಾಡಿದರೆ, ನಂತರ ಸೇವಕನು ತಾನು ಮಾಡಿದ ತಪ್ಪಿಗಾಗಿ ಪಶ್ಚಾತ್ತಾಪ ಪಟ್ಟು ವಿನಮ್ರತೆ ತೋರಿಸಿದ ಕಾರಣದಿಂದ ಆತನನ್ನು ಕ್ಷಮಿಸುವುದು ಇಸ್ಲಾಮಿನ ರೀತಿಯಾಗಿದೆ. ಅದು ಅಲ್ಲಾಹನ ಗುಣವನ್ನು ತನ್ನೊಳಗೆ ರೂಢಿಸಿದಂತಾಗುವುದು. ಆದರೆ (ಶಿಕ್ಷೆಯ ವಾಗ್ದಾನವನ್ನು ಹೊರತುಪಡಿಸಿ) ಇತರ ವಾಗ್ದಾನಗಳ ಉಲ್ಲಂಘನೆ ಅನುಮತನೀಯವಲ್ಲ. ವಾಗ್ದಾನದ ಉಲ್ಲಂಘನೆ ಮಾಡಿದರೆ ಅಲ್ಲಾಹನು ಅದರ ಬಗ್ಗೆ ಪ್ರಶ್ನಿಸುವನು. ಆದರೆ ಶಿಕ್ಷೆಯ ವಾಗ್ದಾನವನ್ನು ಕೈಬಿಟ್ಟರೆ ಪ್ರಶ್ನೆಯಿಲ್ಲ." (ಝುಮೀಮ ಬರಾಹೀನೆ ಅಹ್ಮದಿಯಾ ಭಾಗ–5,

ರೂಹಾನಿ ಖಿಝಾಈನ್ ಸಂಪುಟ-21, ಪುಟ-181)

ಬುಖಾರಿಯ ವರದಿಯ ಆಧಾರದಲ್ಲಿ ಸುಳ್ಳಾರೋಪದ ಘಟನೆಯನ್ನು (ಇಫ್ಕ್) ವಿವರಿಸುತ್ತಾ ಹಝ್ರತ್ ಮಿರ್ಝಾ ಬಶೀರ್ ಅಹ್ಮದ್ ಸಾಹಿಬ್(ರ) ಸೀರತ್ ಖಾತಮುನ್ನಬಿಯ್ಯೀನ್‌ನಲ್ಲಿ ಹೀಗೆ ಬರೆಯುತ್ತಾರೆ: ಈ ವಿಷಯದಲ್ಲಿ ಈ ವರದಿ ಎಲ್ಲ ವರದಿಗಳಿಗಿಂತ ವಿಶದವೂ ಸ್ಪಷ್ಟವೂ ಆಗಿದೆ. ಈ ವರದಿಯಿಂದ ಹಝ್ರತ್ ಪೈಗಂಬರ್(ಸ)ರ ಕೌಟುಂಬಿಕ ಜೀವಿತದ ಬಗ್ಗೆ ಎಂತಹ ಬೆಳಕು ಬೀರುತ್ತಿದೆ ಎಂದರೆ ಅದನ್ನು ಯಾವನೇ ಚರಿತ್ರೆಗಾರನಿಗೆ ಕಡೆಗಣಿಸಲು ಸಾಧ್ಯವಲ್ಲ. ವಿಶ್ವಾಸಾರ್ಹತೆಯಲ್ಲೂ ಈ ವರದಿ ಎಷ್ಟು ಉನ್ನತ ಸ್ಥಾನದಲ್ಲಿ ಇದೆ ಎಂದರೆ, ಅದರ ಬಗ್ಗೆ ಸಂಶಯಕ್ಕೆ ಎಡೆಯಿದೆ ಎಂದು ಭಾವಿಸಲಾಗದು. ಇದು ಕಪಟವಿಶ್ವಾಸಿಗಳ ಕಡೆಯಿಂದ ಎಬ್ಬಿಸಲಾದ ಎಂತಹ ಅಪಾಯಕರವಾದ ಪಿತೂರಿಯಾಗಿತ್ತು ಎಂದು ಯೋಚಿಸಬೇಕಾಗಿದೆ. ಪರಿಶುದ್ಧರಾದ ಮತ್ತು ಅತ್ಯಂತ ಉನ್ನತ ಮಟ್ಟದ ಮುತ್ತಖಿಯಾದ ಓರ್ವ ಮಹಿಳೆಯ ಗೌರವಕ್ಕೆ ಕಳಂಕ ತರುವುದು ಮಾತ್ರ ಅದರ ಉದ್ದೇಶವಾಗಿರಲಿಲ್ಲ. ಬದಲಾಗಿ ನೇರವಾಗಿ ಇಸ್ಲಾಮಿನ ಸ್ಥಾಪಕರಾದ ಹಝ್ರತ್ ಪೈಗಂಬರ್(ಸ)ರ ಗೌರವಕ್ಕೆ ಧಕ್ಕೆ ಉಂಟುಮಾಡುವುದು ಮತ್ತು ಇಸ್ಲಾಮಿನ ಸಮಾಜದ ಮೇಲೆ ಒಂದು ಅಪಾಯಕಾರಿ ಭೂಕಂಪವನ್ನು ಉಂಟುಮಾಡುವುದು ಅದರ ಮುಖ್ಯ ಉದ್ದೇಶವಾಗಿತ್ತು. ಕಪಟವಿಶ್ವಾಸಿಗಳು ಈ ಕೊಳಕು ಮತ್ತು ನೀಚ ಅಪಪ್ರಚಾರವನ್ನು ಹೇಗೆ ಚರ್ಚಿಸಿದರು ಎಂದರೆ, ಕೆಲವು ಸರಳ ಸ್ವಭಾವಿಗಳಾದ ನೈಜ ಮುಸ್ಲಿಮರು ಕೂಡ ಈ ಮೋಸದ ಬಲೆಗೆ ಸಿಲುಕಿ ಎಡವಿ ಬಿದ್ದರು. ಅಂಥವರಲ್ಲಿ ಹಸ್ಸಾನ್ ಬಿನ್ ಸಾಬಿತ್(ರ), ಹಮ್ನ ಬಿನ್ತ್ ಜಹಶ್(ರ) ಮತ್ತು ಮಸ್‌ತಹ್ ಬಿನ್ ಅಸಾಸರ ಹೆಸರುಗಳು ವಿಶೇಷವಾಗಿ ಪ್ರಸ್ತಾಪಿಸಲಾಗಿದೆ. ಆದರೆ ಹಝ್ರತ್ ಆಯಿಶ(ರ)ರ ಶ್ರೇಷ್ಠ ಸ್ವಭಾವಗುಣವೇನೆಂದರೆ, ಅವರು ಅವರೆಲ್ಲರಿಗೂ ಕ್ಷಮೆ ನೀಡಿದರು. ಅವರ ಬಗ್ಗೆ ತನ್ನ ಮನಸ್ಸಿನಲ್ಲಿ ಯಾವುದೇ ರೀತಿಯ ಹಗೆಯನ್ನು ಇರಿಸಲಿಲ್ಲ. ಆದುದರಿಂದ ಹಸ್ಸಾನ್ ಬಿನ್ ಸಾಬಿತ್(ರ) ರವರು ಹಝ್ರತ್ ಆಯಿಶಾ(ರ) ಅವರನ್ನು ನೋಡಲು ಬಂದಾಗಲೆಲ್ಲಾ ಹರ್ಷಭರಿತ ಸ್ವಭಾವದೊಂದಿಗೆ ಅವರನ್ನು ಭೇಟಿಯಾಗುತ್ತಿದ್ದರು ಎಂಬ ವರದಿ ಇದೆ. ಒಮ್ಮೆ ಅವರು ಹಝ್ರತ್ ಆಯಿಶಾ(ರ) ಅವರ ಸೇವೆಗೆ ಹಾಜರಾದರು, ಆ ಸಮಯದಲ್ಲಿ ಮಸ್ರೂಕ್ ಎಂಬ ಮುಸ್ಲಿಂ ಕೂಡ ಅಲ್ಲಿದ್ದರು. ಮಸ್ರೂಕ್ ಆಶ್ಚರ್ಯಚಕಿತರಾಗಿ ಹೇಳಿದರು: ಓಹ್! ನೀವು ಹಸ್ಸಾನ್ ಅನ್ನು ನಿಮ್ಮ ಸೇವೆಗೆ ಹಾಜರಾಗಲು ಅನುಮತಿ ನೀಡುತ್ತೀರಿ! ಅದಕ್ಕೆ ಹಝ್ರತ್ ಆಯಿಶಾ(ರ) ಹೇಳಿದರು: "ಹೋಗಲಿ ಬಿಡಿ ಅವರು ಕಣ್ಣಿನ ತೊಂದರೆಯಿಂದ ಬಳಲುತ್ತಿದ್ದಾರೆ, ಅದೇನು ಕಡಿಮೆ ಶಿಕ್ಷೆಯಾಗಿದೆಯೇ?" ಅವರ ಕಣ್ಣುಗಳು ಅನಾರೋಗ್ಯದಿಂದ ಬಳಲುತ್ತಿತ್ತು. ಮತ್ತೆ ಹಝ್ರತ್ ಆಯಿಶಾ(ರ) ಹೇಳಿದರು, "ಹಸ್ಸಾನ್ ಅವರು ಹಝ್ರತ್ ಪೈಗಂಬರ್(ಸ) ಹಾಗೂ ಇಸ್ಲಾಮ್ ಧರ್ಮವನ್ನು ರನ್ನು ಬೆಂಬಲಿಸಿ ಅವಿಶ್ವಾಸಿಗಳ ವಿರುದ್ಧ ಕವನ ವಾಚನ ಮಾಡುತ್ತಿದ್ದುದನ್ನು ನಾನು ಮರೆಯಲಾರೆ."

ಹೀಗಾಗಿ, ಹಸ್ಸಾನರಿಗೆ ಅವಕಾಶ ನೀಡಲಾಯಿತು ಅವರು ಒಳಗೆ ಬಂದು ಕುಳಿತರು. ಮತ್ತು ಅವರು ಹಝ್ರತ್ ಆಯಿಶಾ(ರ) ಅವರನ್ನು ಹೊಗಳಿ ಈ ಕವಿತೆಯನ್ನು ಹೇಳಿದರು.

**ಹಸಾನುನ್ ರಝಾನುನ್ ಮಾ ತುಝನ್ನು ಬಿರೀಬತಿನ್**
**ವ ತುಸ್‌ಬಿಹು ಘರ್‌ಸಾ ಮಿನ್ ಲುಹೂಮಿಲ್ ಗ್‌ವಾಫಿಲಿ**

ಅಂದರೆ, "ಅವರು ಪರಿಶುದ್ಧ ಮಹಿಳೆಯಾಗಿದ್ದರು ಮತ್ತು ಬುದ್ಧಿವಂತಿಕೆ ಮತ್ತು ಜ್ಞಾನಿಯಾಗಿದ್ದರು, ಮತ್ತು ಅವರ ಸ್ಥಾನಮಾನವು ಅನುಮಾನಾಸ್ಪದದಿಂದ ಬಹಳ ದೂರವಾಗಿದೆ. ಮತ್ತು ಅವರು ಮುಗ್ಧ ಅಜಾಗರೂಕ ಮಹಿಳೆಯರ ಮಾಂಸವನ್ನು ತಿನ್ನುವುದಿಲ್ಲ, ಅಂದರೆ, ಅವರು ಅವರನ್ನು ದೂಷಿಸುವುದಿಲ್ಲ ಮತ್ತು ಅವರನ್ನು ಹಿಂದೆಯಿಂದ ನಿಂದಿಸುವುದಿಲ್ಲ. ಹಝ್ರತ್ ಆಯಿಶಾ(ರ) ಈ ಕವನವನ್ನು ಆಲಿಸಿದ ನಂತರ ಹೇಳಿದರು **ವಲಾಕಿನ್ ಅನ್ತ** (ಆದರೆ ನೀನು). ಮತ್ತೊಂದು ವರದಿಯಲ್ಲಿ **ವಲಸ್ತ ಕಝಾಲಿಕ** ಎಂದು ಹೇಳಲಾಗಿದೆ. ಅಂದರೆ, "ನಿನ್ನ ಪರಿಸ್ಥಿತಿ ಏನು? ನೀವು ಈ ಗುಣದ ಮಾಲೀಕ ಎಂದು ಸಾಬೀತುಪಡಿಸಲಿಲ್ಲ. ಹಝ್ರತ್ ಮಿರ್ಝಾ ಬಶೀರ್ ಅಹ್ಮದ್ ಸಾಹಿಬ್(ರ) ಬರೆಯುತ್ತಾರೆ: "ಮಿಯೂರ್ ಸಾಹಿಬ್" ಇವರ ಒಬ್ಬ ಓರಿಯಂಟಲಿಸ್ಟ್ ಆಗಿದ್ದಾರೆ. ಇದನ್ನು ಉಲ್ಲೇಖಿಸಿ ಬರೆಯುತ್ತಾರೆ, "ಮಿಯೂರ್ ಸಾಹಿಬ್ ರ ಅರೇಬಿ ಭಾಷೆಯ ತಿಳುವಳಿಕೆ ಅಥವಾ ಪಕ್ಷಪಾತದ ಜ್ಞಾನದ ಉದಾಹರಣೆಯನ್ನು ನೋಡಿ, ಹಸ್ಸಾನ್‌ನ ಈ ಕವಿತೆಯನ್ನು ಸಂಪೂರ್ಣವಾಗಿ ತಪ್ಪಾಗಿ ಮತ್ತು ಅರೇಬಿಕ್ ನಿಯಮಗಳಿಗೆ ವಿರುದ್ಧವಾಗಿ ಅರ್ಥೈಸುವ ಮೂಲಕ ಹಸ್ಸಾನ್, ಆಯಿಶಾ(ರ) ಅವರ ಸೂಕ್ಷ್ಮ ದೇಹವನ್ನು ಹೊಗಳಿದ್ದಕ್ಕೆ ಆಯಿಶಾ(ರ) ಮನರಂಜನೆಯಿಂದ ಆತನ ಸ್ಥೂಲಕಾಯಕ್ಕೆ ಅಪಹಾಸ್ಯ ಮಾಡುತ್ತಾರೆ ಎಂದು ಬರೆದಿದ್ದಾನೆ."

ಅವರು(ರ) ಬರೆಯುತ್ತಾರೆ: "... ಮಿಯೂರ್ ಸಾಹಿಬ್ ಈ ಘಟನೆಯನ್ನು ನಿರೂಪಿಸುವಲ್ಲಿ ಇತರ ಸ್ಪಷ್ಟ ತಪ್ಪುಗಳನ್ನು ಮಾಡಿದ್ದಾರೆ. ಉದಾಹರಣೆಗೆ, ಸಫ್ವಾನ್(ರ) ಮತ್ತು ಆಯಿಶಾ(ರ) ಅವರು ದಾರಿಯಲ್ಲಿ ಸೈನ್ಯವನ್ನು ತಲುಪಲು ಸಾಧ್ಯವಾಗಲಿಲ್ಲ ಮತ್ತು ನಂತರ ಸಾರ್ವಜನಿಕವಾಗಿ ಮದೀನಾವನ್ನು ಪ್ರವೇಶಿಸಿದರು ಎಂದು ಅವರು ಬರೆಯುತ್ತಾರೆ. ಆದಾಗ್ಯೂ, ಈ ವಿಷಯವು ಸಂಪೂರ್ಣವಾಗಿ ತಪ್ಪು ಮತ್ತು ಸಂಪೂರ್ಣವಾಗಿ ಆಧಾರರಹಿತವಾಗಿದೆ ಏಕೆಂದರೆ ಇದು ಹದೀಸ್ ಮತ್ತು ಇತಿಹಾಸದಿಂದ ಸರ್ವಾನುಮತದಿಂದ ಸಾಬೀತಾಗಿದೆ, ದಾರಿಯಲ್ಲಿ ಕೆಲವು ಗಂಟೆಗಳ ನಂತರ ಸಫ್ವಾನ್ ಮತ್ತು ಹಝ್ರತ್ ಆಯಿಶಾ(ರ) ಇಸ್ಲಾಮಿನ ಸೈನ್ಯಕ್ಕೆ ಸೇರಿದರು." ಅವರು ಮುಂದೆ ಬರೆಯುತ್ತಾರೆ: "ಆದರೆ ಮಿಯೂರ್ ಸಾಹಿಬ್ ಅವರು ಮೂಲ ಆರೋಪಕ್ಕೆ ಸಂಬಂಧಿಸಿದಂತೆ ಹಝ್ರತ್ ಆಯಿಶಾ(ರ) ಅವರು ನಿರಪರಾಧಿ ಎಂದು ಒಪ್ಪಿಕೊಂಡಿದ್ದಾರೆ. ಹೀಗಾಗಿ, ಅವರು ಬರೆಯುತ್ತಾರೆ: "ಆಯಿಶಾ(ರ) ಅವರ ಮುಂಚೆಯ ಜೀವನ ಹಾಗೂ ನಂತರದ ಜೀವನವು ಈ ಆರೋಪದಿಂದ ಖುಲಾಸೆಗೊಂಡಿತು." ಈ ಆರೋಪವು ಬೌದ್ಧಿಕವಾಗಿ ಹಾಗೂ ಸಾಕ್ಷ್ಯಾಧಾರವಾಗಿ ಸಂಪೂರ್ಣವಾಗಿ ಸುಳ್ಳು ಮತ್ತು ತಪ್ಪು ಎಂದು ಘೋಷಿಸಬಹುದು ಏಕೆಂದರೆ ಹಝ್ರತ್ ಆಯಿಶಾ(ರ) ಇಸ್ಲಾಮಿನ ಸೈನ್ಯದ ಹಿಂದೆ ಉಳಿದುಕೊಂಡರು ಮತ್ತು ನಂತರ ಸಫ್ವಾನ್ ಬಿನ್ ಮುಅತ್ತಮ್ ಅವರೊಂದಿಗೆ ಬಂದರು ಎಂಬ ಸಂಪೂರ್ಣ ಕಾಕತಾಳೀಯ ಘಟನೆಯನ್ನು ಹೊರತುಪಡಿಸಿ, ಆರೋಪಿಗಳ ಕೈಯಲ್ಲಿ ಸಂಪೂರ್ಣವಾಗಿ ಏನೂ ಇರಲಿಲ್ಲ. ಅಂದರೆ, ಯಾವುದೇ ಸಾಕ್ಷ್ಯ ಮತ್ತು ಯಾವುದೇ ಪುರಾವೆ ಇರಲಿಲ್ಲ, ಮತ್ತು ಆರೋಪ ಸಾಬೀತಾಗದ ಹೊರತು ಅದು ನಿಜವೆಂದು ಪರಿಗಣಿಸಲಾಗುವುದಿಲ್ಲ ಎಂಬುದು ಸ್ಪಷ್ಟವಾಗಿದೆ. ವಿಶೇಷವಾಗಿ ಅವರ ಜೀವನವು ಅವರ ಶುದ್ಧತೆಗೆ ಸಾಕ್ಷಿಯಾಗಿದೆ, ಆದರೆ ಮುಸ್ಲಿಮರ ಮತ್ತಷ್ಟು ತೃಪ್ತಿಗಾಗಿ ಮತ್ತು ಭವಿಷ್ಯದಲ್ಲಿ ಅಂತಹ ವಿಷಯಗಳಲ್ಲಿ ತತ್ವಬದ್ಧ ಆಡಳಿತವನ್ನು ಸ್ಥಾಪಿಸುವ ಉದ್ದೇಶಕ್ಕಾಗಿ, ದೈವವಾಣಿ ಅವತೀರ್ಣವಾಯಿತು, ಆ ದೈವವಾಣಿಯು ಈ ಸುಳ್ಳು ಆರೋಪವನ್ನು ಖಂಡಿಸಿ ಹಝ್ರತ್ ಆಯಿಶಾ(ರ) ಮತ್ತು ಸಫ್ವಾನ್ ಬಿನ್ ಮುಅತ್ತಲ್(ರ) ಅವರನ್ನು ನಿರಪರಾಧಿ ಎಂದು ಘೋಷಿಸಲಾಯಿತು. ಮತ್ತು ಭವಿಷ್ಯಕ್ಕಾಗಿ, ಈ ರೀತಿಯ ಘಟನೆಗಳ ಬಗ್ಗೆ ಎಂತಹ ತತ್ವಬದ್ಧ ಕಾನೂನನ್ನು ಜಗತ್ತಿಗೆ ಪ್ರಸ್ತುತಪಡಿಸಲಾಯಿತು ಎಂದರೆ ಅದರ ಮೇಲೆ ವ್ಯಕ್ತಿಗಳ ಗೌರವ ಮತ್ತು ಘನತೆ, ಸಮಾಜದ ಶಾಂತಿ ಮತ್ತು ಸುವ್ಯವಸ್ಥೆ ಮತ್ತು ರಾಷ್ಟ್ರದ ನೈತಿಕತೆಯ ಸುರಕ್ಷತೆ ಅವಲಂಬಿತವಾಗಿದೆ." (ಸೀರತ್ ಖಾತಮುನ್ನಬಿಯೀನ್(ಸ), ಪುಟ-567,568)

ಈ ಸುಳ್ಳಾರೋಪವನ್ನು ಹೊರಿಸುವುದಕ್ಕೆ ಕಾರಣವನ್ನು ಪ್ರಸ್ತಾಪಿಸುತ್ತಾ ಹಝ್ರತ್ ಮುಸ್ಲಿಹ್ ಮೌಊದ್(ರ) ಹೇಳುತ್ತಾರೆ:

ಹಝ್ರತ್ ಆಯಿಶಾ(ರ.ಅ) ವಿರುದ್ಧ ಮಾಡಿದ ಆರೋಪದ ನಿಜವಾದ ಉದ್ದೇಶವೇನು ಎಂಬುದನ್ನು ನಾವು ನೋಡಬೇಕು. ಈ ಜನರು ಹಝ್ರತ್ ಆಯಿಶಾ(ರ) ಅವರೊಂದಿಗೆ ಯಾವುದೇ ದ್ವೇಷವನ್ನು ಹೊಂದಿದ್ದರು ಎಂಬುದು ಇದಕ್ಕೆ ಕಾರಣವಾಗಿರಬಾರದು. ರಾಜಕೀಯಕ್ಕೂ, ನ್ಯಾಯಕ್ಕೂ, ಹುದ್ದೆಗಳಿಗೂ, ಸಂಪತ್ತಿನ ಹಂಚಿಕೆಗೂ, ಕದನಗಳಿಗೂ, ವಿರೋಧಿ ರಾಷ್ಟ್ರಗಳ ಪ್ರಚಾರಕ್ಕೂ, ಸರ್ಕಾರಕ್ಕೂ, ಅರ್ಥಶಾಸ್ತ್ರಕ್ಕೂ ಸಂಬಂಧವೇ ಇಲ್ಲದ ಮನೆಯಲ್ಲಿ ಕುಳಿತಿರುವ ಮಹಿಳೆಯಿಂದ ಯಾರಿಗೆ ಏನು ದ್ವೇಷವಿದೆ." ಈ ವಿಷಯಗಳೊಂದಿಗೆ ಯಾವುದೇ ಸಂಬಂಧವಿಲ್ಲದಿದ್ದಾಗ. "ಒಟ್ಟಿನಲ್ಲಿ ಹಝ್ರತ್ ಆಯಿಷಾ(ರ) ಅವರೊಂದಿಗೆ ನೇರವಾಗಿ ದ್ವೇಷಿಸಲು ಯಾವುದೇ ಕಾರಣವಿರಲಿಲ್ಲ. ಈ ಆರೋಪಕ್ಕೆ ಎರಡೇ ಸಾಧ್ಯತೆಗಳಿವೆ. ಒಂದೋ ಈ ಆರೋಪ ಸತ್ಯವಾಗಿರಬೇಕು ನೌಝುಬಿಲ್ಲಾಹ್. ಆದರೆ ವಿಶೇಷವಾಗಿಯೂ ಅಲ್ಲಾಹನು ಈ ಕೊಳಕು ಯೋಚನೆಯನ್ನು ನಿರಾಕರಿಸಿರುವ ಸ್ಥಿತಿಯಲ್ಲಿ ಅದನ್ನು ಯಾವನೇ ಸತ್ಯವಿಶ್ವಾಸಿ ಒಪ್ಪಲಾರನು. ಎರಡನೇ ಸಾಧ್ಯತೆ ಏನೆಂದರೆ ಈ ಆರೋಪವನ್ನು ಹಝ್ರತ್ ಪೈಗಂಬರ್(ಸ) ಮತ್ತು ಹಝ್ರತ್ ಅಬೂಬಕರ್(ರ)ರಿಗೆ ನಷ್ಟ ಉಂಟುಮಾಡಲಿಕ್ಕಾಗಿ ಹೊರಿಸಿರಬೇಕು. ಏಕೆಂದರೆ ಹಝ್ರತ್ ಆಯಿಶ(ರ) ಹಝ್ರತ್ ಪೈಗಂಬರ್(ಸ)ರ ಪತ್ನಿಯೂ ಹಝ್ರತ್ ಅಬೂಬಕರ್(ರ)ರ ಪುತ್ರಿಯೂ ಆಗಿದ್ದರು. ಅವರಿಬ್ಬರಿಗೆ ಕೆಟ್ಟ ಹೆಸರು ತಂದು ಹಗೆತನವನ್ನು ವರ್ಧಿಸುವುದರಿಂದ ರಾಜಕೀಯವಾಗಿ ಕೆಲವರಿಗೆ ಪ್ರಯೋಜನವಿತ್ತು. ಅಥವಾ ಕೆಲವು ಜನರ ಉದ್ದೇಶಗಳು ಅವರನ್ನು ಮಾನನಷ್ಟಗೊಳಿಸುವುದರೊಂದಿಗೆ ಸಂಬಂಧಿಸಿವೆ. ಇಲ್ಲದಿದ್ದರೆ, ಹಝ್ರತ್ ಆಯಿಷಾ(ರ) ಅವರ ಅಪಖ್ಯಾತಿಯ ಬಗ್ಗೆ ಯಾರಿಗೂ ಆಸಕ್ತಿ ಇರಲಿಲ್ಲ. ಹೆಚ್ಚೆಂದರೆ ನೀವು ಸವತಿಗಳಿಗೆ ಸಂಬಂಧಿಸಿರಬಹುದು." ಪ್ರಾಯಶಃ ಹಝ್ರತ್ ಆಯಿಷಾ(ರ) ಅವರನ್ನು ಹಝ್ರತ್ ಪೈಗಂಬರ್(ಸ)ರವರ ದೃಷ್ಟಿಯಲ್ಲಿ ನಾಶಪಡಿಸಲು ಮತ್ತು ಅವರ(ಸ) ಒಳಿತನ್ನು ಬಯಸಲು

ಹಝ್ರತ್ ಆಯಿಷಾ(ರ) ಅವರ ಸವತೀಯರು ಈ ವಿಷಯದಲ್ಲಿ ಭಾಗಿಯಾಗಿರಬಹುದು ಎಂದು ಭಾವಿಸಬಹುದಿತ್ತು. ಆದರೆ ಹಝ್ರತ್ ಆಯಿಷಾ(ರ) ಅವರ ಸವತಿಯರು ಈ ವಿಷಯದಲ್ಲಿ ಯಾವುದೇ ಪಾಲ್ಗೊಳ್ಳಲಿಲ್ಲ ಎಂಬುದಕ್ಕೆ ಇತಿಹಾಸವು ಸಾಕ್ಷಿಯಾಗಿದೆ, ಬದಲಾಗಿ ಹಝ್ರತ್ ಆಯಿಷಾ(ರ) ಅವರ ಸ್ವಂತ ಹೇಳಿಕೆ ಏನೆಂದರೆ ನಾನು ಹಝ್ರತ್ ಪೈಗಂಬರ್(ಸ) ಅವರ ಪತ್ನಿಯರಲ್ಲಿ ನನ್ನ ಎದುರಾಳಿ ಮತ್ತು ಪ್ರತಿಸ್ಪರ್ಧಿ ಎಂದು ಪರಿಗಣಿಸಿದ ಪತ್ನಿ ಹಝ್ರತ್ ಝೈನಬ್ ಬಿಂತ್ ಜಹ್ಶ್(ರ) ಆಗಿದ್ದರು. ಅವರನ್ನು ಹೊರುಪಡಿಸಿ ಯಾವ ಪತ್ನಿಯನ್ನೂ ನನ್ನ ಪ್ರತಿಸ್ಪರ್ಧಿ ಎಂದು ನಾನು ಪರಿಗಣಿಸಲಿಲ್ಲ ಏಕೆಂದರೆ ಅವರು ಹೆಚ್ಚು ಮಾತನಾಡುತ್ತಿದ್ದರು. "ಆದರೆ ಹಝ್ರತ್ ಆಯಿಷಾ(ರ) ಹೇಳುತ್ತಾರೆ: ನನ್ನ ವಿರುದ್ಧ ಆರೋಪ ಬಂದಾಗ ಎಲ್ಲರಿಗಿಂತ ಹೆಚ್ಚು ತೀವ್ರವಾಗಿ ಖಂಡಿಸಿದವರು ಹಝ್ರತ್ ಝೈನಬ್(ರ) ಆಗಿದ್ದರು ಅದಕ್ಕಾಗಿ ನಾನು ಅವರ ಈ ದಯೆಯನ್ನು ಎಂದಿಗೂ ಮರೆಯಲಾರೆ. (ಅಸ್ಸೀರತುಲ್ ಹಲಬೀಯಾ ಗಝ್ವಃ ಬನೀ ಮುಸ್ತಲಖ್). ಒಟ್ಟಿನಲ್ಲಿ ಯಾರಾದರೂ ಹಝ್ರತ್ ಆಯಿಶಾ(ರ) ಅವರೊಂದಿಗೆ ದ್ವೇಷ ಸಾಧಿಸಬಹುದಾದರೆ, ಅದು ಅವರ ಸವತಿಗಳಲ್ಲಿ ಯಾರಾದರೂ ಆಗಿರಬಹುದಾಗಿತ್ತು. ಹೀಗೆ ಅವರು ಬಯಸುತ್ತಿದ್ದರೆ, ಹಝ್ರತ್ ಆಯಿಷಾ(ರ) ಹಝ್ರತ್ ಪೈಗಂಬರ್(ಸ) ರವರ ದೃಷ್ಟಿಯಲ್ಲಿ ಬೀಳುವಂತೆ ಮತ್ತು ಅವರ ಗೌರವವನ್ನು ಹೆಚ್ಚಿಸುವಂತೆ ಅವರು ಅದರಲ್ಲಿ ಭಾಗವಹಿಸಬಹುದಿತ್ತು. ಆದರೆ ಅವರು ಈ ವಿಷಯದಲ್ಲಿ ಹಸ್ತಕ್ಷೇಪ ಮಾಡಲಿಲ್ಲ ಎಂಬುದು ಇತಿಹಾಸದಿಂದ ಸಾಬೀತಾಗಿದೆ. ಮತ್ತು ಯಾರನ್ನಾದರೂ ಕೇಳಿದರೆ, "ಅಂದರೆ, ಈ ಸವತಿಯರಲ್ಲಿ ಒಬ್ಬರು ಅಥವಾ ಇತರ ಯಾವುದೇ ಪತ್ನಿಯರಿಗೂ ಕೇಳಲಾಯಿತು" ಎಲ್ಲರು ಹಝ್ರತ್ ಆಯಿಷಾ(ರ) ಅವರನ್ನು ಹೊಗಳಿದರು. ಹೀಗೆ, ಮಹಿಳೆಯರೊಂದಿಗೆ ದ್ವೇಷ ಸಾಧಿಸಲು ಪುರುಷರಲ್ಲಿ ಯಾವುದೇ ಕಾರಣವಿರುವುದಿಲ್ಲ. ಆದ್ದರಿಂದ ಹಝ್ರತ್ ಪೈಗಂಬರ್(ಸ.ಅ) ರ ಮೇಲಿನ ದುರುದ್ದೇಶದಿಂದ ಅಥವಾ ಹಝ್ರತ್ ಅಬೂಬಕರ್ ಸಿದ್ದೀಕ್(ರ) ಅವರ ಮೇಲಿನ ದುರುದ್ದೇಶದಿಂದ ನಿಮ್ಮ(ರ) ವಿರುದ್ಧ ಆರೋಪ ಮಾಡಲಾಗಿದೆ. ಹಝ್ರತ್ ಪೈಗಂಬರ್(ಸ)ರಿಗೆ ಇದ್ದ ಸ್ಥಾನವನ್ನು ಯಾವುದೇ ರೀತಿಯಲ್ಲಿ ಕಸಿದುಕೊಳ್ಳಲು ಆರೋಪ ಹೊರಿಸುವವರಿಗೆ ಸಾಧ್ಯವಿರಲಿಲ್ಲ. ಹಝ್ರತ್ ಪೈಗಂಬರ್(ಸ)ರ ನಿಧನದ ನಂತರ ಕೂಡ ತಮ್ಮ ಉದ್ದೇಶವನ್ನು ಈಡೇರಿಸಲು ಸಾಧ್ಯವಾಗದೇ ಬರಬಹುದೇ ಎಂಬ ಭಯ ಕಪಟವಿಶ್ವಾಸಿಗಳಿಗೆ ಇತ್ತು. ಹಝ್ರತ್ ಪೈಗಂಬರ್(ಸ)ರ ನಂತರ ಖಲೀಫರಾಗಲು ಯೋಗ್ಯ ವ್ಯಕ್ತಿ ಅಬೂಬಕರ್(ರ) ಮಾತ್ರವಾಗಿದ್ದರು ಎಂದು ಅವರಿಗೆ ಗೊತ್ತಿತ್ತು. ಆದ್ದರಿಂದ ಅದನ್ನು ತಪ್ಪಿಸಲು ಹಝ್ರತ್ ಪೈಗಂಬರ್(ಸ)ರ ಮುಂದೆ ಹಝ್ರತ್ ಆಯಿಶ(ರ)ರ ಸ್ಥಾನವನ್ನು ಕಡಿಮೆಗೊಳಿಸಲಿಕ್ಕಾಗಿ ಕಪಟವಿಶ್ವಾಸಿಗಳು ಹಝ್ರತ್ ಆಯಿಶ(ರ)ರ ಮೇಲೆ ಆರೋಪ ಹೊರಿಸಿದರು. ಈ ಕಾರಣದಿಂದ ಹಝ್ರತ್ ಅಬೂಬಕರ್(ರ)ರಿಗೆ ಮುಸ್ಲಿಮರ ನಡುವೆ ಇದ್ದ ಸ್ಥಾನ ಸಹ ಕಡಿಮೆಯಾಗುತ್ತಾ ಹೋಗಿ ಹಝ್ರತ್ ಪೈಗಂಬರ್(ಸ)ರ ನಂತರ ಹಝ್ರತ್ ಅಬೂಬಕರ್(ರ) ಖಲೀಫರಾಗುವ ಸಾಧ್ಯತೆಯ ಬಾಗಿಲು ಪೂರ್ಣವಾಗಿ ಮುಚ್ಚಲ್ಪಡಲಿ ಎಂಬ ಉದ್ದೇಶವನ್ನು ಅವರು ಹೊಂದಿದ್ದರು. ಪವಿತ್ರ ಖುರ್ಆನ್‌ನಲ್ಲಿ, ಸೂರತ್ ಅನ್ನೂರ್‌ನಲ್ಲಿ ಹಝ್ರತ್ ಆಯಿಷಾ(ರಧಿಯಲ್ಲಾಹು ಅನ್ಹಾ) ಅವರನ್ನು ಆರೋಪಿಸಿದ ಘಟನೆಯ ನಂತರ ಸರ್ವಶಕ್ತನಾದ ಅಲ್ಲಾಹನು ಖಿಲಾಫತ್ ಅನ್ನು ಉಲ್ಲೇಖಿಸಲು ಇದು ಕಾರಣವಾಗಿದೆ.

"ಸಹಾಬಿಗಳು ಪರಸ್ಪರ ಮಾತನಾಡಿಕೊಳ್ಳುತ್ತಿದ್ದರು ಮತ್ತು ಹಝ್ರತ್ ಪೈಗಂಬರ್(ಸ) ಅವರ ನಂತರ ಯಾರಿಗಾದರೂ ಸ್ಥಾನವಿದ್ದರೆ ಅದು ಅಬೂಬಕರ್(ರ) ಅವರ ಸ್ಥಾನ ಎಂದು ಹದೀಸ್‌ಗಳಲ್ಲಿ ಸ್ಪಷ್ಟವಾಗಿ ಉಲ್ಲೇಖಿಸಲಾಗಿದೆ." (ಅಬು ದಾವುದ್ ಕಿತಾಬ್ ಸುನ್ನಹ್ ಅಧ್ಯಾಯ ಫಿ ಅಲ್-ತಫ್ಜಿಲ್)

ಹಝ್ರತ್ ಪೈಗಂಬರ್(ಸ)ರು ಒಮ್ಮೆ ಹಝ್ರತ್ ಆಯಿಷಾ(ರ) ಅವರಿಗೆ ಹೀಗೆ ಹೇಳಿದರು: ಓ ಆಯಿಷಾ(ರ)! ನನ್ನ ನಂತರ ನಾನು ಅಬೂಬಕರ್ ಅವರನ್ನು ನಾಮನಿರ್ದೇಶನ ಮಾಡಲು ಬಯಸಿದ್ದೆ, ಆದರೆ ಸರ್ವಶಕ್ತನಾದ ಅಲ್ಲಾಹನು ಮತ್ತು ಸತ್ಯವಿಶ್ವಾಸಿಗಳು ಅವರನ್ನು ಹೊರತುಪಡಿಸಿ ಬೇರೆ ಯಾರನ್ನೂ ಮೆಚ್ಚುವುದಿಲ್ಲ ಎಂದು ನನಗೆ ತಿಳಿದಿದೆ, ಆದ್ದರಿಂದ ನಾನು ಏನನ್ನೂ ಹೇಳುವುದಿಲ್ಲ ಎಂದು ಹದೀಸ್‌ಗಳಲ್ಲಿ ಉಲ್ಲೇಖಿಸಲಾಗಿದೆ. (ಮುಸ್ಲಿಮ್, ಕಿತಾಬ್ ಫಝಾಎಲುಸ್ಸಹಾಬ, ಬಾಬ್ ಮಿನ್ ಫಝಾಎಲ್ ಅಬೀ ಬಕರ್(ರ)) ಅಂದರೆ ಹಝ್ರತ್ ಅಬೂಬಕರ್(ರ) ಅವರನ್ನೆ ಆಯ್ದುಕೊಳ್ಳುತ್ತಾರೆ.

"ಆದ್ದರಿಂದ, ಹಝ್ರತ್ ಪೈಗಂಬರ್(ಸ) ಅವರ ನಂತರ ಯಾರಿಗಾದರೂ ಸ್ಥಾನಮಾನವಿದ್ದರೆ ಅದು ಅಬೂಬಕರ್‌ಗೆ ಮಾತ್ರ ಮತ್ತು ಅವರೇ ಖಲೀಫರಾಗಲು ಅರ್ಹರು ಎಂದು ಸಹಾಬಿಗಳು ನಂಬಿದ್ದರು.

ಮಕ್ಕಾದ ಜೀವನವು ಸರ್ಕಾರ ಮತ್ತು ಅದರ ವ್ಯವಸ್ಥೆಯ ಪ್ರಶ್ನೆಯೇ ಇಲ್ಲದಂತಾಗಿತ್ತು. ಆದರೆ ಹಝ್ರತ್ ಪೈಗಂಬರ್(ಸ.ಅ) ಅವರು ಮದೀನಾಗೆ ಬಂದ ನಂತರ, ಸರ್ಕಾರ ಸ್ಥಾಪನೆಯಾಯಿತು ಮತ್ತು ಅವರ ನಂತರ ಇಸ್ಲಾಮಿನ ವ್ಯವಸ್ಥೆಯು ಖಲೀಫರಾಗಿ ದೀರ್ಘಕಾಲ ಉಳಿಯಬಾರದು ಮತ್ತು ನಾವು ಶಾಶ್ವತವಾಗಿ ನಾಶವಾಗಬಾರದು ಎಂಬ ಪ್ರಶ್ನೆ ಕಪಟವಿಶ್ವಾಸಿಗಳ ಮನಸ್ಸಿನಲ್ಲಿ ಉದ್ಭವಿಸಿತು. "ವಿರೋಧಿಸಿದವರು ಯೋಚಿಸಿದರು, ಏಕೆಂದರೆ ಹಝ್ರತ್ ಪೈಗಂಬರ್(ಸ) ಅವರು ಮದೀನಾಗೆ ಆಗಮಿಸಿದ್ದರಿಂದ ಅವರ ಅನೇಕ ಭರವಸೆಗಳು ಅನೂರ್ಜಿತವಾಗಿತ್ತು. ಚರಿತ್ರೆಯಿಂದ ತಿಳಿದುಬರುವುದೇನೆಂದರೆ, ಮದೀನದಲ್ಲಿ ಅರೇಬಿಯದ ಎರಡು ಗೋತ್ರಗಳಾದ ಔಸ್ ಮತ್ತು ಖಝ್ರಜ್ ಪರಸ್ಪರ ಜಗಳ ಮತ್ತು ರಕ್ತಪಾತದ ಮಾರುಕಟ್ಟೆ ಬಿಸಿಯಾಗಿತ್ತು. ಈ ಹೋರಾಟದ ಫಲವಾಗಿ ನಮ್ಮ ಗೋತ್ರದ ಜನಾಂಗದವರ ಭಯ ಮಾಯವಾದುದನ್ನು ಕಂಡ ಅವರು ತಮ್ಮ ತಮ್ಮಲ್ಲೇ ಮೈತ್ರಿ ಸಂಧಾನ ಮಾಡಿಕೊಳ್ಳುವಂತೆ ಪ್ರಸ್ತಾಪಿಸಿ ಒಬ್ಬರನ್ನೊಬ್ಬರು ಒಗ್ಗೂಡಿ ಒಬ್ಬನನ್ನು ಅರಸನನ್ನಾಗಿ ಮಾಡೋಣ ಎಂದು ಘೋಷಿಸಿ ಅಬ್ದುಲ್ಲಾ ಬಿನ್ ಸುಲೂಲ್‌ನನ್ನು ಮದೀನಾದ ಅರನನ್ನಾಗಿ ಮಾಡಬೇಕು ಎಂದು ತೀರ್ಮಾನಿಸಲಾಯಿತು. ಈ ನಿರ್ಧಾರದ ನಂತರ, ಅವರು ಸಿದ್ಧತೆಗಳನ್ನು ಪ್ರಾರಂಭಿಸಿದರು ಮತ್ತು ಅಬ್ದುಲ್ಲಾ ಬಿನ್ ಅಬಿ ಬಿನ್ ಸಲೂಲ್‌ಗೆ ಕಿರೀಟ ಸಿದ್ಧಗೊಳಿಸಲು ಆದೇಶಗಳನ್ನು ನೀಡಲಾಯಿತು. ಈ ಮಧ್ಯೆ, ಮದೀನದ ಕೆಲವು ಹಾಜಿಗಳು ಮಕ್ಕಾದಿಂದ ಹಿಂತಿರುಗಿ ಹೇಳಿದರು: ಅಂತಿಮ ಕಾಲದ ಪ್ರವಾದಿಯು ಮಕ್ಕಾದಲ್ಲಿ ಪ್ರಕಟಗೊಂಡಿದ್ದಾರೆ ಆದ್ದರಿಂದ ನಾವು ಅವರ ಬೈಅತ್ ಮಾಡಿಬಂದಿರುವೆವು. ಹೀಗೆ ಹಝ್ರತ್ ಪೈಗಂಬರ್(ಸ) ಅವರ ವಾದದ ಬಗ್ಗೆ ವಟಗುಟ್ಟುವಿಕೆ ಪ್ರಾರಂಭವಾಯಿತು ಮತ್ತು ಕೆಲವು ದಿನಗಳ ನಂತರ, ಇತರ ಜನರು ಸಹ ಮಕ್ಕಾಗೆ ಹೋಗಿ ಹಝ್ರತ್ ಪೈಗಂಬರ್(ಸ) ಅವರ ಬೈಅತ್ ಮಾಡಿದರು. ಮತ್ತು ಅವರು ಹಝ್ರತ್ ಪೈಗಂಬರ್(ಸ) ಅವರಲ್ಲಿ ನಮ್ಮ ತರಬೇತಿ ಮತ್ತು ತಬ್ಲೀಗ್‌ಗಾಗಿ ನಮ್ಮೊಂದಿಗೆ ಓರ್ವ ಮುಅಲ್ಲಿಮ್‌ನನ್ನು ಕಳುಹಿಸಲು ವಿನಂತಿಸಿಕೊಂಡರು. ಆದ್ದರಿಂದ ಹಝ್ರತ್ ಪೈಗಂಬರ್(ಸ)ರು ಓರ್ವ ಸಹಾಬಿಯನ್ನು ಬೋಧಕರಾಗಿ ಕಳುಹಿಸಿದರು ಮತ್ತು ಮದೀನಾದ ಅನೇಕ ಜನರು ಇಸ್ಲಾಂಗೆ ಮತಾಂತರಗೊಂಡರು. ಆ ದಿನಗಳಲ್ಲಿ, ಹಝ್ರತ್ ಪೈಗಂಬರ್(ಸ) ಮತ್ತು ಅವರ ಸಹಾಬಗಳು ಮಕ್ಕಾದಲ್ಲಿ ಬಹಳಷ್ಟು ತೊಂದರೆಗಳನ್ನು ಅನುಭವಿಸುತ್ತಿದ್ದರಿಂದ ಮದೀನಾದ ಜನರು ಅವರನ್ನು ಮದೀನಾಗೆ ವಲಸೆ ಬರುವಂತೆ ವಿನಂತಿಸಿದರು. ಆದ್ದರಿಂದ ಹಝ್ರತ್ ಪೈಗಂಬರ್(ಸ)ರು ತಮ್ಮ ಸಹಾಬರೊಂದಿಗೆ ಮದೀನಾಗೆ ವಲಸೆ ಹೋದರು. (ಅಸ್ಸೀರತುನ್ನಬವೀಯ ಲಿಇಬ್ನೆ ಹಿಶಾಮ್, ನಬಝು ಮಿನ್ ಝುಕರಿಲ್ ಮುನಾಫಿಖೀನ ವ ಬದಅಲ್ ಇಸ್ಲಾಮಿಲ್ ಅನ್ಸಾರಿಲ್ ಉಖಬತಿಲ್ ಊಲಾ) ಮತ್ತು ಅಬ್ದುಲ್ಲಾ ಇಬ್ನ್ ಅಬಿ ಇಬ್ನ್ ಸಲೂಲ್ ಗಾಗಿ ಸಿದ್ಧಪಡಿಸಲಾಗುತ್ತಿದ್ದ ಕಿರೀಟವು ಅಲ್ಲಿಯೇ ಉಳಿಯಿತು ಏಕೆಂದರೆ ಅವರಿಗೆ" ಅಂದರೆ, ಮದೀನಾದ ಜನರಿಗೆ "ಎರಡೂ ಲೋಕಗಳ ಅರಸನನ್ನು ಪಡೆದಾಗ, ಅವರಿಗೆ ಇನ್ನೊಬ್ಬ ಅರಸನ ಅವಶ್ಯಕತೆ ಇರಲಿಲ್ಲ.

ಅಬ್ದುಲ್ಲಾ ಬಿನ್ ಅಬಿ ಬಿನ್ ಸಲೂಲ್ ತನ್ನ ಅರಸತ್ವದ ಎಲ್ಲಾ ಅಧಿಕಾರಗಳನ್ನು ತನ್ನ ಕೈಯಿಂದ ಜಾರಿ ಹೋಗುತ್ತಿರುವುದಾಗಿ ನೋಡಿದಾಗ, ಅವನು ತುಂಬಾ ಕೋಪಗೊಂಡನು ಮತ್ತು ಅವನು ಸ್ಪಷ್ಟವಾಗಿ ಮುಸ್ಲಿಮರೊಂದಿಗೆ ಸೇರಿಕೊಂಡಿದ್ದರೂ, ಅವನು ಯಾವಾಗಲೂ ಇಸ್ಲಾಂ ಧರ್ಮದಲ್ಲಿ ಬಿರುಕು ಉಂಟು ಮಾಡಲು ಯತ್ನಿಸುತ್ತಿದ್ದನು ಮತ್ತು ಆದ್ದರಿಂದ ಅವನು ಈಗ ಬೇರೇನೂ ಮಾಡಲು ಸಾಧ್ಯವಿಲ್ಲ ಅವನ ಹೃದಯದಲ್ಲಿ ಹಝ್ರತ್ ಪೈಗಂಬರ್(ಸ) ಅವರು ನಿಧನ ಹೊಂದಿದ ನಂತರ ತಾನು ಅರಸನಾಗುವ ಅಭಿಲಾಷೆ ಅವನಿಗಿತ್ತು ಆದರೆ ಸರ್ವಶಕ್ತನಾದ ಅಲ್ಲಾಹನು ಆತನ ಆ ಉದ್ದೇಶವನ್ನೂ ಸಹ ತಡೆಗಟ್ಟಿದನು ಏಕೆಂದರೆ ಆತನ ಸ್ವಂತ ಪುತ್ರ ಬಹಳ ನಿಷ್ಠಾವಂತನಾಗಿದ್ದನು. ಅಂದರೆ ಅವನು ಅರಸನಾಗಿದ್ದರೂ, ಆ ನಂತರ ಆಡಳಿತವು ಇಸ್ಲಾಂ ಕಡೆಗೆ ಮರಳುತ್ತಿತ್ತು. ಇದಲ್ಲದೆ, ಸರ್ವಶಕ್ತನಾದ ಅಲ್ಲಾಹನು ಆತನಿ ಹೇಗೆ ತಡೆ ಹಾಕಿದನು ಎಂದರೆ ಮುಸ್ಲಿಮರಲ್ಲಿ ಹೊಸ ವ್ಯವಸ್ಥೆಯು ಸ್ಥಾಪನೆಯಾದ ತಕ್ಷಣ, ಅವರು ಹಝ್ರತ್ ಪೈಗಂಬರ್(ಸ) ಅವರಿಗೆ ಅನೇಕ ವಿವಿಧ ಪ್ರಶ್ನೆಗಳನ್ನು ಕೇಳಲು ಪ್ರಾರಂಭಿಸಿದರು. ಅಂದರೆ ಇಸ್ಲಾಮಿನ ಸರ್ಕಾರದ ಮಾರ್ಗಯಾವುದು? ನಿಮ್ಮ ನಂತರ ಇಸ್ಲಾಂ ಧರ್ಮದ ಸ್ಥಿತಿ ಏನಾಗುತ್ತದೆ? ಮತ್ತು ಈ ಬಗ್ಗೆ ಮುಸ್ಲಿಮರು ಏನು ಮಾಡಬೇಕು? ಅಬ್ದುಲ್ಲಾ ಇಬ್ನ್ ಅಬಿ ಇಬ್ನ್ ಸಲೂಲ್ ಈ ಪರಿಸ್ಥಿತಿಯನ್ನು ಕಂಡಾಗ, ಇಸ್ಲಾಂನ ಆಡಳಿತವು, ಅದರಲ್ಲಿ ತನಗೆ ಯಾವುದೇ ಪಾಲು ಇಲ್ಲದ ರೀತಿಯಲ್ಲಿ ಸ್ಥಾಪನೆಯಾಗುತ್ತದೆ ಎಂದು ಅವನು ಭಯಪಡಲು ಪ್ರಾರಂಭಿಸಿದನು ಮತ್ತು ಅವನು ಈ ಪರಿಸ್ಥಿತಿಗಳನ್ನು ತಡೆಯಲು ಬಯಸಿದನು. ಹಾಗಾಗಿ, ಅವನು ಅದರ ಬಗ್ಗೆ ಯೋಚಿಸಿದಾಗ,

ಇಸ್ಲಾಮಿನ ತತ್ವಗಳ ಮೇಲೆ ಯಾರಾದರೂ ಇಸ್ಲಾಮಿನ ಸರ್ಕಾರವನ್ನು ಸ್ಥಾಪಿಸಲು ಸಾಧ್ಯವಾದರೆ, ಅವರು ಅಬೂಬಕರ್(ರ) ಆಗಿದ್ದಾರೆ ಮತ್ತು ಹಝ್ರತ್ ಪೈಗಂಬರ್(ಸ)ರ ನಂತರ ಮುಸ್ಲಿಮರ ನೋಟ ಹಝ್ರತ್ ಅಬೂಬಕರ್(ರ) ಮೇಲೆ ಬೀಳುತ್ತಿದೆ ಎಂದು ಅಬ್ದುಲ್ಲಾಹ್ ಬಿನ್ ಉಬಯ್ ಬಿನ್ ಸಲೂಲ್ ಕಂಡಾಗ ಜನರ ದೃಷ್ಟಿಯಲ್ಲಿ ಮತ್ತು ಹಝ್ರತ್ ಪೈಗಂಬರ್(ಸ)ರ ದೃಷ್ಟಿಯಲ್ಲಿ ಹಝ್ರತ್ ಅಬೂಬಕರ್(ರ)ರ ಸ್ಥಾನವನ್ನು ಕಡಿಮೆಗೊಳಿಸಬೇಕು ಎಂಬ ತನ್ನ ದುರುದ್ದೇಶವನ್ನು ಈಡೇರಿಸಲು ಉತ್ತಮವಾದ ಸಂದರ್ಭ ಹಝ್ರತ್ ಆಯಿಶ(ರ) ಯುದ್ಧದಲ್ಲಿ ಹಿಂದೆ ಬಾಕಿಯುಳಿದ ಘಟನೆಯಿಂದ ಆತನಿಗೆ ಲಭಿಸಿತು. ಹೀಗೆ ಆ ನೀಚನು ಹಝ್ರತ್ ಆಯಿಶ(ರ)ರ ಮೇಲೆ ಅತ್ಯಂತ ಕೊಳಕಾದ ಆರೋಪವನ್ನು ಹೊರಿಸಿದನು. ಇದನ್ನು ಪವಿತ್ರ ಖುರ್‌ಆನ್‌ನಲ್ಲಿ ಬಹಳ ಸಂಕ್ಷಿಪ್ತವಾಗಿ ಉಲ್ಲೇಖಿಸಲಾಗಿದೆ, ಆದರೆ ಅದನ್ನು ಹದೀಸ್‌ಗಳಲ್ಲಿ ವಿವರಾತಮಕವಾಗಿ ಪ್ರಸ್ತಾಪಿಸಲಾಗಿದೆ. ಅಬ್ದುಲ್ಲಾ ಬಿನ್ ಅಬಿ ಬಿನ್ ಸಲೂಲ್‌ನ ಉದ್ದೇಶವೆಂದರೆ ಈ ರೀತಿಯಾಗಿ ಹಝ್ರತ್ ಅಬುಬಕರ್(ರ) ಅವರು ಈ ಜನರ ದೃಷ್ಟಿಯಲ್ಲಿ ಅವಮಾನಕ್ಕೊಳಗಾಗುತ್ತಾರೆ ಮತ್ತು ಹಝ್ರತ್ ಪೈಗಂಬರ್(ಸ) ಅವರೊಂದಿಗಿನ ಅವರ ಸಂಬಂಧವೂ ಹಾಳಾಗುತ್ತದೆ ಎಂದಾಗಿತ್ತು. ಈ ವ್ಯವಸ್ಥೆಯ ಸ್ಥಾಪನೆಯಲ್ಲಿ ಒಂದು ಅಂತರವು ಅವನಿಗೆ ಖಚಿತವಾಗಿ ತೋರಿತು ಮತ್ತು ಅದರ ಸ್ಥಾಪನೆಯು ಅವನ ಭರವಸೆಯನ್ನು ನಾಶಪಡಿಸುತ್ತಿತ್ತು ...... ಆದಾಗ್ಯೂ, ಕಪಟವಿಶ್ವಾಸಿಯು ಯಾವಾಗಲೂ ತನ್ನ ಮರಣವನ್ನು ದೂರವೆಂದು ಪರಿಗಣಿಸುತ್ತಾನೆ ಮತ್ತು ಅವನು ಇತರರ ಸಾವಿನ ಬಗ್ಗೆ ಊಹೆಗಳನ್ನು ಮಾಡುತ್ತಾನೆ, ಆದ್ದರಿಂದ ಅಬ್ದುಲ್ಲಾ ಬಿನ್ ಅಬಿ ಇಬ್ನ್ ಸಲೂಲ್ ಕೂಡ ಅವನ ಮರಣವನ್ನು ದೂರವೆಂದು ಪರಿಗಣಿಸಿದನು ಮತ್ತು ಅವನು ಹಝ್ರತ್ ಪೈಗಂಬರ್(ಸ) ಅವರ ಜೀವನದಲ್ಲಿಯೇ ತೀವ್ರವಾಗಿ ಬಳಲಿ ಸಾಯುತ್ತಾನೆ ಎಂದು ಭಾವಿಸಿರಲಿಲ್ಲ. ಹಝ್ರತ್ ಪೈಗಂಬರ್(ಸ) ಅವರು ಮರಣಹೊಂದಿದರೆ ತಾನು ಅರೇಬಿಯಾದ ಅರಸನಾಗುತ್ತೇನೆ ಎಂದು ಊಹಿಸುತ್ತಿದ್ದನು, ಆದರೆ ಈಗ ಅವನು ಅಬೂಬಕರ್ ಅವರ ಒಳ್ಳೆಯತನ, ಧರ್ಮನಿಷ್ಠೆ ಮತ್ತು ಉದಾತ್ತತೆಯನ್ನು ಮುಸ್ಲಿಮರಲ್ಲಿ ಗುರುತಿಸಿದ್ದನು. ಹಝ್ರತ್ ಪೈಗಂಬರ್(ಸ)ರು ನಮಾಝ್ ನಿರ್ವಹಿಸಲು ಬರದಿದ್ದಾಗ ಅಬೂಬಕರ್(ರ) ಅವರ ಸ್ಥಾನದಲ್ಲಿ ನಮಾಝ್ ನಿರ್ವಹಿಸುತ್ತಿದ್ದರು. ಮುಸ್ಲಿಮರಿಗೆ ಹಝ್ರತ್ ಪೈಗಂಬರ್(ಸ) ಅವರಿಂದ ಫತ್ವಾ ಕೇಳಲು ಅವಕಾಶ ಪಟೆಯುತ್ತಿರಲಿಲ್ಲದಿದ್ದಾಗ ಮುಸ್ಲಿಮರು ಅಬುಬಕರ್(ರ) ಅವರನ್ನು ಫತ್ವಾ ಕೇಳುತ್ತಿದ್ದರು. ಇದನ್ನು ಕಂಡ ಅಬ್ದುಲ್ಲಾ ಇಬ್ನ್ ಅಬಿ ಬಿನ್ ಸುಲೂಲ್, ಭವಿಷ್ಯದಲ್ಲಿ ಅರಸತ್ವವನ್ನು ಪಡೆಯುವ ನಿರೀಕ್ಷೆಯಲ್ಲಿದ್ದನು ಅವನು ಅದನ್ನು ನಿವಾರಿಸಲು ಬಯಸಿದನು. ಆದ್ದರಿಂದ, ಈ ವಿಷಯವನ್ನು ಪರಿಹರಿಸಲು ಮತ್ತು ಮುಸ್ಲಿಮರ ದೃಷ್ಟಿಯಲ್ಲಿ ಹಝ್ರತ್ ಅಬೂಬಕರ್(ರ) ಅವರ ಖ್ಯಾತಿಯನ್ನು ಮತ್ತು ಅವರ ಹಿರಿಮೆಯನ್ನು ಕಡಿಮೆ ಮಾಡಲು, ಅವನು ಹಝ್ರತ್ ಆಯಿಷಾ(ರ) ರ ಮೇಲೆ ಕೆಟ್ಟ ಆರೋಪ ಮಾಡಿದನು, ಆದ್ದರಿಂದ ಹಝ್ರತ್ ಆಯಿಷಾ(ರ) ವಿರುದ್ಧದ ಆರೋಪದಿಂದಾಗಿ, ಹಝ್ರತ್ ಪೈಗಂಬರ್(ಸ) ಹಝ್ರತ್ ಆಯಿಷಾ(ರ) ಅವರನ್ನು ದ್ವೇಷಿಸುವರು ಇದರ ಫಲಿತಾಂಶವಾಗಿ ಹಝ್ರತ್ ಅಬೂಬಕರ್(ರ) ಅವರಿಗೆ ಹಝ್ರತ್ ಪೈಗಂಬರ್(ಸ) ಅವರಿಗೆ ಮತ್ತು ಮುಸ್ಲಿಮರ ದೃಷ್ಟಿಯಲ್ಲಿದ್ದ ಘನತೆ, ಗೌರವ ಕಡಿಮೆಯಾಗುತ್ತದೆ ಮತ್ತು ಅವರು ಭವಿಷ್ಯದಲ್ಲಿ ಖಲೀಫರಾಗಲು ಸಾಧ್ಯವಾಗುವುದಿಲ್ಲ ಎಂದು ಭಾವಿಸಿದ್ದನು. (ತ್‌ಫ್ಸೀರ್ ಕಬೀರ್, ಸಂಪುಟ–8, ಪುಟಗಳು–519 ರಿಂದ 524, ಸೂರಾ ಅಲ್-ನೂರ್, ವಚನ–36)

ಸುಳ್ಳಾರೋಪದ ಘಟನೆಗೆ ಹಝ್ರತ್ ಅಬೂಬಕರ್(ರ)ರ ಖಿಲಾಫತಿನೊಂದಿಗೆ ಇರುವ ಸಂಬಂಧವನ್ನು ವಿವರಿಸುತ್ತಾ ಹಝ್ರತ್ ಮುಸ್ಲಿಹ್ ಮೌಊದ್(ರ) ಹೇಳುತ್ತಾರೆ: ಸೂರಃ ನೂರ್‌ನ ಆರಂಭದಿಂದ ಕೊನೆಯ ವರೆಗೂ ಒಂದೇ ವಿಷಯವನ್ನು ವಿವರಿಸಲಾಗಿದೆ. ಮೊದಲು ಹಝ್ರತ್ ಆಯಿಶ(ರ)ರ ಮೇಲೆ ಹೊರಿಸಲಾದ ಆರೋಪದ ಬಗ್ಗೆ ಪ್ರಸ್ತಾಪಿಸಲಾಯಿತು. ಮತ್ತು ಹಝ್ರತ್ ಆಯಿಷಾ(ರ) ಅವರ ವಿರುದ್ಧದ ಆರೋಪದ ಮುಖ್ಯ ಉದ್ದೇಶವು ಹಝ್ರತ್ ಅಬೂಬಕರ್(ರ) ಅವರನ್ನು ಅವಮಾನಿಸುವುದಾಗಿತ್ತು ಮತ್ತು ಹಝ್ರತ್ ಪೈಗಂಬರ್(ಸ)ರ ನಡುವಿನ ಸಂಬಂಧದಲ್ಲಿ ವಿರೂಪಗೊಳಿಸುವುದಾಗಿತ್ತು. ಅದರ ಪರಿಣಾಮವಾಗಿ, ಮುಸ್ಲಿಮರ ದೃಷ್ಟಿಯಲ್ಲಿ ಗೌರವ ಪಥನವಾಗುತ್ತದೆ ಮತ್ತು ಹಝ್ರತ್ ಪೈಗಂಬರ್(ಸ) ಅವರ ಮರಣದ ನಂತರ, ಅವರು ಖಲೀಫರಾಗಲು ಸಾಧ್ಯವಾಗುವುದಿಲ್ಲ, ಏಕೆಂದರೆ ಅಬ್ದುಲ್ಲಾ ಬಿನ್ ಅಬಿ ಬಿನ್ ಸಲೂಲ್ ಇದನ್ನು ಅರಿತುಕೊಂಡಿದ್ದೇನೆಂದರೆ ಹಝ್ರತ್ ಪೈಗಂಬರ್(ಸ)ರ ನಂತರ ಮುಸ್ಲಿಮರ ದೃಷ್ಠಿ ಹಝ್ರತ್ ಅಬೂಬಕರ್(ರ)ರವರ ಮೇಲೆ ಏರುತ್ತದೆ, ಒಂದುವೇಳೆ ಅವರ ಮೂಲಕ ಖಿಲಾಫತ್ ವ್ಯವಸ್ಥೆ ಸ್ಥಾಪಿತವಾದರೆ ಅಬ್ದುಲ್ಲಾ ಬಿನ್ ಅಬಿ ಸುಲೂಲ್‌ನ ಅರಸತ್ವದ ಕನಸ್ಸು ನನಸಾಗುವುದಿಲ್ಲ ಎಂದು. ಆದ್ದರಿಂದ ಅಲ್ಲಾಹನು ಈ ಆರೋಪದ ಪ್ರಸ್ತಾಪದ ನಂತರ ಕೂಡಲೇ ಖಿಲಾಫತಿನ ಬಗ್ಗೆ ಹೇಳಿದನು. ಖಿಲಾಫತ್ ಅರಸುತನವಲ್ಲ, ಬದಲಾಗಿ ಅದು ಅಲ್ಲಾಹನ ಪ್ರಕಾಶವನ್ನು ನೆಲೆನಿಲ್ಲಿಸಲಿಕ್ಕಾಗಿ ಇರುವ ಮಾರ್ಗವಾಗಿದೆ. ಆದ್ದರಿಂದ ಅದರ ಸ್ಥಾಪನೆಯನ್ನು ಅಲ್ಲಾಹನು ತನ್ನ ಕೈಯಲ್ಲಿ ಇರಿಸಿದ್ದಾನೆ ಎಂದು ಹೇಳಿದನು.

ಆದ್ದರಿಂದ ಅಲ್ಲಾಹನು ಆ ಪ್ರಕಾಶವನ್ನು ನೆಲೆನಿಲ್ಲಿಸುವನು ಮತ್ತು ತಾನು ಇಚ್ಛಿಸುವವರನ್ನು ಖಲೀಫರನ್ನಾಗಿ ಮಾಡುವನು. ಮಾತ್ರವಲ್ಲ ಮುಸ್ಲಿಮರಲ್ಲಿ ಒಬ್ಬರನ್ನಲ್ಲ, ಬದಲಾಗಿ ಅನೇಕ ಜನರಿಗೆ ಖಿಲಾಫತ್ ಸ್ಥಾನವನ್ನು ನೀಡಿ ಆ ಪ್ರಕಾಶದ ಕಾಲಾವಧಿಯನ್ನು ದೀರ್ಘಗೊಳಿಸುವನು ಎಂದು ವಾಗ್ದಾನ ಮಾಡಿದನು. ನೀವು ಆರೋಪ ಹೊರಿಸಲು ಬಯಸುವುದಾದರೆ ಹೊರಿಸಿರಿ. ಆದರೆ ನಿಮಗೆ ಖಿಲಾಫತನ್ನು ಅಳಿಸಿ ಹಾಕಲು ಮತ್ತು ಅಬೂಬಕರ್(ರ)ರನ್ನು ಖಿಲಾಫತ್ ಸ್ಥಾನದಿಂದ ದೂರವಿರಿಸಲು ಸಾಧ್ಯವಲ್ಲ. ಏಕೆಂದರೆ ಖಿಲಾಫತ್ ಒಂದು ಪ್ರಕಾಶವಾಗಿದೆ. ಅದು ಅಲ್ಲಾಹನ ಪ್ರಕಟನೆಯ ಒಂದು ಮಾರ್ಗವಾಗಿದೆ. ಅದನ್ನು ಮನುಷ್ಯನಿಗೆ ತನ್ನ ಕುತಂತ್ರಗಳಿಂದ ಅಳಿಸಿ ಹಾಕಲು ಸಾಧ್ಯವಿಲ್ಲ." (ತ್‌ಫ್ಸೀರ್ ಕಬೀರ್, ಸಂಪುಟ–8, ಪುಟ–526, ಸೂರತುನ್ನೂರ್ ವಚನ–36)

ಹಝ್ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ: ಪ್ರವಾದಿಗಳ ಸ್ಥಿತಿ ಹೇಗಿರುತ್ತದೆ ಎಂದರೆ, ಯಾವುದೇ ಕೃತ್ಯವನ್ನು ಮಾಡಲು ಅಥವಾ ಮಾಡದಿರಲು ಅಲ್ಲಾಹನು ಅವರೊಡನೆ ಹೇಳಿದರೆ ಅವರು ಅದರಂತೆ ವರ್ತಿಸುತ್ತಾರೆ. ನೋಡಿರಿ, ಹಝ್ರತ್ ಆಯಿಶ(ರ)ರ ಮೇಲೆ ಸುಳ್ಳಾರೋಪದ ಘಟನೆಗೆ ಸಂಬಂಧಿಸಿ ಮೊದಲಿಗೆ ಹಝ್ರತ್ ಪೈಗಂಬರ್(ಸ)ರಿಗೆ ಅಲ್ಲಾಹನಿಂದ ಯಾವುದೇ ರೀತಿಯ ಅರಿವು ಲಭಿಸಿರಲಿಲ್ಲ. ಸ್ಥಿತಿ ಎಲ್ಲಿಗೆ ತಲುಪಿತು ಎಂದರೆ ಹಝ್ರತ್ ಆಯಿಶ(ರ) ತನ್ನ ಹೆತ್ತವರ ಮನೆಗೆ ಹೋದರು. "ನೀನು ತಪ್ಪೇನಾದರೂ ಮಾಡಿರುವುದಾದರೆ ಪಶ್ಚಾತ್ತಾಪ ಮಾಡು" ಎಂದು ಕೂಡ ಹಝ್ರತ್ ಪೈಗಂಬರ್(ಸ) ಆಯಿಶ(ರ)ರೊಡನೆ ಹೇಳಿದರು. ಈ ಘಟನೆಗಳನ್ನು ನೋಡಿ ಹಝ್ರತ್ ಪೈಗಂಬರ್(ಸ)ರಿಗೆ ಬಹಳಷ್ಟು ದುಃಖವಿದ್ದರೂ ಕೂಡ ಒಂದು ನಿಗದಿತ ಸಮಯದ ವರೆಗೆ ಈ ರಹಸ್ಯದ ನಿಜಸ್ಥಿತಿಯ ಬಗ್ಗೆ ಅವರಿಗೆ ಅರಿವು ನೀಡಲಾಗಲಿಲ್ಲ. ಆದರೆ ಅಲ್ಲಾಹನು ತನ್ನ ದಿವ್ಯವಾಣಿ ಮೂಲಕ ಹಝ್ರತ್ ಆಯಿಶ(ರ)ರನ್ನು ದೋಷಮುಕ್ತಗೊಳಿಸಿದನು ಮತ್ತು ಹೀಗೆ ಹೇಳಿದನು: **ಅಲ್‌ಖಬೀಸಾತು ಲಿಲ್‌ಖಬೀಸೀನ ವಲ್‌ಖಬೀಸೂನ ಲಿಲ್‌ಖಬೀಸಾತಿ ವತ್ತಯ್ಯಿಬಾತು ಲಿತ್ತಯ್ಯಿಬೀನ ವತ್ತಯ್ಯಿಬೂನ ಲಿತ್ತಯ್ಯಿಬಾತಿ**. ಆಗ ಈ ಸುಳ್ಳಾರೋಪದ ನಿಜಸ್ಥಿತಿ ಏನೆಂದು ಅವರಿಗೆ ಗೊತ್ತಾಯಿತು. ಇದರಿಂದ ಹಝ್ರತ್ ಪೈಗಂಬರ್(ಸ)ರ ಸ್ಥಾನಕ್ಕೆ ಏನಾದರೂ ಕೊರತೆ ಉಂಟಾಗುತ್ತದೆಯೇ? ಖಂಡಿತವಾಗಿಯೂ ಇಲ್ಲ. ಇಂತಹ ಸಂದೇಹಗಳನ್ನು ಇರಿಸುವ ವ್ಯಕ್ತಿ ದುಷ್ಟನೂ ದೇವಭಯವಿಲ್ಲದವನೂ ಆಗಿದ್ದಾನೆ. ಅದು ಸತ್ಯನಿಷೇಧಕ್ಕೆ ಕಾರಣವಾಗುವುದು. ಹಝ್ರತ್ ಪೈಗಂಬರ್(ಸ) ಆಗಲಿ ಇತರ ಪ್ರವಾದಿಗಳಾಗಲಿ ತಮಗೆ ಅಗೋಚರ ಸಂಗತಿಗಳ ಅರಿವು ಇದೆ ಎಂದು ಎಂದಿಗೂ ವಾದಿಸಿರಲಿಲ್ಲ. ಅಗೋಚರ ಸಂಗತಿಗಳ ಅರಿವು ದೇವನ ವೈಶಿಷ್ಟ್ಯವಾಗಿದೆ." (ಮಲ್‌ಫೂಝಾತ್, ಸಂಪುಟ–3, ಪುಟ–316, 2022)

ಹಝ್ರತ್ ಪೈಗಂಬರ್(ಸ) ಔಸ್ ಹಾಗೂ ಖಝ್ರುಜ್ ಗೋತ್ರದ ಮುಖ್ಯಸ್ಥರ ನಡುವೆ ಶಾಂತಿ ಸಂಧಾನವನ್ನು ಸ್ಥಾಪಿಸಿದರು ಎಂದು ಉಲ್ಲೇಖಿಸಲಾಗಿದೆ. ಅವರ ನಡುವೆ ದ್ವೇಷ ವರ್ಧಿಸಿತ್ತು. ಒಂದು ವರದಿಯ ಪ್ರಕಾರ ಹಝ್ರತ್ ಪೈಗಂಬರ್(ಸ) ರು ಕೆಲವು ದಿನಗಳ ಹಝ್ರತ್ ಸಾಅದ್ ಬಿನ್ ಮುಆಝ್(ರ) ಅವರ ಕೈ ಹಿಡಿದು ಕೆಲವು ಸಹಾಬಗಳೊಂದಿಗೆ ಹಝ್ರತ್ ಸಾಅದ್ ಬಿನ್ ಉಬಾದ(ರ) ಅವರ ಬಳಿಗೆ ತಲುಪಿದರು. ಅಲ್ಲಿ ಸ್ವಲ್ಪ ಹೊತ್ತು ಮಾತನಾಡಿದರು. ಹಝ್ರತ್ ಸಾಅದ್ ಬಿನ್ ಉಬಾದಾ(ರ) ಊಟ ಬಡಿಸಿದರು. ಹಝ್ರತ್ ಪೈಗಂಬರ್(ಸ), ಹಝ್ರತ್ ಸಾಅದ್ ಬಿನ್ ಮುಆಝ್(ರ) ಮತ್ತು ಇತರ ಸಹಾಬಗಳು ಅದನ್ನು ಸೇವಿಸಿದರು. ತದನಂತರ ಹಝ್ರತ್ ಪೈಗಂಬರ್(ಸ) ಅವರು ಅಲ್ಲಿಂದ ಮರಳಿದರು. ತದನಂತರ ಹಝ್ರತ್ ಪೈಗಂಬರ್(ಸ)ರವರ ಮತ್ತಷ್ಟು ದಿವಸದ ನಂತರ ಪುನಃ ಹಝ್ರತ್ ಸಾಅದ್ ಬಿನ್ ಉಬಾದಾ9ರ) ಅವರ ಕೈ ಹಿಡಿದು ಕೆಲವು ಸಹಾಬಗಳೊಂದಿಗೆ ಹಝ್ರತ್ ಸಾಅದ್ ಬಿನ್ ಮುಆಝ್(ರ) ಅವರ ಮನೆಗೆ ಹೋದರು. ಸ್ವಲ್ಪ ಹೊತ್ತು ಮಾತನಾಡಿದ ನಂತರ, ಹಝ್ರತ್ ಸಾಅದ್ ಬಿನ್ ಮುಆದ್(ರ) ಅವರು ಆಹಾರವನ್ನು ನೀಡಿದಾಗ ಹಝ್ರತ್ ಪೈಗಂಬರ್(ಸ), ಹಝ್ರತ್ ಸಾಅದ್ ಬಿನ್ ಉಬಾದಾ(ರ), ಮತ್ತು

ಇತರ ಸಹಾಬಗಳು ಅದನ್ನು ಸೇವಿಸಿದರು. ನಂತರ ಸ್ವಲ್ಪ ಸಮಯ ಮಾತನಾಡಿದ ನಂತರ ಹಿಂತಿರುಗಿದರು. ಹಝ್ರತ್ ಪೈಗಂಬರ್(ಸ) ಅವರು ಹೀಗೆ ಮಾಡುವುದಕ್ಕೆ ಕಾರಣ ಅವರ ಮನಸ್ಸಿನಲ್ಲಿದ್ದ ದ್ವೇಷವನ್ನು ಕೊನೆಗೊಳಿಸುವುದಾಗಿತ್ತು. (ಕಿತಾಬುಲ್ ಮಗ್ಹಾಝಿ ವಾಖಿದಿ, ಸಂಪುಟ–1, ಪುಟ–371, ದಾರುಲ್ ಕುತುಬ್ ಇಲ್‌ಮಿಯಾ)

ಅಂದರೆ, ಒಮ್ಮೆ ಒಬ್ಬರ ಮನೆಗೆ ಒಬ್ಬರನ್ನು ಕರೆದೊಯ್ದರು, ಇನ್ನೊಂದು ಬಾರಿ ಅವರು ತಮ್ಮ ದ್ವೇಷವನ್ನು ಕೊನೆಗೊಳಿಸಲು ಇನ್ನೊಬ್ಬರನ್ನು ಹಿಂದಿನವರ ಮನೆಗೆ ಕರೆದೊಯ್ದು ಅಲ್ಲಿಯೇ ಊಟ ಮಾಡಿದರು. ಅವರು ಒಬ್ಬರಿಗೊಬ್ಬರು ಆಹಾರವನ್ನು ನೀಡಿದರು ಮತ್ತು ಆದ್ದರಿಂದ ದ್ವೇಷಗಳನ್ನು ತೆಗೆದುಹಾಕಲಾಯಿತು. ಇದು ಹಝ್ರತ್ ಪೈಗಂಬರ್(ಸ)ರ ಪರಸ್ಪರ ಪ್ರೀತಿ ಮತ್ತು ವಾತ್ಸಲ್ಯವನ್ನು ಸೃಷ್ಟಿಸಲು ವಿಧಾನವಾಗಿತ್ತು.

ವರದಿಗಳಲ್ಲಿ ಆರೋಪ ಮಾಡುವವರ ಸಂಖ್ಯೆಯನ್ನು ವಿಭಿನ್ನವಾಗಿ ವಿವರಿಸಲಾಗಿದೆ. ಹಝ್ರತ್ ಇಬ್ನ್ ಅಬ್ಬಾಸ್(ರ) ರವರ ವರದಿಯಲ್ಲಿ, ಹಝ್ರತ್ ಆಯಿಷಾ(ರ) ರವರ ಮೇಲೆ ಅಪಪ್ರಚಾರ ಮಾಡಿದವರ ಸಂಖ್ಯೆಯನ್ನು ಮೂರು ಎಂದು ಉಲ್ಲೇಖಿಸಲಾಗಿದೆ. ಹಝ್ರತ್ ಇಬ್ನ್ ಅಬ್ಬಾಸ್(ರ) ಅವರ ಮತ್ತೊಂದು ವರದಿ ಇದೆ, ಅದರ ಪ್ರಕಾರ ಅವರ ಸಂಖ್ಯೆ ಮೂರರಿಂದ ಹತ್ತು ಎಂದಾಗಿದೆ. ಇಬ್ನ್ ಉಯೈನಾ ಅದರ ಸಂಖ್ಯೆಯನ್ನು ನಲವತ್ತು ಎಂದು ಬರೆದಿದ್ದಾರೆ ಮತ್ತು ಮುಜಾಹಿದ್ ಹತ್ತರಿಂದ ಹದಿನೈದು ಎಂದು ಹೇಳಿದ್ದಾರೆ. (ಅಲ್–ಜಾಮಿ ಲಹ್ಕಾಮ್ ಅಲ್–ಖುರ್‌ಆನ್, ತಫ್ಸಿರ್ ಕುರ್ತುಬಿ, ಸಂಪುಟ–2, ಸೂರಾ ಅಲ್–ನೂರ್: 12, ಪುಟ–2169, ದಾರ್ ಇಬ್ನ್ ಹಝ್ಮ್)

ಹಝ್ರತ್ ಆಯಿಶ(ರ)ರ ಮೇಲೆ ಈ ಸುಳ್ಳು ಆರೋಪ ಹೊರಿಸಿದವರಿಗೆ ಲಭಿಸಿದ ಶಿಕ್ಷೆಯ ಬಗ್ಗೆಯೂ ಭಿನ್ನಾಭಿಪ್ರಾಯಗಳಿವೆ. ಇಬ್ಬರು ಪುರುಷರಿಗೆ ಮತ್ತು ಒಬ್ಬಳು ಮಹಿಳೆಗೆ ಚಾಟಿಯೇಟಿನ ಶಿಕ್ಷೆಯ ಆದೇಶವನ್ನು ಹಝ್ರತ್ ಪೈಗಂಬರ್(ಸ) ನೀಡಿದ್ದರು ಎಂದು ಸುನನ್ ಅಬೀ ದಾಊದ್‌ನಲ್ಲಿ ವರದಿಯಾಗಿದೆ. ಅವರಲ್ಲಿ ಹಝ್ರತ್ ಹಸ್ಸಾನ್ ಬಿನ್ ಸಾಬಿತ್(ರ) ಮತ್ತು ಮಸ್‌ತಹ್ ಬಿನ್ ಅಸಾಸ ಒಳಪಡುತ್ತಾರೆ. ಆ ಮಹಿಳೆ ಹಮ್ನ ಬಿನ್ತ್ ಜಹಶ್ ಆಗಿದ್ದರು ಎಂದು ನುಫೈಲಿ ಹೇಳುತ್ತಾರೆ. (ಸುನನ್ ಅಬು ದಾವುದ್, ಕಿತಾಬ್ ಅಲ್–ಹುದೂದ್ ಅಧ್ಯಾಯ, ಹದೀಸ್–4475)

ಅವರಲ್ಲಿ ಯಾರಿಗೂ ಹಝ್ರತ್ ಪೈಗಂಬರ್(ಸ) ಶಿಕ್ಷೆಯ ಆದೇಶ ನೀಡಿಲ್ಲವೆಂದೂ ಒಂದು ಹೇಳಿಕೆಯಿದೆ. ಅಬ್ದುಲ್ಲಾಹ್ ಬಿನ್ ಉಬಯ್, ಮಸ್‌ತಹ್ ಬಿನ್ ಅಸಾಸ, ಹಸ್ಸಾನ್ ಬಿನ್ ಸಾಬಿತ್ ಮತ್ತು ಹಮ್ನ ಬಿನ್ತ್ ಜಹಶ್‌ರಿಗೆ ಹಝ್ರತ್ ಪೈಗಂಬರ್(ಸ) ಶಿಕ್ಷೆಯ ಆದೇಶ ನೀಡಿದ್ದರು ಎಂದು ಮತ್ತೊಂದು ಹೇಳಿಕೆಯಿದೆ. (ಅಲ್–ಜಾಮಿ ಲಹ್ಕಮ್ ಅಲ್–ಖುರ್‌ಆನ್, ತಫ್ಸೀರ್ ಕುರ್ತುಬಿ, ಸಂಪುಟ–2, ಪುಟ 2170–2171 ದಾರ್ ಇಬ್ನ್ ಹಜ್ಮ್)

ಹಝ್ರತ್ ಮುಸ್ಲೆಹ್ ಮೌಊದ್(ರ) ಅದರ ಬಗ್ಗೆ ಒಂದು ಖುತ್‌ಬದಲ್ಲಿ ಹೀಗೆ ಹೇಳಿದರು: **"**ಹಝ್ರತ್ ಆಯಿಶ(ರ)ರ ಮೇಲೆ ಈ ಸುಳ್ಳು ಆರೋಪ ಹೊರಿಸಿದಕ್ಕಾಗಿ ಮೂರು ಜನರನ್ನು ಚಾಟಿಯೇಟಿನ ಶಿಕ್ಷೆಯ ಆದೇಶವನ್ನು ಹಝ್ರತ್ ಪೈಗಂಬರ್(ಸ) ನೀಡಿದ್ದರು. ಅವರಲ್ಲಿ ಒಬ್ಬರು ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿವ ಸಲ್ಲಮ್ ಅವರ ಮಹಾನ್ ಕವಿ ಹಝ್ರತ್ ಹಸ್ಸಾನ್ ಬಿನ್ ಸಾಬಿತ್(ರ) ಮತ್ತು ಮಸ್‌ತಹ್ ಬಿನ್ ಅಸಾಸ ಆಗಿದ್ದರು ಅವರು ಹಝ್ರತ್ ಆಯಿಷಾ(ರ) ಅವರ ಚಿಕ್ಕಪ್ಪ ಮತ್ತು ಹಝ್ರತ್ ಅಬೂಬಕರ್(ರ) ಅವರ ಸೋದರಸಂಬಂಧಿ. ಅವರು ಎಷ್ಟು ಬಡವನಾಗಿದ್ದನೆಂದರೆ ಅವನು ಹಝ್ರತ್ ಅಬೂಬಕರ್(ರ) ಅವರ ಮನೆಯಲ್ಲಿ ವಾಸಿಸುತ್ತಿದ್ದನು. ಅಲ್ಲಿಯೇ ಊಟ ಮಾಡುತ್ತಿದ್ದನು ಮತ್ತು ಅವರು(ರ) ಆತನಿಗೆ ಬಟ್ಟೆ ತೊಡಿಸುತ್ತಿದ್ದರು. ಮತ್ತೊಬ್ಬ ಮಹಿಳೆ ಅವರೊಂದಿಗೆ ಜತೆಗಿದ್ದರು. (ಖುತ್‌ಬಾತೆ ಮಹ್ಮೂದ್(ರ), ಸಂಪುಟ–18, ಪುಟಗಳು 279–280)

ಸೂರ ನೂರಿನ 36ನೇ ವಚನದ ವ್ಯಾಖ್ಯಾನದಲ್ಲಿ ಇಬ್ನೆ ಸುಲೂಲ್‌ಗೆ ಚಾವಟಿಏಟಿನ ಬಗ್ಗೆ ಪ್ರಸ್ತಾಪಿಸುತ್ತಾ ಹಝ್ರತ್ ಮುಸ್ಲಿಹ್ ಮೌಊದ್(ರ) ಬರೆಯುತ್ತಾರೆ: **ಲಿಕುಲ್ಲಿಮ್‌ರಿ ಇಮ್ಮಿನ್‌ಹುಮ್ ಮಕ್ತಸಬ ಮಿನಲ್ ಇಸ್ಮಿ** ಈ ಆರೋಪ ಹೊರಿಸಿದವರಿಗೆ ಅವರು ಮಾಡಿದ ಕೃತ್ಯದ ಅನುಸಾರ ಶಿಕ್ಷೆ ಲಭಿಸಿತು. ಹಾಗಾಗಿ ಆರೋಪ ಮಾಡುವ ಷಡ್ಯಂತ್ರದಲ್ಲಿ ಭಾಗಿಯಾದವರಿಗೆ ಎಂಬತ್ತು ಎಂಭತ್ತು ಚಾವಟಿ ಶಿಕ್ಷೆ ನೀಡಲಾಯಿತು. ಮತ್ತೆ ಅಲ್ಲಾಹನು ಹೇಳಿದನು: **ವಲ್ಲಧಿ ತವಲ್ಲಾ ಕಿಬ್ರಹೂ ಮಿನ್‌ಹುಮ್ ಲಹೂ ಅಝಾಬುನ್ ಅಝೀಂ** ಈ ಪಿತೂರಿಯನ್ನು ಹುಟ್ಟು ಹಾಕಿದ ಅಬ್ದುಲ್ಲಾಹ್ ಬಿನ್ ಉಬಯ್ ಬಿನ್ ಸಲೂಲ್‌ಗೆ ಶಿಕ್ಷೆಯು ವಾಗ್ದಾನದ ಪ್ರಕಾರ ಚಾವಟಿಯ ಶಿಕ್ಷೆ ಕೊಡಲಾಯಿತು. (ಅಸ್ಸೀರತುಲ್ ಹಲಬೀಯಾ, ಗಝ್ವಾ ಬನೀ ಮುಸ್ತಲಕ್) ಆತನಿಗೆ ಅಲ್ಲಾಹನ ಕಡೆಯಿಂದಲೂ ಶಿಕ್ಷೆ ಲಭಿಸಿತು. ಹಝ್ರತ್ ಪೈಗಂಬರ್(ಸ)ರ ಜೀವಿತ ಕಾಲದಲ್ಲೇ ಆತನು ಹಿಮ್ಮಡಿ ಒರೆಸುತ್ತಾ ನಾಶವಾದನು." (ತಫ್ಸೀರೆ ಕಬೀರ್, ಸಂಪುಟ–8, ಪುಟ–524, ತಫ್ಸೀರ್ ಸೂರತುನ್ನೂರ್ ವಚನ–36)

ಜಲ್ಸದಲ್ಲಿ ಭಾಗವಹಿಸಿದ ಅಹ್ಮದಿಯೇತರು ಮತ್ತು ಮೊದಲ ಬಾರಿ ಭಾಗವಹಿಸಿದವರು ಬಹಳ ಸಕಾರಾತ್ಮಕ ಅಭಿಪ್ರಾಯಗಳನ್ನೂ ಸಂತೋಷವನ್ನೂ ವ್ಯಕ್ತಪಡಿಸಿರುವರು. ಮಾಧ್ಯಮ ಮತ್ತು ವಾರ್ತೆಗಳ ಮೂಲಕ ಅನೇಕ ಮಿಲಿಯನ್ ಜನರಿಗೆ ಅಹ್ಮದಿಯ್ಯತ್ ಮತ್ತು ಇಸ್ಲಾಮಿನ ಸಂದೇಶ ಸಹ ತಲುಪಿದೆ. ಅಲ್ಲಾಹನು ಇದರ ಉತ್ತಮ ಪ್ರಭಾವ ಮತ್ತು ದೀರ್ಘಕಾಲೀನ ಪರಿಣಾಮಗಳನ್ನು ಉಂಟುಮಾಡಲಿ. ಅಹ್ಮದಿಯರಿಗೂ ನಿಜವಾದ ರೀತಿಯಲ್ಲಿ ಸದಾ ಪ್ರಯೋಜನ ಪಡೆಯಲು ಸೌಭಾಗ್ಯ ನೀಡಲಿ. ದುಆಗಳ ಕಡೆಗೆ ಗಮನ ನೀಡಿರಿ. ಅಲ್ಲಾಹನು ತನ್ನ ಅನುಗ್ರಹಗಳ ಮತ್ತು ಕಾರುಣ್ಯಗಳ ಹೊದಿಕೆಯಲ್ಲಿ ನಮ್ಮನ್ನು ಸದಾ ಹೊದಿಸಿಡಲಿ. ಅಂತಿಮವಾಗಿ, ನಾನು ಓರ್ವ ದಿವಂಗತರ ಬಗ್ಗೆ ಪ್ರಸ್ತಾಪಿಸುವೆಮು. ಅವರ ಜನಾಝವನ್ನು ಸಹ ನಿರ್ವಹಿಸುವೆನು ಇನ್‌ಶಾಅಲ್ಲಾಹ್. ಇಮಾಮ್ ಮುಹಮ್ಮದ್ ಬೆಲ್ಲೋ ಸಾಹಿಬ್ ಸುಡಾನ್‌ನವರು ಅವರು ಇತ್ತೀಚೆಗೆ ನಿಧನರಾಗಿದ್ದಾರೆ **ಇನ್ನಾ ಲಿಲ್ಲಾಹಿ ವ ಇನ್ನಾ ಇಲೈಹಿ ರಾಜಿಊನ್**.

ಸುಡಾನ್‌ನ ಸದರ್ ಸಾಹಿಬ್ ಅವರ ಬಗ್ಗೆ ಬರೆಯುತ್ತಾರೆ: ಅವರ ಬೈಅತ್‌ನ ಘಟನೆಯು ಹೀಗಿದೆ 1966 ರಲ್ಲಿ ನೈಜೀರಿಯಾದ ಅಹ್ಮದಿ ಇಮಾಮ್ ಈಸಾ ಅಬ್ದುಲ್ಲಾ ಬಿನ್ ಲೈಲ್ ಸಾಹಿಬ್ ಅವರು ಅವರ ಬಳಿಗೆ ಅತಿಥಿಯಾಗಿ ಬಂದು ಗ್ರಾಮದ ಜನರಿಗೆ ತಬ್ಲೀಗ್ ಮಾಡಿದರು. ದಿವಂಗತ ಇಮಾಮ್ ಮುಹಮ್ಮದ್ ಬಿನ್ ಬೆಲ್ಲೊ ಸಾಹಿಬ್ ಅವರು ಮೊಟ್ಟ ಮೊದಲಿಗೆ ಬೈಅತ್ ಮಾಡುವ ಸೌಭಾಗ್ಯ ಪಡೆದರು. ಆ ದಿನಗಳಲ್ಲಿ, ಸುಡಾನ್ ಅನ್ನು ಖಿಲಾಫತ್ ಅಥವಾ ಕೇಂದ್ರದೊಂದಿಗೆ ಸಂಪರ್ಕಿಸಲು ಸಾಧ್ಯವಾಗಲಿಲ್ಲ, ಆದರೆ ಈ ಅಹ್ಮದಿ ಸ್ನೇಹಿತರು ಅಹ್ಮದಿಯತ್ತಿನಲ್ಲಿ ಸ್ಥಿರವಾಗಿ ಉಳಿದರು. ಅವರು ತೀವ್ರವಾಗಿ ವಿರೋಧವನ್ನು ಅನುಭವಿಸಬೇಕಾಯಿತು. ಇಮಾಮ್ ಮುಹಮ್ಮದ್ ಬೆಲ್ಲೋ ಸಾಹಿಬ್ ಅಹ್ಮದೀಯರಿಗೆ ನಮಾಝ್‌ಗಳನ್ನು ನಿರ್ವಹಿಸುತ್ತಿದ್ದರು. ಅಲ್ಲಿ ಅಹ್ಮದಿ ಮಸೀದಿಯು ಹುಲ್ಲು ಮತ್ತು ಕಡ್ಡಿಗಳಿಂದ ನಿರ್ಮಿಸಿದ ಗುಡಿಸಲಿನಂತಿತ್ತು, ಅಹ್ಮದೀಯರಲ್ಲದವರು ಬೆಂಕಿ ಹಚ್ಚಿ ಅಹ್ಮದೀಯರನ್ನು ಊರಿನಿಂದ ಓಡಿಸಿದರು. ಆದ್ದರಿಂದ ಈ ಅಹ್ಮದಿಯರು ದಕ್ಷಿಣಕ್ಕೆ ವಲಸೆ ಹೋದರು. ಅಲ್ಲಿಯೂ ಸಹ ಅವರು ಹುಲ್ಲು ಮತ್ತು ಕಡ್ಡಿಯಿಂದ ಸಣ್ಣ ಮಸೀದಿಯನ್ನೂ ನಿರ್ಮಿಸಿದರು. ಅಲ್ಲಿಯೂ ವಿರೋಧ ವ್ಯಕ್ತವಾಯಿತು ಮತ್ತು ವಿರೋಧಿಗಳು ಅಹ್ಮದೀಯ ಮಸೀದಿಯನ್ನು ಸುಟ್ಟುಹಾಕಿದರು ಮತ್ತು ಅಹ್ಮದೀಯರನ್ನು ಅಲ್ಲಿಂದ ಹೊರಹಾಕಿದರು. ಈ ಅಹ್ಮದೀಯರ ಒಂದು ಗುಂಪು ಅಲ್ಲಿಂದ ಬಹಳ ದೂರ ಹೋದರು ಮತ್ತು ಇನ್ನೊಂದು ಗುಂಪು ಡುಯಿಮ್ ನಗರಕ್ಕೆ ಹೋದರು. ಅವರಲ್ಲಿ ಇಮಾಮ್ ಬೆಲ್ಲೊ ಸಾಹಿಬ್ ಕೂಡ ಇದ್ದರು. ಅಲ್ಲಿ, ಈ ಜನರು ಜಾಮಿಯಾ ಬಖ್ತ್ ಅಲ್–ರಿಝಾದ ಪ್ರಾಂಶುಪಾಲರಾಗಿದ್ದ ಅಬ್ದುಲ್ಲಾ ಬಿನ್ ಅವಝ್ ಖಾಸಿಮ್ ಸಾಹಿಬ್ ಅವರ ಅತಿಥಿಗಳಾದರು, ಆದರೆ ಅವರ ಕುಟುಂಬವು ಈ ಅಹ್ಮದೀಯರನ್ನು ವಿರೋಧಿಸಿ ಅಲ್ಲಿಂದ ಹೊರಹಾಕಿತು. ಅಲ್ಲಿಂದಲೂ ಈ ಬಡ ಜನರನ್ನೂ ಹೊರಹಾಕಲಾಯಿತು. ಅಂತಿಮವಾಗಿ ಅವರು ನೈಜೀರಿಯಾದ ಇಮಾಮ್ ಈಸಾ ಅಬ್ದುಲ್ಲಾ ಬಿನ್ ಲೈಲ್ ಸಾಹಿಬ್ ಅವರ ಬಳಿಗೆ ಹೋಗಲು ನಿರ್ಧರಿಸಿದರು, ಅವರ ಮೂಲಕ ಈ ಜನರು ಅಹ್ಮದೀಯರಾಗಿದ್ದರು. ಆದ್ದರಿಂದ ಈ ಬಡ ಅಹ್ಮದೀಯರ ಈ ಗುಂಪು, ಅವರ ಹೆಂಡತಿಯರು ಮತ್ತು ಮಕ್ಕಳೊಂದಿಗೆ ಕತ್ತೆಗಳು ಮತ್ತು ಪ್ರಾಣಿಗಳ ಮೇಲೆ ಸವಾರಿ ಮಾಡಿದರು ಮತ್ತು ಆಗಾಗ್ಗೆ ಕಾಲ್ನಡಿಗೆಯಲ್ಲಿ ನೈಜೀರಿಯಾಗೆ ಹೊರಟರು. ಅವರಿಗೆ ಬೇರೆ ಯಾವ ದಾರಿಯೇ ಇರಲಿಲ್ಲ. ವೀಝಾದ ಪತ್ರಗಳು ಇತ್ಯಾದಿಗಳೂ ಸಹ ಇರಲಿಲ್ಲ. ಪ್ರಯಾಣದ ಕಷ್ಟಗಳು ಬಹಳಷ್ಟಿದ್ದವು. ಹೌದು, ಈಮಾನ್‌ನ ಸಂಪತ್ತು ಅವರ ಬಳಿ ಮಾತ್ರ ಇತ್ತು. ಅವರು ತಮ್ಮ ಈಮಾನ್ ಅನ್ನು ಉಳಿಸಿಕೊಂಡರು ಮತ್ತು ಅದೇ ಉತ್ಸಾಹ ಮತ್ತು ಹುಮ್ಮಸ್ಸಿನಿಂದ ವಲಸೆ ಹೋದರು ಮತ್ತು ಎಂದಿಗೂ ತಮ್ಮ ಧರ್ಮವನ್ನು ತ್ಯಾಗ ಮಾಡಲಿಲ್ಲ. ಅಂತಿಮವಾಗಿ, ಅವರು ನೈಜೀರಿಯಾಗೆ ತಲುಪಿದರು ಮತ್ತು ಇಮಾಮ್ ಈಸಾ ಬಿನ್ ಲೈಲ್ ಸಾಹಿಬ್ ಅವರೊಂದಿಗೆ ಹದಿಮೂರು ವರ್ಷಗಳ ಕಾಲ ಅಲ್ಲಿಯೇ ಇದ್ದರು. ಅದರ ನಂತರ, ಇಮಾಮ್ ಈಸಾ ಸಾಹಿಬ್ ಅವರು ಕನಸಿನ ಆಧಾರದ ಮೇಲೆ ಸುಡಾನ್‌ಗೆ ಹಿಂದಿರುಗಲು ಸಲಹೆ ನೀಡಿದರು. ಅವರು ಇದನ್ನು ಇಷ್ಟಪಡಲಿಲ್ಲ, ಆದ್ದರಿಂದ ಇಮಾಮ್ ಈಸಾ ಸಾಹಿಬ್ ಅವರಿಗೆ ಹೇಳಿದರು, ಇದು ನಮ್ಮ ಭಗವಂತನಿಂದ ಆದೇಶಿಸಲ್ಪಟ್ಟಿದೆ. ಆದ್ದರಿಂದ ಈ ಜನರು ಅತೃಪ್ತ ಮನಸ್ಸಿನಿಂದ ಸುಡಾನ್‌ಗೆ ಹಿಂದಿರುಗಲು ಇಷ್ಟವಿಲ್ಲದೆ ಒಪ್ಪಿಕೊಂಡರು. ಈ ಜನರು ಮೂರು ವರ್ಷಗಳ

ನಂತರ ಸುಡಾನ್‌ಗೆ ಹಿಂತಿರುಗುತ್ತಾರೆ ಎಂದು ಇಮಾಮ್ ಈಸಾ ಅವರಿಗೆ ಕನಸಿನಲ್ಲಿ ಹೇಳಲಾಯಿತು. ಮೂರು ವರ್ಷಗಳು ಪೂರ್ಣಗೊಂಡ ನಂತರ, ಈ ಅಹ್ಮದಿ ವಲಸಿಗರು ತಮ್ಮ ತಾಯ್ನಾಡಿಗೆ ಮರಳಿದರು. ಮೊದಲಿಗೆ, ಇಮಾಮ್ ಮುಹಮ್ಮದ್ ಬೆಲ್ಲೊ ಸಾಹಿಬ್ ಹಿಂತಿರುಗಿದರು. ಸುಡಾನ್‌ನಲ್ಲಿ, ಈ ಜನರು ತಮ್ಮ ಮೊದಲ ಗ್ರಾಮ ಕುನಿಜಾಗೆ ಹೋಗಿ ನೆಲೆಸಿದರು. ಇದು 2010ರ ವಿಷಯವಾಗಿದೆ. ಈ ಅಹ್ಮದಿಯರು ಸುಡಾನ್‌ಗೆ ಹಿಂದಿರುಗಿದ ನಂತರ, ಬೊಕೊ ಹರಾಮ್ ಎಂಬ ಸಂಘಟನೆಯು ನೈಜೀರಿಯಾದಲ್ಲಿ ಕಾಣಿಸಿಕೊಂಡಿತು. ಈ ಸುಡಾನ್ ಅಹ್ಮದಿಯರು ಆ ಸಮಯದಲ್ಲಿ ನೈಜೀರಿಯಾದಲ್ಲಿರುತ್ತಿದ್ದರೆ, ಈ ಸಂಸ್ಥೆ ಅವರನ್ನು ಹೇಗೆ ನಡೆಸಿಕೊಳ್ಳುತ್ತಿತ್ತು ಎಂಬುದು ದೇವರೇ ಬಲ್ಲ. ಆಗ ಅವರು ನೈಜೀರಿಯಾದಿಂದ ಹಿಂದಿರುಗಿದ ಹಿಂದಿನ ದೈವಿಕ ಯುಕ್ತಿಯನ್ನು ಅರಿತುಕೊಂಡರು. ಆದಾಗ್ಯೂ, ಕುನಿಜಾಗೆ ಹಿಂದಿರುಗಿದ ನಂತರ, ಅವರು ಮತ್ತೆ ತೀವ್ರ ವಿರೋಧವನ್ನು ಎದುರಿಸಿದರು. ಮತ್ತು ಅವರು ನಿರ್ಮಿಸಿಕೊಂಡಿದ್ದ ಚಿಕ್ಕದಾದ ಮಸೀದಿಯನ್ನು ಸುಟ್ಟು ಹಾಕಲಾಯಿತು. ಅವರ ಮನೆಗಳ ಮೇಲೆ ದಾಳಿ ನಡೆಸಲಾಯಿತು. ಅವರ ವಿರುದ್ಧ ಪ್ರಕರಣಗಳು ದಾಖಲಾಗಿದ್ದವು. ಅವರನ್ನು ಮತ್ತೆ ವಸಾಹತು ಪ್ರದೇಶದಿಂದ ಹೊರಹಾಕಲಾಯಿತು. ನಂತರ ಅಂತಿಮವಾಗಿ ಪ್ರಸ್ತುತ ಯುದ್ಧದ ಕಾರಣದಿಂದ ಅಹ್ಮದಿಯರು ಕೂಡ ತಮ್ಮ ಜೀವ ರಕ್ಷಣೆಗಾಗಿ ಮತ್ತು ಸಮಾಧಾನಕ್ಕಾಗಿ ಸೂಡಾನಿನ ಬೇರೆ ಬೇರೆ ಪ್ರದೇಶಗಳಲ್ಲಿ ಚದುರಿ ಹೋಗಿರುವರು. ಈಗಲೂ ವಿವಿಧ ಪ್ರದೇಶಗಳಲ್ಲಿ ಈ ಜನರು ಬಹಳ ಕಷ್ಟ ಮತ್ತು ಬಡತನದಿಂದ ಜೀವನವನ್ನು ಸಾಗಿಸುತ್ತಿದ್ದಾರೆ. ಅಲ್ಲಾಹನು ಅಹ್ಮದಿಯರ ಈಮಾನನ್ನು ಸುದೃಢಗೊಳಿಸಲಿ. ಅಲ್ಲಾಹನು ಅವರ ಸ್ಥಿತಿಗಳನ್ನು ಬದಲಾಯಿಸಲಿ. ಆ ದೇಶದಲ್ಲಿ ಬಹಳ ದೊಡ್ಡ ಗಲಭೆ ಹರಡಿದೆ. ಅಲ್ಲಾಹನು ಈ ಕೋಲಾಹಲವನ್ನು ಕೊನೆಗೊಳಿಸಲಿ ಮತ್ತು ಕೃಪೆದೋರಲಿ. ಈ ಜನರು ಪರಸ್ಪರರ ಹಕ್ಕುಗಳನ್ನು ಈಡೇರಿಸುವವರಾಗಲಿ. ಮುಸ್ಲಿಮನು ಮುಸ್ಲಿಮನ ಸಹೋದರನೆಂಬ ಹಕ್ಕನ್ನು ಈಡೇರಿಸುವವರಾಗಲಿ. ಇಸ್ಲಾಮೀ ಸರ್ಕಾರಗಳಲ್ಲಿ ಇರುವ ಅಶಾಂತಿಯನ್ನು ಅಲ್ಲಾಹನು ದೂರಮಾಡಲಿ. ಅಹ್ಮದಿಯರಿಗೆ ಯಥಾರ್ಥ ರೀತಿಯಲ್ಲಿ ಶಾಂತಿ ಮತ್ತು ನೆಮ್ಮದಿಯ ಜೀವನವನ್ನು ಸಾಗಿಸಲು ಅಲ್ಲಾಹನು ಸೌಭಾಗ್ಯ ನೀಡಲಿ.

**(ಅಲ್-ಫಝ್ಲ್ ಇಂಟರ್‌ನ್ಯಾಶನಲ್, ಸೆಪ್ಟೆಂಬರ್ 20, 2024, ಪುಟ 2-6)**

-------------*****-------------

***(ಪುಟ ಸಂಖ್ಯೆ 01ರ ಉಳಿದ ಭಾಗ)***

ಮತ್ತು ಯಾರ ಮೇಲೂ ದ್ವೇಷ ಇರಲಿಲ್ಲ. ದಾರಿ ತಪ್ಪಿದ ವಿರೋಧಿಗಳು ಇಸ್ಲಾಂ ಧರ್ಮವನ್ನು ಕತ್ತಿಯ ಬಲದಿಂದ ಹರಡಿದೆ ಎಂದು ಹೇಳಿದ್ದಾರೆ, ಆದರೆ ಇದು ನಿಜವಲ್ಲ ಎಂದು ನಾನು ಹೇಳುತ್ತೇನೆ. ವಾಸ್ತವವೇನೆಂದರೆ ಅವರ ಹೃದಯದ ರಕ್ತನಾಳಗಳು ವಿಧೇಯತೆಯ ನೀರಿನಿಂದ ಉಕ್ಕಿ ಹರಿಯುತ್ತಿತ್ತು. ಈ ವಿಧೇಯತೆ ಮತ್ತು ಏಕತೆಯ ಪರಿಣಾಮವಾಗಿ ಅವರು ಇತರ ಹೃದಯಗಳನ್ನು ಗೆದ್ದರು. ನನ್ನ ನಿಲುವು ಏನೆಂದರೆ ಅವರು ತಮ್ಮ ರಕ್ಷಣೆಗಾಗಿ ಮಾತ್ರ ಅವರು ಖಡ್ಗವನ್ನು ಹಿಡಿಯ ಬೇಕಾಯಿತು, ಇಲ್ಲದಿದ್ದರೆ ಅವರು ಖಡ್ಗ ಹಿಡಿಯದಿದ್ದರೂ ನಿಸ್ಸಂದೇಹವಾಗಿ ಅವರು ತಮ್ಮ ನಾಲಿಗೆಯಿಂದಲೇ ಇಡೀ ಲೋಕವನ್ನು ಜಯಿಸುತ್ತಿದ್ದರು.

**(ಮಲ್‌ಫೂಝಾತ್, ಸಂಪುಟ-2, ಪುಟ-34, ಆವೃತ್ತಿ 2018, ಖಾದಿಯಾನ್)**

**ವಿವಾಹ ಪ್ರಚಾರಪಡಿಸಲು ದಫ್ ಉಪಯೋಗಿಸಬಹುದು ಹೊರತು ಡೋಲು ಬಾರಿಸುತ್ತಾ ಕುಣಿಯುವುದು ನಿಷಿದ್ಧವಾಗಿದೆ**

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ: ಕೆಟ್ಟ ವಸ್ತುಗಳು ಹರಾಮ್ ಆಗಿದೆ ಮತ್ತು ಶುದ್ಧ ವಸ್ತುಗಳು ಹಲಾಲ್ ಆಗಿದೆ. ಅಲ್ಲಾಹನು ಯಾವುದೇ ಶುದ್ಧ ವಸ್ತುಗಳನ್ನು ನಿಷಿದ್ಧ (ಹರಾಮ್) ಗೊಳಿಸುವುದಿಲ್ಲ. ಬದಲು ಎಲ್ಲ ಶುದ್ಧ ವಸ್ತುಗಳು ಹಲಾಲ್ (ಧರ್ಮಬದ್ಧ) ಎನ್ನುತ್ತದೆ. ಆದರೆ ಶುದ್ಧ ವಸ್ತುಗಳೊಂದಿಗೆ ಅಶುದ್ಧ ವಸ್ತುಗಳನ್ನು ಬೆರಕೆ ಮಾಡಿದರೆ ಅದು ನಿಷಿದ್ಧವಾಗುತ್ತದೆ, ಈಗ ನೋಡಿ ವಿವಾಹವನ್ನು ಪ್ರಚಾರಪಡಿಸಲು ದಫ್ ಬಾರಿಸುವುದನ್ನು ಧರ್ಮಸಮ್ಮತವೆಂದಿದೆ. ಆದರೆ ಅದರಲ್ಲಿ ಡೋಲು ಬಾರಿಸುತ್ತಾ ಕುಣಿಯುವುದು ಇತ್ಯಾದಿ ಸೇರಿಸುವುದನ್ನು ನಿಷಿದ್ಧಗೊಳಿಸಲಾಗಿದೆ. ಆದರೆ ನಬಿ ಕರೀಂ ಸಲ್ಲಲ್ಲಾಹು ಅಲೈಹಿವಸಲ್ಲಮರ ರೀತಿಯನ್ನು ಅನುಸರಿಸಿದರೆ ಯಾವುದೂ ನಿಷಿದ್ಧವಲ್ಲ.

**(ಮಲ್‌ಫೂಝಾತ್, ಸಂಪುಟ-5, ಪುಟ-354, ಮುದ್ರಣ ಖಾದಿಯಾನ್ 2003)**

**ತಫ್ಸೀರೆ ಕಬೀರ್**

ದೀರ್ಘ ಸಂಕಟಗಳಿಗೆ ನಾವು ಹೆದರಬಾರದು,
ನಮಗಿಂತ ಮುಂಚೆ ಕ್ರೈಸ್ತ ಸಮುದಾಯದವರಿಗೆ ಮುನ್ನೂರ
ಒಂಬತ್ತು ವರ್ಷಗಳ ಕಾಲ ಹಿಂಸಿಸಲಾಯಿತು
ಆದರೆ ಅವರು ತಾಳ್ಮೆಯಿಂದ ಕೆಲಸ ಮಾಡಿದರು ಮತ್ತು
ಅಂತಿಮವಾಗಿ ಆ ತಾಳ್ಮೆಯ ಸಿಹಿ ಫಲವನ್ನು ಸೇವಿಸಿದರು,
ಆದ್ದರಿಂದ ನೀವು ಆತುರಪಡಬೇಡಿ.
ಬದಲಿಗೆ, ಒಬ್ಬನು ತನ್ನ ಕೆಲಸದಲ್ಲಿ ನಿರತನಾಗಿರಬೇಕು
ಮತ್ತು ತಾಳ್ಮೆಯಿಂದ ತೊಂದರೆಗಳನ್ನು ಎದುರಿಸಬೇಕು

ಸಯ್ಯಿದುನಾ ಹಝ್ರತ್ ಮುಸ್ಲೆಹ್ ಮೌಊದ್(ರ) ಅವರು ಸೂರಾ ಕಹ್ಫ್‌ನ 26 ನೇ ಆಯತ್ **ವಲಬಿಸೂ ಫೀ ಕಹ್ಫಿಹಿಮ್ ಸಲಾಸ ಮಿಅತಿನ್ ಸಿನೀನ ವಝ್‌ದಾದೂ ತಿಸ್‌ಆ** ನ ವ್ಯಾಖ್ಯಾನದಲ್ಲಿ ಹೇಳುತ್ತಾರೆ: ಈ ಆಯತ್‌ನಲ್ಲಿ, ಅಸ್‌ಹಾಬೆ ಕಹ್ಫ್ (ಗುಹೆಯಲ್ಲಿದ್ದ ಜನರ) ಅವರ ತೊಂದರೆಗಳ ಅವಧಿಯನ್ನು ತಿಳಿಸಲಾಗಿದೆ. ಅವರು ಆಗ್ಗಾಗ ಹಿಂಸೆಗೆ ಒಳಗಾದ ಸಂದರ್ಭದಲ್ಲಿ ಅವರು ಮತ್ತೆ ಮತ್ತೆ ಗುಹೆಗಳಲ್ಲಿ ಅಡಗಿ ಕೊಳ್ಳಬೇಕಾಯಿತು. ಇದು ಮುನ್ನೂರ ಒಂಬತ್ತು ವರ್ಷಗಳ ಅವಧಿ ಎಂದು ಅಲ್ಲಾಹನು ಹೇಳುತ್ತಾನೆ. ಇದು ಇತಿಹಾಸದಿಂದ ದೃಢೀಕರಿಸಲ್ಪಟ್ಟಿದೆ ಏಕೆಂದರೆ ಈ ದುಃಖದ ಅವಧಿಯು ಕ್ರಿಸ್ತನ ಶಿಲುಬೆಗೇರಿಸುವಿಕೆಯೊಂದಿಗೆ ಪ್ರಾರಂಭವಾಗುತ್ತದೆ ಮತ್ತು ಕಾನ್ಸ್ಟಂಟೈನ್ (ಕಾನ್ಸ್ಟಾಂಟಿನೋಪಲ್ನ ಸ್ಥಾಪಕ) ಕ್ರಿಶ್ಚಿಯನ್ ಆಗಿದ್ದಾಗ ಶಾಂತಿಯ ಅಂತ್ಯವನ್ನು ಸಾಧಿಸಲಾಯಿತು. ಮೇಲೆ ಬರೆದಂತೆ (ಎನ್ಸೈಕ್ಲೋಪೀಡಿಯಾ ಬ್ರಿಟಾನಿಕಾ, ಸಂಪುಟ-5, ಪುಟ-676) ಕಾನ್ಸ್ಟಂಟೈನ್ ಕ್ರಿ.ಶ. 337 ರಲ್ಲಿ ಕ್ರಿಶ್ಚಿಯನ್ ಆದರು. ಸ್ಪಷ್ಟವಾಗಿ, ಈ ಅವಧಿಯು ಪವಿತ್ರ ಖುರ್‌ಆನ್‌ನ ಹೇಳಿಕೆಗೆ ವಿರುದ್ಧವಾಗಿ ತೋರುತ್ತದೆ, ಆದರೆ ನಾವು ಕ್ರಿಶ್ಚಿಯನ್ ಧರ್ಮದ ಇತಿಹಾಸವನ್ನು ಪರಿಗಣಿಸಿದಾಗ, ಈ ದಿನಾಂಕವು ತಪ್ಪಾಗಿದೆ ಎಂದು ತಿಳಿಯುತ್ತದೆ. ಕಾನ್ಸ್ಟಂಟೈನ್ ಕ್ರಿಶ್ಚಿಯನ್ ಆದ ನಿಜವಾದ ವರ್ಷ 309 ಆಗಿದೆ ಮತ್ತು ಕ್ರಿಶ್ಚಿಯನ್ ಭೂಗೋಳಶಾಸ್ತ್ರಜ್ಞರು ಸ್ವತಃ ಕ್ರಿಶ್ಚಿಯನ್ ಕ್ಯಾಲೆಂಡರ್ ತಪ್ಪಾಗಿದೆ ಎಂದು ಒಪ್ಪಿಕೊಂಡಿದ್ದಾರೆ. ಇದರ ಪುರಾವೆಯಾಗಿ, ಆದ್ದರಿಂದ ಆರ್ಚ್ ಬಿಷಪ್ ಉಷರ್ (Ushers) ತಮ್ಮ ಪುಸ್ತಕದ ಕಾಲಗಣನೆ (Chronology) ಮತ್ತು ಡಾ. ಕ್ಯಾಟೊ ಕಿಟ್ಟೋ ಕ್ರಿಶ್ಚಿಯನ್ ಕ್ಯಾಲೆಂಡರ್‌ನಲ್ಲಿ ಶಿಲುಬೆಯ ಘಟನೆಗೆ ನೀಡಲಾದ ದಿನಾಂಕವು ತಪ್ಪಾಗಿದೆ ಮತ್ತು ಈ ದೋಷವು ಕ್ರಿ.ಶ. 527 ರಲ್ಲಾಗಿದೆ ಎಂದು ತನ್ನ "ಡೈಲಿ ಬೈಬಲ್ ಇಲ್ಲಸ್ಟ್ರೇಶನ್ಸ್" ಪುಸ್ತಕದಲ್ಲಿ ಸಾಬೀತುಪಡಿಸಿದೆ. ವಾಸ್ತವವೆಂದರೆ ಯೇಸು ಕ್ರಿಸ್ತರು ಈ ದಿನಾಂಕಕ್ಕೆ ಕೇವಲ ನಾಲ್ಕು ಅಥವಾ ಆರು ವರ್ಷಗಳ ಮೊದಲು ಜನಿಸಿದರು. ಆದ್ದರಿಂದ ಆ ಸಮಯದಲ್ಲಿ ಅವರು ಕೇವಲ ನಾಲ್ಕರಿಂದ ಆರು ವರ್ಷ ವಯಸ್ಸಿನವರಾಗಿದ್ದರು ಆದರೆ ಮೂವತ್ತಮೂರನೇ ವಯಸ್ಸಿನಲ್ಲಿ ಅವರನ್ನು ಶಿಲುಬೆಯ ಮೇಲೆ ಹಾಕಲಾಯಿತು. ಈಗ ಈ ಹೇಳಿಕೆಯ ಪ್ರಕಾರ, ನಾಲ್ಕು ಮತ್ತು ಆರರ ಸರಾಸರಿಯನ್ನು ತೆಗೆದುಕೊಂಡರೆ, ಅದು ಐದು ಆಗುತ್ತದೆ, ಮೂವತ್ತಮೂರನೇ ವರ್ಷದಲ್ಲಿ ಕ್ರಿಸ್ತನಿಗೆ ಶಿಲುಬೆಯನ್ನು ನೀಡಿದ್ದರಿಂದ, ಕ್ರಿಶ್ಚಿಯನ್ ವರ್ಷದಿಂದ ಇಪ್ಪತ್ತೆಂಟು ವರ್ಷಗಳನ್ನು ಕಳೆಯಬೇಕಾಗುತ್ತದೆ. ಏಕೆಂದರೆ ಕ್ರಿಶ್ಚಿಯನ್ ಕ್ಯಾಲೆಂಡರ್‌ನ ಇಪ್ಪತ್ತೆಂಟು ವರ್ಷಗಳ ನಂತರ ಶಿಲುಬೆ ಸಂಭವಿಸಿದೆ. ಈಗ 337 ರಿಂದ ಇಪ್ಪತ್ತೆಂಟು ವರ್ಷಗಳನ್ನು ತೆಗೆದುಹಾಕಿ ಮತ್ತು ಅದು 309 ವರ್ಷಗಳಾಗುತ್ತದೆ. ಇದು ಕ್ರಿಶ್ಚಿಯನ್ ವರದಿಗಳ ಸರಿಯಾಗಿದೆ ಎಂದು ಸ್ವೀಕರಿಸಿದ್ದರಿಂದಾಗಿದೆ ಇಲ್ಲದಿದ್ದರೆ ಈ ಸಾಕ್ಷ್ಯಾಧಾರಗಳು ಇಲ್ಲದಿದ್ದರೂ, ಪವಿತ್ರ ಖುರ್‌ಆನ್ ಇದರ ಎಲ್ಲಾ ಮಾತುಗಳು ಬೈಬಲ್‌ಗಿಂತ ಸರಿಯಾಗಿದೆ ಎಂದು ಸಾಬೀತಾಗಿದೆ. ಆದಾಗ್ಯೂ, ಅದರ ಮಾತಿಗೆ ಆದ್ಯತೆ ನೀಡಲೇ ಬೇಕಾಗುತ್ತದೆ.

ಈ ಆಯತ್‌ನಲ್ಲಿ, ಸುದೀರ್ಘ ಕಾಲ ಸಂಕಟಗಳಿಗೆ ಹೆದರಬಾರದು. ನಮಗಿಂತ ಮೊದಲಿನ ಕ್ರೈಸ್ತ ಸಮುದಾಯವು ಮುನ್ನೂರ ಒಂಬತ್ತು ವರ್ಷಗಳ ಕಾಲ ನರಳಿದರೂ ತಾಳ್ಮೆಯಿಂದ ಕೆಲಸ ಮಾಡಿದರು ಮತ್ತು ಅಂತಿಮವಾಗಿ ಆ ತಾಳ್ಮೆಯ ಸಿಹಿ ಫಲವನ್ನು ಆಸ್ವಾದಿಸಿದರು. ಆದ್ದರಿಂದ ನೀವು ಆತುರಪಡಬೇಡಿ, ಬದಲಿಗೆ ತಮ್ಮ ಕೆಲಸದಲ್ಲಿ ನಿರತನಾಗಿರಬೇಕು ಮತ್ತು ತಾಳ್ಮೆಯಿಂದ ತೊಂದರೆಗಳನ್ನು ಎದುರಿಸಬೇಕು.

**(ತಫ್ಸೀರ್ ಕಬೀರ್, ಸಂಪುಟ-4, ಪುಟ-440, 2010 ಖಾದಿಯಾನ್)**

-------------*****-------------

**MUSLIM TELEVISION AHMADIYYA INTERNATIONAL**
**www.mta.tv**

*(ಪುಟ ಸಂಖ್ಯೆ 12ರ ಉಳಿದ ಭಾಗ)*

ಆಳವಾದದ್ದಾಗಿದೆ ಮತ್ತು ಜಾಣಭರಿತವಾಗಿದೆ. ಅದೇ ಕಾರಣದಿಂದಾಗಿ ಖಲೀಫರ ವ್ಯಕ್ತಿತ್ವ ಶಾಂತಿ ಸಮಾಧಾನದಿಂದ ಕೂಡಿದ್ದಾಗಿದೆ. ಅವರ ಹೇಳಿಕೆಗಳು ಆಧಾರಸಹಿತವಾಗಿವೆ. ನಾನು ಈ ಮಾತಿನಿಂದಲೂ ತುಂಬಾ ಪ್ರಭಾವಿತಗೊಂಡಿದ್ದೇನೆ. ಖಲೀಫರು ಇಲ್ಲಿ ಕೇವಲ ಇಸ್ಲಾಂ ಧರ್ಮದ ಪ್ರಚಾರ (Propaganda) ಮಾಡಲು ಬಂದಿಲ್ಲ. ಬದಲು ಎಲ್ಲರಿಗೂ ಸಂಬಂಧಿಸಿದ ಮಾತುಗಳನ್ನು ಹೇಳಿದ್ದಾರೆ. ಅದು ಎಲ್ಲರಿಗೂ ಅನಿವಾರ್ಯವಾಗಿವೆ. ಅದೇ ಕಾರಣದಿಂದ ಅವರ ಭಾಷಣ ಕೇಳಲು ತುಂಬಾ ಉತ್ಸಾಹ ದೊರೆಯಿತು.

ಇನ್ನೋರ್ವ ಅತಿಥಿ Andreas Linko ಅವರು ಮಸೀದಿಯ ನೆರೆಹೊರೆಯಲ್ಲಿ ಒಬ್ಬರಾಗಿದ್ದರು. ಅವರು ಪ್ರಾರಂಭದಲ್ಲಿ ಮಸೀದಿಗೆ ವಿರೋಧವಾಗಿದ್ದರು. ಆದರೆ ನಂತರ ಜಮಾಅತಿಗೆ ಮಿತ್ರರಾದರು. ಅವರು ಹೇಳಿದರು. ವಾಸ್ತವದಲ್ಲಿ ನನಗೆ ಎದುರಾದ ಸಮಸ್ಯೆ ಎಂದರೆ ಪಟ್ಟಣ ವ್ಯವಸ್ಥಾಪಕರು ನನ್ನೊಡನೆ ಸತ್ಯ ಮತ್ತು ನೇರವಾಗಿ ಮಾತನಾಡಲಿಲ್ಲ. ಉದಾಹರಣೆಗೆ ನನಗೆ ಹೇಳಲಾಯಿತು. ನಾನು ಖರೀದಿಸುತ್ತಿರುವ ಆಸ್ತಿ ಮತ್ತು ಅದರ ಹತ್ತಿರದ Plot ನಲ್ಲಿ ಒಂದು ಮಸೀದಿ ನಿರ್ಮಾಣಗೊಳ್ಳಲಿದೆ. ಅದು ನಮ್ಮ ಸಮಾಜದಲ್ಲಿ ಸಾಮನ್ಯ ಮಾತಲ್ಲ. ನನ್ನ ಪ್ಲಾಟ್ ಜೊತೆಯಲ್ಲಿ ಇನ್ನೊಂದು ಸಣ್ಣ Plot ಯಿತ್ತು. ಅದನ್ನು ನಾನು ಖರೀದಿಸಬಯಸುತ್ತಿದ್ದೆ, ಅದನ್ನು ನಗರ ವ್ಯವಸ್ಥಾಪಕರು ತಳ್ಳಿ ಹಾಕಿದರು. ಮತ್ತು ನಂತರ ಜಮಾಅತಿಗೆ parking ಸಲುವಾಗಿ ಕೊಟ್ಟರು. ಆ ಕಾರಣದಿಂದಾಗಿ ನನಗೆ ಅನ್ಯಾಯವಾಗಿ ಕಂಡಿತು. ಮತ್ತು ನನಗೆ ಕೋಪವಿತ್ತು. ಇಲ್ಲದಿದ್ದರೆ ಜಮಾಅತ್‌ನೊಂದಿಗೆ ನನ್ನ ಸಂಬಂಧ ಒಳ್ಳೆಯದಾಗಿತ್ತು. ಗೌರವಪೂರ್ಣವಾಗಿತ್ತು. ನನ್ನ ಅನಿಸಿಕೆ ಮೇರೆಗೆ ಖಲೀಫರ ಭಾಷಣ ಅತ್ಯುತ್ತಮವಾಗಿತ್ತು. ಏಕೆಂದರೆ ಜರ್ಮನಿಯಲ್ಲಿ ಇಸ್ಲಾಮಿನ ಚಿತ್ರ ಬಹಳ ಕೆಟ್ಟದಾಗಿದೆ. ಎಲ್ಲದಕ್ಕಿಂತ ಮುಖ್ಯ ಮಾತು ಖಲೀಫರ ಭಾಷಣದಲ್ಲಿ ಯಾವುದು ಇತ್ತೆಂದರೆ, ನಮಗೆ ಇತರರೊಡನೆ ಉತ್ತಮ ಸಂಬಂಧ ಇರಿಸಿಕೊಳ್ಳಬೇಕಾಗಿದೆ. ಮತ್ತು ಶಾಂತಿಯನ್ನು ಸ್ಥಾಪಿಸಲು ಎಲ್ಲರೊಂದಿಗೆ ಸಂಪರ್ಕವಹಿಸಬೇಕಾಗಿದೆ ಮತ್ತು ಗೌರವಿಸಬೇಕಾಗಿದೆ.

Norbert Greulich ಅವರ ಸಂಬಂಧ Protestant church ನಿಂದಿತ್ತು. ಅವರು ನಿವೃತ್ತಿ ಪಡೆದ ನಂತರ ಸಾಮಾಜಿಕ ಕೆಲಸಗಳಲ್ಲಿ ತೊಡಗಿದ್ದರು. ಅವರು ಹೇಳಿದರು. ಖಲೀಫರು ತಮ್ಮ ಭಾಷಣ ತುಂಬಾ ನಿಧಾನವಾಗಿ ಮತ್ತು ತಾಳ್ಮೆವಹಿಸಿ ನೀಡಿದರು ಮತ್ತು ಸ್ಥಳೀಯ ಪರಿಸ್ಥಿತಿಗನುಗಣವಾಗಿ ಭಾಷಣವಿತ್ತು. ಒಂದು ಮಾತು ನನಗೆ ತುಂಬಾ ಮೆಚ್ಚುಗೆಯಾಯಿತು, ಖಲೀಫರು ಅತ್ಯಂತ ಸರಳ ವಿಧಾನದಿಂದ ಅತ್ಯಂತ ಅವಶ್ಯಕವಾದ ಕಾರ್ಯಗಳ ಬಗ್ಗೆ ಮಾತನ್ನಾಡಿದ್ದಾರೆ, ಖಲೀಫರ ಭಾಷಣದ ನಾನು ಅನುವಾದ ಅಷ್ಟೇ ಆಲಿಸಿದ್ದೇನೆ, ಜೊತೆ ಜೊತೆಯಲ್ಲಿ ಖಲೀಫರ ಧ್ವನಿಯನ್ನು ಆಲಿಸಿದ್ದೇನೆ, ಅದು ಬಹಳ ನೆಮ್ಮದಿಯನ್ನುಂಟು ಮಾಡುತ್ತಿತ್ತು. ನನಗೆ ಈ ಮಾತು ಸಹ ತುಂಬಾ ಮೆಚ್ಚುಗೆಯಾಯಿತು, ಖಲೀಫರು ಉತ್ತಮ ಸಂಬಂಧಗಳಿಗಾಗಿ ಹೆಚ್ಚಿನ ಒಲವು ತೋರಿದರು, ನನಗೆ ಇಸ್ಲಾಂ ಅಹ್ಮದಿಅತ್ ಬಗ್ಗೆ ಹೊಸ ಮಾತೇನು ಇರಲಿಲ್ಲ. ಏಕೆಂದರೆ ಅಹ್ಮದಿಯಾ ಜಮಾಅತ್ ಒಂದು ದೀರ್ಘ ಅವಧಿಯಿಂದ ಅರಿತಿರುತ್ತೇನೆ. ನನಗೆ ತಿಳಿದಿದೆ ಅಹ್ಮದಿಯಾ ಜಮಾಅತ್ ಏನನ್ನು ಹೇಳುತ್ತದೆ. ಅದು ಮಾಡಿಯೇ ತೋರಿಸುತ್ತದೆ.

ಇನ್ನೋರ್ವ ಅತಿಥಿ Walter Honz ಅವರು ಸ್ಥಳೀಯ Planning Department ಗೆ ಸಂಬಂಧಿಸಿದವರು, ಅವರು ಹೇಳಿದರು. ನಾನು ಏನೂ ಯೋಚಿಸಿಕೊಂಡು ಅಥವ ಯಾವುದೇ ಭರವಸೆ ಹೊಂದಿ ಇಲ್ಲಿ ಬಂದಿರಲಿಲ್ಲ. ಆದರೆ ಆಶ್ಚರ್ಯಚಕಿತನಾದೆ. ಇದು ಎಂತಹ ಮಹೋನ್ನತ ಸಭೆಯಾಗಿದೆ, ಎಂತಹ ಆದರ್ಶ ಮಾತುಗಳು ಇಲ್ಲಿ ಕೇಳಿ ಬಂದಿವೆ ಮತ್ತು ಅತಿಥಿ ಸತ್ಕಾರ ಎಷ್ಟು ಉತ್ತಮವಾಗಿತ್ತು, ನಾನು ನೆರೆಯ ಊರಿನವನು ನನ್ನ ಬಯಕೆ ಇದೆ. ಅವರು ನಮ್ಮ ಬಳಿಯೂ ಬರಬೇಕು. ನನಗೆ ಈ ಮಾತು ತುಂಬಾ ಮೆಚ್ಚುಗೆಯಾಯಿತು. ಖಲೀಫರು ಮುಂಚಿತವಾಗಿ ತಮ್ಮ ಭಾಷಣ ಸಿದ್ಧಪಡಿಸಿರಲಿಲ್ಲ. ಬದಲು ಸ್ಥಳೀಯ ಪರಿಸ್ಥಿತಿಗನುಗುಣವಾಗಿ ಮತ್ತು ಅಗತ್ಯಗನುಸಾರವಾಗಿ ಮಾತನ್ನಾಡಿದರು ಮತ್ತು ತಮಗಿಂತ ಮೊದಲಿನ ಭಾಷಣಗಾರರ ಭಾಷಣದಿಂದಲೂ ಪ್ರಸ್ತಾಪಿಸಿದರು. ಅದಕ್ಕಿಂತ ಹೆಚ್ಚಾಗಿ ನನಗೆ ಹಿತವೆನಿಸಿದ ಮಾತು, ಖಲೀಫರು ಏನೆಲ್ಲ ಹೇಳಿದ್ದಾರೆ. ಆವೇಶವಿಲ್ಲದೆ ಅತ್ಯಂತ ತಾಳ್ಮೆಯೊಂದಿಗೆ ಮತ್ತು ಅತ್ಯಂತ ನಯವಾದ ರೀತಿಯಲ್ಲಿ ಉತ್ತಮವಾಗಿ ಭಾಷಣ ಮಾಡಿದರು. ನಾನು ಈ ಮಾತಿನಿಂದಲೂ ಪ್ರಭಾವಿತನಾಗಿದ್ದೇನೆ. ಖಲಿಫರ ಆಗಮನ ತುಂಬಾ ಮೌನರೀತಿಯಲ್ಲಿ ನಯವಾಗಿ ಯಾವುದೇ ಆಡಂಬರ ಮತ್ತು ಗರ್ವವಿಲ್ಲದೆ ಆಗಮಿಸಿದರು. ಖಲೀಫರು ತಮ್ಮ ಮಾತುಗಳನ್ನು ಅತ್ಯಂತ ಆರಾಮವಾಗಿ ತಾಳ್ಮೆವಹಿಸಿ ಮತ್ತು ನಿರ್ಲಿಪ್ತತೆಯಿಂದ ವಿವರಿಸಿದ್ದಾರೆ. ಅದರ ಪ್ರಭಾವ ಬಹಳ ಗಾಢವಾಗಿತ್ತು. ನಾನು ಇನ್ನೊಮ್ಮೆ ಹೇಳುತ್ತೇನೆ. ಖಲೀಫರ ವ್ಯಕ್ತಿತ್ವ ಅತ್ಯಂತ ಗೌರವಯುತ ಹಾಗೂ ಸಮಾನತೆಯದ್ದಾಗಿತ್ತು.

ಇನ್ನೋರ್ವ ಅತಿಥಿ Gorkmen Absarsalan ಅವರು Hannau ಯಿಂದ ಆಗಮಿಸಿದ್ದರು. ಅವರು ಹೇಳಿದರು. ನಾನು ಖಲೀಫರಿಗೆ ಭೇಟಿಯಾಗುವ ಮುಂಚೆ ತುಂಬಾ nervous ಆಗಿದ್ದೆ, ಅವರನ್ನು ನೇರವಾಗಿ ನೋಡಿ ಚಕಿತನಾದೆ. ಖಲೀಫ‌ರ ಭಾಷಣ ನನಗೆ ಅತ್ಯಂತ ಪ್ರಭಾವಶಾಲಿಯಾಗಿತ್ತು. ಮತ್ತು ಕಟು ಸತ್ಯವಾಗಿತ್ತು. ಮತ್ತು ಬಹಳ ಅಗತ್ಯವಾಗಿತ್ತು. ಏಕೆಂದರೆ ಯಾವ ಮುಖ್ಯ ಮಾತುಗಳನ್ನು ಖಲೀಫರು ಆಡಿದ್ದಾರೆ, ಅದನ್ನು ನಾವು ಕೆಲವೊಮ್ಮೆ ಮರೆತಿರುತ್ತೇವೆ. ಅವರಿಗೆ ಹುಝೂರರ ಯಾವ ಮಾತು ನಿಮಗೆ ತುಂಬಾ ಇಷ್ಟವಾಗಿದೆ ಎಂದು ಕೇಳುವಾಗ ಅವರು ಹೇಳಿದರು, ನನಗೆ ಇಡೀ ಭಾಷಣವೇ ತುಂಬಾ ಇಷ್ಟವಾಗಿದೆ, ಅದರಲ್ಲಿ ಒಂದು ಮಾತು ಸಹ ಕಡಿಮೆ ಇಷ್ಟವಾದುದು ಎಂದು ಹೇಳುವಂತಿಲ್ಲ.

ಓರ್ವ ಮಹಿಳಾ ಅತಿಥಿ Astrid Bergman ಅವರ ಬರಲಿರುವ ರಾಜ್ಯ ಚುನಾವಣೆಯಲ್ಲಿ ಅಭ್ಯರ್ಥಿಯಾಗಿದ್ದಾರೆ, ಅವರು ಹೇಳಿದರು. ನನಗೆ ಓರ್ವ ಮಹಿಳೆಯಾದ ನೆಲೆಯಲ್ಲಿ ಖಲೀಫರ ಭಾಷಣದಿಂದ ಮಹಿಳೆಯರ ಹಕ್ಕುಗಳ ಬಗ್ಗೆ ಹೇಳಿದ್ದು ತುಂಬಾ ಇಷ್ಟವಾಯಿತು. ಅದರಿಂದ ತುಂಬಾ ಪ್ರಭಾವಿತಗೊಂಡಿದ್ದೇನೆ. ನಾನು ಈ ಮಾತನ್ನು ಸಮರ್ಥಿಸದೇ ಇರಲು ಸಾಧ್ಯವಿಲ್ಲ, ಖಲೀಫರ ವ್ಯಕ್ತಿತ್ವ ಅತ್ಯಂತ ಶಾಂತಮಯವಾಗಿದೆ. ಖಲೀಫರ ವ್ಯಕ್ತಿತ್ವ ತುಂಬಾ ಪ್ರೀತಿಯದ್ದಾಗಿದೆ. ಧನ್ಯತೆ ಅನಿಸುತ್ತದೆ. ಕೇವಲ ಅನುವಾದ ಅಷ್ಟೇ ಆಲಿಸುವಂತಾಗಲಿಲ್ಲ. ಅವರ ಧ್ವನಿಯು ಆಲಿಸುವ ಅವಕಾಶ ದೊರೆತಿದೆ. ಏಕೆಂದರೆ ಅವರ ಧ್ವನಿ ತುಂಬಾ ಸುಂದರವಾಗಿದೆ.

ಇನ್ನೋರ್ವ ಮಹಿಳಾ ಅತಿಥಿ F. Sabimen ಅವರು ಓರ್ವ ಸಾಮಾಜಿಕ ಕಾರ್ಯಕರ್ತೆಯಾಗಿದ್ದಾರೆ, ಅವರು ತಮ್ಮ ಅನಿಸಿಕೆಗಳನ್ನು ಹೇಳುತ್ತಾ ಜಮಾಅತಿನ ಕಾರ್ಯಕ್ರಮಗಳ ಬಗ್ಗೆ ಮತ್ತು ಜಮಾಅತಿನ ಧ್ಯೇಯವಾಕ್ಯ, ಪ್ರೀತಿ ಎಲ್ಲರುಲ್ಲೂ ದ್ವೇಷವಿಲ್ಲ ಯಾರಲ್ಲೂ, ಬಹಳ ಪ್ರಶಂಸಿಸಿದರು. ಆದರೆ ಅವರಿಗೆ ನಿಮಗೆ ಕಾರ್ಯಕ್ರಮದಲ್ಲಿ ಎಲ್ಲದಕ್ಕಿಂತ ಯಾವ ಮಾತು ಹಿತವೆನಿಸಿದೆ ಎಂದು ಕೇಳಿದಾಗ, ಅವರು ಉತ್ತರ ನೀಡಿದರು. ಈ ಎಲ್ಲಾ ಕಾರ್ಯಕ್ರಮದಲ್ಲಿ ನನಗೆ ಅತ್ಯಂತ ಒಳ್ಳೆಯದ್ದು ಎಂದರೆ ಖಲೀಫರ ವ್ಯಕ್ತಿತ್ವ ಆಗಿತ್ತು. ಏಕೆಂದರೆ ಅವರಲ್ಲಿ ಕಾಂತಿಯ ಗುಣವಿದೆ. ಅವರು ತುಂಬಾ ಪ್ರಭಾವಶಾಲಿ ವ್ಯಕ್ತಿಯಾಗಿದ್ದಾರೆ.

ಇನ್ನೋರ್ವ ಮಹಿಳೆ Lucia Worner ಅವರು ಬ್ಯಾಂಕಿನಲ್ಲಿ ಕೆಲಸ ಮಾಡುತ್ತಾರೆ, ಮತ್ತು ನೆರೆಯ ಊರಿನಲ್ಲಿ CDU ಪಕ್ಷದ ಪ್ರತಿನಿಧಿಯಾಗಿದ್ದಾರೆ. ಅವರು ಹೇಳಿದರು. ಈ ಸಭೆಯಲ್ಲಿ ನನ್ನನ್ನು ಆಹ್ವಾನಿಸಿದರು. ನನಗೆ ತುಂಬಾ ಸಂತೋಷವಿದೆ. ಈ ಸಭೆ ಇಷ್ಟೊಂದು ಉತ್ಕೃಷ್ಟವಾಗಿರುವುದು ಎಂದು ನಾನು ಊಹಿಸಿರಲಿಲ್ಲ. ಖಲೀಫರ ಭಾಷಣದಿಂದ ನನಗೆ ತಿಳಿಯಿತು. ನಮ್ಮಲ್ಲಿ ಪರಸ್ಪರ ಒಂದೇ ರೀತಿಯ ಮಾತುಗಳು ಬಹಳಷ್ಟಿದೆ. ಖಲೀಫರ ಭಾಷಣ ತುಂಬಾ ಒಳ್ಳೆಯದಾಗಿತ್ತು. ನನಗೆ ಇಸ್ಲಾಮಿನಲ್ಲಿ ಮಹಿಳೆಯರ ಹಕ್ಕುಗಳ ಬಗ್ಗೆ ಆಡಿದ ಮಾತುಗಳು ಹೊಸದೇನು ಇರಲಿಲ್ಲ. ಏಕೆಂದರೆ ನಾನು ಕೆಲಸ ನಿರ್ವಹಿಸುತ್ತಿರುವ ಬ್ಯಾಂಕಿನಲ್ಲೇ ಮುಸ್ಲಿಂ ಮಹಿಳೆಯರು ಹಕ್ಕಗುಳ ಬಗ್ಗೆ ಇರುವ ಶಿಕ್ಷಣ ವ್ಯಕ್ತವಾಗುತ್ತದೆ.

ಅವರ ಪತಿಯು ಸಹ ಅವರ ಜೊತೆಗಿದ್ದರು. ಅವರು ಹೇಳಿದರು. ಖಲೀಫರ ಭಾಷಣ ಹೇಗಿತ್ತೆಂದರೆ, ಇಂತಹ ಭಾಷಣ ಜರ್ಮನಿಯವರಿಗೆ ಕೇಳುವ ಅವಕಾಶ ದೊರೆಯುವುದಿಲ್ಲ, ಆದರೆ ಇದೊಂದು ಮಹೋನ್ನತ ಭಾಷಣವಾಗಿತ್ತು. ಏಕೆಂದರೆ ಅದರಿಂದ ಸ್ಪಷ್ಟವಾಗುತ್ತದೆ. ನಮ್ಮಲ್ಲಿ ಬಹಳಷ್ಟು ವಿಷಯಗಳು ಒಂದೇ ರೀತಿಯದ್ದಾಗಿವೆ. ಅದರ ಮೇಲೆ ಗಮನ ನೀಡುವ ಅವಶ್ಯಕತೆ ಇದೆ. ಆಗ ಮಾತ್ರ ನಾವು ಶಾಂತಿಯನ್ನು ಸ್ಥಾಪಿಸಬಲ್ಲೆವು.

**31 ಆಗಸ್ಟ್ 2023 ಗುರುವಾರ**

ಹುಝೂರ್ ಅನ್ವರ್[ಅತಬಅ] ಮುಂಜಾನೆ 5.40 ಗಂಟೆಗೆ ಆಗಮಿಸಿ ಫಜರ್ ನಮಾಝ್ ನಿರ್ವಹಿಸಿಕೊಟ್ಟರು. ನಮಾಝ್ ನಿರ್ವಹಣೆಯ ನಂತರ ಹುಝೂರ್ ತಮ್ಮ ವಸತಿಯತ್ತ ತೆರಳಿದರು.

ಮುಂಜಾನೆ ಹುಝೂರ್ ಅನ್ವರ್[ಅತಬಅ] ಕಚೇರಿ ಅಂಚೆಗಳು, ಪತ್ರಗಳು ಮತ್ತು ವರದಿಗಳನ್ನು ಪರಿಶೀಲಿಸಿದರು. ಇಲ್ಲಿ ಜರ್ಮನಿ ಪ್ರವಾಸದ ನಡುವೆಯೂ ಲೋಕದ ವಿವಿಧ ದೇಶಗಳಿಂದ ಕ್ರಮಬದ್ಧವಾಗಿ ಪತ್ರಗಳು ಮತ್ತು ವರದಿಗಳು ಹುಝೂರರಿಗೆ ತಲುಪುತ್ತವೆ. ಜರ್ಮನಿಯಿಂದಲೂ ನೂರಾರು ಸಂಖ್ಯೆಯಲ್ಲಿ ಪತ್ರಗಳು ಹುಝೂರ್ ಅನ್ವರ್[ಅತಬಅ]ರ ಸೇವೆಯಲ್ಲಿ ಬರುತ್ತಿವೆ. ಹುಝೂರ್ ಅನ್ವರ್[ಅತಬಅ] ಇವೆಲ್ಲ ಪತ್ರಗಳನ್ನು, ವರದಿಗಳನ್ನು ಮತ್ತು ಅಂಚೆಯನ್ನು ಸ್ವತ: ತಾವೇ ಪರಿಶೀಲಿಸಿ ಟಿಪ್ಪಣಿಗಳನ್ನು ಬರೆಯುತ್ತಾರೆ. ಇದು ದಿನನಿತ್ಯ ನಡೆಯುವ ಕಾರ್ಯವಾಗಿದೆ.

2 ಗಂಟೆಗೆ ಹುಝೂರ್ ಅನ್ವರ್[ಅತಬಅ] ಆಗಮಿಸಿ ಝುಹರ್

ಮತ್ತು ಅಸರ್ ನಮಾಝ್ ಜಮಾ ಮಾಡಿ ನಿರ್ವಹಿಸಿಕೊಟ್ಟರು. ನಮಾಝ್ ನಿರ್ವಹಣೆಯ ನಂತರ ಹುಝೂರ್ ಅನ್ವರ್(ಅತಬಅ) ತಮ್ಮ ವಸತಿನಿಲಯಕ್ಕೆ ತೆರಳಿದರು.

ಇಂದು ಕಾರ್ಯಕ್ರಮದನ್ವಯ Stuttgart ಸಮಾರಂಭ ಸ್ಥಳಕ್ಕೆ ಹೋಗಬೇಕಾಗಿತ್ತು 5.15 ಕ್ಕೆ ಹುಝೂರ್ ಅನ್ವರ್(ಅತಬಅ) ತನ್ನ ವಸತಿ ನಿಲಯದಿಂದ ಹೊರಗೆ ಬಂದರು. ಮತ್ತು ದುಆ ಮಾಡಿದರು. ನಂತರ ಇಲ್ಲಿಂದ Stuttgart ಗೆ ಪ್ರಯಾಣ ಬೆಳೆಸಿದರು.

ಬೈತುಸ್ಸುಬೂಹ್ ಫ್ರೆಂಕ್‌ಫರ್ಟ್‌ಯಿಂದ Stuttgart ಗಿರುವ ದೂರ 220 ಕಿ.ಮೀ ಆಗಿದೆ. ಈ ಹೊಸ ಜಾಗದಲ್ಲಿ ಅಹ್ಮದಿಯಾ ಜಮಾಅತ್ ಜರ್ಮನಿಯ ವಾರ್ಷಿಕ ಸಮಾವೇಶವು ಅಹ್ಮದಿಯಾ ಜಮಾಅತ್ ಜರ್ಮನಿಯ ವಾರ್ಷಿಕ ಸಮಾವೇಶವು ನಡೆಯುತ್ತಿರುವುದು ಮೊದಲನೆಯ ಬಾರಿಯಾಗಿದೆ. ಈ ಜಲ್ಸಕ್ಕೆ ನಡೆಯುತ್ತಿರುವುದು ಮೊದಲನೆಯ ಬಾರಿಯಾಗಿದೆ. ಈ ಜಲ್ಸಕ್ಕೆ ಮಹತ್ವ ಬರಲು ಇನ್ನೊಂದು ಕಾರಣವೆಂದರೆ ಜರ್ಮನಿಯಲ್ಲಿ ಜಮಾಅತ್ ಸ್ಥಾಪನೆಗಾಗಿ 100 ವರ್ಷ ಪೂರ್ಣಗೊಂಡಿವೆ. ಇದು ಜರ್ಮನಿ ಜಮಾಅತಿನ 47ನೇ ವಾರ್ಷಿಕ ಸಮ್ಮೇಳನವಾಗಿದೆ.

ಜಲ್ಸ ಸಾಲಾನ ಜರ್ಮನಿಯ ಪ್ರಾರಂಭ 1975 ರಂದು ಮಸ್ಜಿದ್ ಫಝ್ಲುಲ್ ಹೆಂಬರ್ಗ್‌ನಲ್ಲಾಯಿತು ಅಲ್ಲಿ ಸುಮಾರು 70 ಜನರು ಭಾಗವಹಿಸಿದ್ದರು. ಅನಂತರ ಅಲ್ಲಾಹನ ಅನುಗ್ರಹದಿಂದ ಬರುವ ಪ್ರತಿಯೊಂದು ಜಲ್ಸ ಇನ್ನಷ್ಟು ಅನುಗ್ರಹಗಳಿಗೆ ಪಾತ್ರವಾಯಿತು. ಮತ್ತು ಭಾಗಿಯಾಗುವವರ ಸಂಖ್ಯೆ ಹೆಚ್ಚುತ್ತಲೇ ಹೋಯಿತು. ಇಲ್ಲಿಯವರೆಗೆ ವಾರ್ಷಿಕ ಸಮ್ಮೇಳನಗಳು ನಾಸಿರ್ ಬ್ಯಾಗ್ (Gross Gerau) ನಲ್ಲಿ ನಡೆಯುತ್ತಿದ್ದವು. ಈ ಸ್ಥಳವು ಸಾಕಾಗಲಿಲ್ಲ. ಮತ್ತೆ ಫ್ರೆಂಕ್‌ಫರ್ಟ್‌ನಿಂದ 92 ಕಿಮೀ ದೂರವಿರುವ Mannheim ನಲ್ಲಿ ವಾರ್ಷಿಕ ಸಮ್ಮೇಳನಗಳನ್ನು ಆಯೋಜಿಸತೊಡಗಿದರು. ವರ್ಷಾವಾರು 2010 ರವರೆಗೆ ಇಲ್ಲಿಯೇ ವಾರ್ಷಿಕ ಸಮ್ಮೇಳಗಳು ನಡೆದವು. ಅಲ್ಲಾಹನ ಅನುಗ್ರಹದಿಂದ ಜಮಾಅತಿನ ಸಂಖ್ಯೆ ಎಷ್ಟು ವೇಗವಾಗಿ ಬೆಳೆಯಿತೆಂದರೆ ಇಂತಹ ವಿಶಾಲವಾದ ಜಾಗವು ಸಾಕಾಗಲಿಲ್ಲ ಎಂಬುದಾಯಿತು. 2011 ರಿಂದ ಫ್ರೆಂಕ್‌ಫರ್ಟ್‌ನಿಂದ 160 ಕಿ.ಮೀ ದುರದ ನಗರ Karisouhe ನಲ್ಲಿ ವಾರ್ಷಿಕ ಸಮ್ಮೇಳನ ನಡೆಸತೊಡಗಿದರು. ಈ ಸ್ಥಳ K.messe ಎನ್ನಲಾಗುತ್ತದೆ. ಅದರ ವಿಶಾಲತೆಯನ್ನು ಅಂದಾಜಿಸಬೇಕಾದರೆ ಅದರ ಒಟ್ಟು ವಿಸ್ತೀರ್ಣ ಒಂದು ಲಕ್ಷ 50 ಸಾವಿರ ಚ.ಮೀ ಆಗಿದೆ ಮತ್ತು ಅದು ಒಳಗೊಂಡ ಭಾಗ 70 ಸಾವಿರ ಚದರ ಮೀಟರ್ ಆಗಿದೆ. ಅದರಲ್ಲಿ 4 ದೊಡ್ಡ ಸಭಾಂಗಣಗಳಿದ್ದವು. ಪ್ರತಿಯೊಂದು ಸಭಾಂಗಣದ ವಿಸ್ತೀರ್ಣ 1250 ಚ.ಮೀ ಇದೆ. ಪ್ರತಿಯೊಂದು ಸಭಾಂಗಣದಲ್ಲಿ ಕುಳಿತುಕೊಳ್ಳಲು 1200 ಕುರ್ಚಿಗಳಿದ್ದವು. ಮತ್ತು 1800 ಜನರು ನಮಾಝ್ ಮಾಡಬಹುದಾಗಿತ್ತು.

2019 ನೇ ವರ್ಷದ ಕೊನೆಯ ಸಮಾವೇಶದಲ್ಲಿ ಅದು ಹುಝೂರ್ ಅನ್ವರ್(ಅತಬಅ) ಅವರ ಉಪಸ್ಥಿತಿಯಲ್ಲಿ ಆಗಿತ್ತು, 42 ಸಾವಿರಕ್ಕಿಂತ ಹೆಚ್ಚು ಜನರು ಸೇರಿದ್ದರು. ಜಲ್ಸದ ಇತರ ಎಲ್ಲಾ ವ್ಯವಸ್ಥೆಗಳಿದ್ದರೂ ಈ ಜಾಗ ಸಂಕುಚಿತವಾಯಿತು. ಆದ್ದರಿಂದ ಜರ್ಮನಿ ಜಮಾಅತ್ ಹೊಸ ಸ್ಥಳ ಹುಡುಕಲು ಪ್ರಾರಂಭಿಸಿತು. ಅಂತಿಮವಾಗಿ Messe Stutlart ನಲ್ಲಿ ಜಲ್ಸ ಏರ್ಪಡಿಸುವ ನಿರ್ಣಯ ಕೈಗೊಳ್ಳಲಾಯಿತು.

Stuttgart ನಗರ ಜರ್ಮನಿಯ Baden Wontemburg ಪ್ರಾಂತದ ರಾಜಧಾನಿಯಾಗಿದೆ. 6 ಲಕ್ಷ 30 ಸಾವಿರ ಜನಸಂಖ್ಯೆ ಒಳಗೊಂಡಿದೆ. ಇದು ಜರ್ಮನಿಯ 6ನೇ ಅತಿದೊಡ್ಡ ನಗರವಾಗಿದೆ. ಜರ್ಮನಿಯ ಸುಪ್ರಸಿದ್ಧ ಮರ್‌ಸಿಡ್ಸ್ ವಾಹನಗಳನ್ನು ತಯಾರಿಸುವ ಕಂಪನಿ ಮತ್ತು ಪೋರ್‌ಶೆಯು ಕೇಂದ್ರವಾಗಿದೆ. ಧಾರ್ಮಿಕ ನೆಲೆಯಲ್ಲಿ ನೋಡುವುದದರೆ ಕ್ರಿಸ್ತರ ಎರಡು ದೊಡಡ ಪಂಥಗಳ ರಾಜ್ಯದ ಕೇಂದ್ರವು ಆಗಿದೆ. ಆರ್ಥಿಕ ನೆಲೆಯಲ್ಲೂ ಇದು ಲೋಕದ ಅಭಿವೃದ್ಧಿಗೊಂಡ ನಗರಗಳಲ್ಲಿ ಇದನ್ನು ಗಣಿಸಲಾಗುತ್ತದೆ.

Messe suttgart 10 ಸಭಾಂಗಣಗಳನ್ನು ಒಳಗೊಂಡಿದೆ. ಅದರಲ್ಲಿ 7 ಸಭಾಂಗಣಗಳು ಹತ್ತು ಸಾವಿರ ಐದು ನೂರು ಚ. ಮೀ ಹೊಂದಿವೆ. ಅದೇ ರೀತಿಯಲಿಲ ಒಂದು Multi Funcitonal Hall 26800 ಚ. ಮೀ ವಿಸ್ತೀರ್ಣದ್ದಾಗಿದೆ. ಇದು ಅಲ್ಲಿಯ ಅತಿ ದೊಡ್ಡ ಸಭಾಂಗಣವಾಗಿದೆ.

ಸಭಾಂಗಣ ಸಂಖ್ಯೆ ಹತ್ತರ ವಿಸ್ತೀರ್ಣ 14600 ಚ.ಮೀ ಮತ್ತು ಇನ್ನೊಂದು ಸಭಾಂಗಣ International congress center ಸುಮಾರು 4900ಚ.ಮೀ ಒಳಗೊಂಡಿದೆ. ಹೀಗೆ ಈ ವರ್ಷ ಆಯೋಜಿಸಲಾಗುವ ವಾರ್ಷಿಕ ಸಮ್ಮೇಳನ ಸುಮಾರು ಒಂದು ಲಕ್ಷ 20 ಸಾವಿರ ಚ.ಮೀ ಒಳಗೊಂಡಿದೆ. ಅದೇ ರೀತಿ ಸ್ವತಂತ್ರವಾಗಿ ತಿರುಗಾಡುವ ಸ್ಥಳವೂ 3500 ಚ. ಮೀನಷ್ಟಿದೆ. ಹೀಗೆ ಈ ಸ್ಥಳ ತನ್ನ ವಿಸ್ತೀರ್ಣದ ಪ್ರಯುಕ್ತ ಜರ್ಮನಿಯ 8ನೇ ದೊಡ್ಡ ಜಾಗವಾಗಿದೆ.

ಸಭಾಂಗಣಗಳ ನಡುವೆ ಒಂದು ಸುಂದರವಾದ Atorium ಸಹ ಇದೆ. ಅದರ ಹರಡುವಿಕೆ ಒಂದು ಸಾವಿರ ಹದಿನೈದು ಚ.ಮೀ ಆಗಿದೆ. ಅಲ್ಲಿಂದ ಬೀಳುವ ಜಲಪಾದ ರೀತಿಯ ನೀರು ಮನಮೋಹಕ ದೃಶ್ಯವಾಗಿದೆ ಎಲ್ಲಾ ಸಭಾಂಗಣಗಳ ಉತ್ತರ ದಕ್ಷಿಣ ಭಾಗಗಳಲ್ಲಿ ತಿಥಿ (ಶೌಚಾಲಯ) ಕಟ್ಟಲಾಗಿದೆ. ಅದರ ಸಂಖ್ಯೆ ಸುಮಾರು 400 ಆಗಿವೆ. ಇಲ್ಲಿ ಸಾಮೂಹಿಕವಾಗಿ ಹತ್ತು ಸಾವಿರ ವಾಹನಗಳನ್ನು ನಿಲ್ಲಿಸಬಹುದಾಗಿದೆ.

ನಗರದ Internatioinal Air Port ಇಲ್ಲಿಂದ ಜಲ್ಸ ಸ್ಥಳ 10 ನಿಮಿಷದಲ್ಲಿ ಕಾಲ್ನಡಿಗೆಯಿಂದ ಹೋಗುವಷ್ಟು ದೂರದಲ್ಲಿದೆ. ಹಲವು ಪ್ರಯಾಣಿಕರು ಕಾಲ್ನಡಿಗೆಯಲ್ಲೇ ಜಲ್ಸಕ್ಕೆ ಬರುತ್ತಾರೆ. ಒಂದು ಅಂದಾಜಿನ ಪ್ರಕಾರ ದಿನಾಲೂ ಹತ್ತು ಸಾವಿರ ಪ್ರಯಾಣಿಕರು ಈ ವಿಮಾನ ನಿಲ್ದಾಣದಿಂದ ಪ್ರಯಾಣ ಮಾಡುತ್ತಾರೆ.

ಜಲ್ಸ ಸ್ಥಳದ ಸಮೀಪದಲ್ಲೇ ಸ್ಥಳೀಯ ಜಮಾಅತುಗಳು ಸಹ ಇವೆ. Stattgart ಜಮಾಅತ್ ಅಲ್ಲದೇ ಈಟಜಜಡಿಣಜಣ ಜಮಾಅತ್, ಇಟಟಟಿಂಜಟ ಜಮಾಅತ್ 15 ರಿಮದ 20 ಕಿ.ಮೀನಷ್ಟು ದುರದಲಿಲವೆ. ಅದೇ ರೀತಿಯಲ್ಲಿ Waiblingen ಜಮಾಅತ್, ಖಜಣಣಟಿಂಜಟ ಜಮಾಅತ್ ಮತ್ತು Remingen ಜಮಾಅತ್ ಸಹ ಇದೆ. ಅದರ ಉದ್ಘಾಟನೆ ಹುಝೂರ್ ಅನ್ವರ್(ಅತಬಅ) 2018 ರಲ್ಲಿ ಮಾಡಿದ್ದರು.

2 ಗಂಟೆ 35 ನಿಮಿಷ ಪ್ರಯಾಣದ ನಂತರ ಹುಝೂರ್ ಅನ್ವರ್(ಅತಬಅ) 7 ಗಂಟೆ 50 ನಿಮಿಷಕ್ಕೆ ಜಲ್ಸ ಸ್ಥಳಕ್ಕೆ ತಲುಪಿದರು. ಇಲ್ಲಿ ಉಪಸ್ಥಿತರಿದ್ದ ಜಲ್ಸ ಸ್ಥಳದ ಕಾರ್ಯಕರ್ತರು ಮತ್ತು ಜಮಾಅತ್ ಬಾಂಧವರು, ಸಾವಿರಾರು ಸಂಖ್ಯೆಯಲ್ಲಿ ಹಾಜರಿದ್ದರು. ತುಂಬು ಉತ್ಸಾಹದಿಂದ ಘೋಷಣೆಗಳನ್ನು ಕೂಗುತ್ತಾ ಹುಝೂರ್ ಅನ್ವರ್(ಅತಬಅ) ಅವರನ್ನು ಸ್ವಾಗತಿಸಿದರು.

ಹುಝೂರ್ ಅನ್ವರ್(ಅತಬಅ) ವಾಹನದಿಂದ ಹೊರ ಬರುತ್ತಲೇ ಮಾನ್ಯ ಮುಹಮ್ಮದ್ ಇಲ್ಯಾಸ್ ಸಾಹಿಬ್ ಮಜೂಖಾ ಸಾಹಿಬ್ ಅಫ್ಸರ್ ಜಲ್ಸ ಸಾಲಾನ, ಮಾನ್ಯ ಸದಾಖತ್ ಅಹ್ಮದ್ ಸಾಹಿಬ್ ಅಫ್ಸರ್ ಜಲ್ಸಗಾಹ್ ಮತ್ತು ಮಾನ್ಯ ತಾರಿಖ್ ಝುಫರ್ ಸಾಹಿಬ್ ಅಫ್ಸರ್ ಖಿದ್‌ಮತ್ ಖಲ್ಕ್ ಹುಝೂರ್ ಅನ್ವರ್(ಅತಬಅ) ಅವರಿಗೆ ಶುಭಾಗಮನ ಕೋರಿದರು. ನಂತರ ಹುಝೂರ್ ಅನ್ವರ್(ಅತಬಅ) ಸ್ವಲ್ಪ ಕಾಲಕ್ಕಾಗಿ ವಸತಿ ನಿಲಯ ಕಡೆ ಹೋದರು.

8.35 ಗಂಟೆಗೆ ಹುಝೂರ್ ಅನ್ವರ್(ಅತಬಅ) ತಮ್ಮ ವಸತಿ ನಿಲಯದಿಂದ ಹೊರಗೆ ಬಂದರು. ಮೊಟ್ಟ ಮೊದಲಿಗೆ messe stuttgart ನ ನಿರ್ವಹಕರು (ಅದರಲ್ಲಿ ಈ ಕಾಂಪ್ಲೆಕ್ಸ್ managements chief executive ಸಹ ಸೇರಿದ್ದರು). ಹುಝೂರ್ ಅನ್ವರ್(ಅತಬಅ) ಅವರೊಂದಿಗೆ ಭೇಟಿ ಮಾಡುವ ಭಾಗ್ಯ ಪಡೆದರು.

Chief exectutive ಹೇಳಿದರು. ನಾವು Karlsruhe ಗೆ ಹೋಗಿ ಜಲ್ಸ ನೋಡಿದ್ದೆವು. ನಮ್ಮ ಅಭಿಲಾಷೆಯಿತ್ತು. ಜಮಾಅತ್ ಇಲ್ಲಿ ಒಂದು ಜಲ್ಸ ಏರ್ಪಡಿಸಬೇಕು. ಆಗ ಹುಝೂರ್ ಅನ್ವರ್(ಅತಬಅ) ಹೇಳಿದರು. ಧನ್ಯವಾದಗಳು ನೀವು ಬಹಳ ಉತ್ತಮ ಜಾಗವನ್ನು ಜಲ್ಸಕ್ಕಾಗಿ ನೀಡಿದ್ದೀರಿ.

ಅವರು ಹೇಳಿದರು: ಅಹ್ಮದಿ ಕಾರ್ಯಕರ್ತರು ತುಂಬಾ ಒಳ್ಳೆಯ ರೀತಿಯಲ್ಲಿ ಕಾರ್ಯ ನಿರ್ವಹಿಸುತ್ತಾರೆ. ಅಪ್ಪಟ Professional ರೀತಿಯಲ್ಲಿ, ನಾನು ಅವರಿಗೆ ತಮ್ಮ ಕಂಪನಿಯಲ್ಲಿ ಇರಿಸಲು ಸಿದ್ಧನಿದ್ದೇನೆ. ಹುಝೂರ್ ಅನ್ವರ್(ಅತಬಅ) ಮುಗುಳ್ನಗುತ್ತಾ ಹೇಳಿದರು. ನನ್ನ ಕಡೆಯಿಂದ ಅನುಮತಿ ಇದೆ.

ಹುಝೂರ್ ಅನ್ವರ್(ಅತಬಅ) ಕೇಳಿದರು. ಈ ಜಾಗ ನಗರದ ಒಳಗೆ ಬರುತ್ತದೆಯೇ, ಅವರು ಹೇಳಿದರು, ಈ ಜಾಗ ನಗರದಿಂದ ಒಂದಿಷ್ಟು ದೂರವೇನಿದೆ. ಆದರೆ ಈ ಮೂರು ದಿನಗಳಲ್ಲಿ ನಾವು ತಮ್ಮನ್ನು ನಗರ ಒಳಗಡೆಯಮತೆ ಅನುಭವಿಸುವಮತಾಗಿದೆ. parking ವಿಷಯದಲ್ಲಿ ಹುಝೂರ್ ಅನ್ವರ್(ಅತಬಅ) ವಿಚಾರಿಸಿದಾಗ ಅವರು ಹೇಳಿದರು. ಇಲ್ಲಿ ಹತ್ತು ಸಾವಿರ ವಾಹನಗಳನ್ನು ನಿಲ್ಲಿಸುವಷ್ಟು ಸ್ಥಳವಿದೆ. ಅದೇ ರೀತಿ ಇಲ್ಲಿಂದ ವಿಮಾನ ನಿಲ್ದಾಣ ತುಂಬಾ ಹತ್ತಿರದಲ್ಲಿದೆ. 300 ಮೀಟರ್ ಕಾಲ್ನಡಿಗೆಯಲ್ಲಿ ಜನರು ಇಲ್ಲಿಗೆ ಬರುತ್ತಾರೆ.

ಅನಂತರ ಹುಝೂರ್ ಅನ್ವರ್(ಅತಬಅ) ಜಲ್ಸ ಸಾಲಾನದ ವೀಕ್ಷಣೆ ಪ್ರಾರಂಭಿಸಿದರು. ಒಂದು ಕಡೆ ಬ್ರಿಟಾನಿಯಾದಿಂದ Bycle ಮೇಲೆ ಬಂದವರ ತಂಡದವರು ನಿಂತುಕೊಂಡಿದ್ದರು. ಹುಝೂರ್ ಅನ್ವರ್(ಅತಬಅ) ಪ್ರೀತಿಯಿಂದ ಅವರ ಬಗ್ಗೆ ವಿಚಾರಿಸಿದರೆ, ಎಲ್ಲರೂ ಕ್ಷೇಮವಾಗಿದ್ದಾರೆಯೇ ಮತ್ತು ಕೊನೆಯ ದಿನ ಎಷ್ಟು ದೂರದ ಪ್ರಯಾಣ ಮಾಡಿದ್ದೀರಿ ಎಂದು ಕೇಳಿದರು. ಆಗ ಆ ತಂಡದ ನಾಯಕರಾದ ಇಜಾಝ್ ಅಹ್ಮದ್ ತಾಹಿರ್ ಸಾಹಿಬ್ ಹೇಳಿದರು. ಕೊನೆಯ ದಿನ 129 ಕಿ.ಮೀ ದೂರ ಕ್ರಮಿಸಿದ್ದೇವೆ. ಅದರಲ್ಲಿ ಸುಮಾರು 1000 ಮೀಟರ್ ದೂರ ತುಂಬಾ ಎತ್ತರ

ಪ್ರದೇಶದ್ದಾಗಿತ್ತು. ಹುಝೂರ್ ಅನ್ವರ್(ಅತಬಅ) ಮಜ್‌ಲಿಸ್ ಅನಸರುಲ್ಲಾ ಅವರಿಗೆ Cycling ಮಾಡಲು ಹೇಳಿದ್ದರು. ಅದಕ್ಕೆ, ಮಜ್‌ಲಿಸ್ ಅನಸಾರುಲ್ಲಾ ಲಬ್ಬೈಕ್ ಎಂದು ಹೇಳುತ್ತಾ, ಜರ್ಮನಿಯ ಶತಮಾನೋತ್ಸವ ಜಲ್ಸಾಲಾನ ಸಂದರ್ಭದಲ್ಲಿ ಖುಥಿಇಾಟಜ ಮೂಲಕ ಪ್ರಯಾಣ ಮಾಡಲು ನಿಶ್ಚಯಿಸಿದರು.

26 ಆಗಸ್ಟ್–ಶನಿವಾರ ದಿನದಂದು 16 ಜನರ ತಂಡ ಇಸ್ಲಾಮಾಬಾದ್ ಯು.ಕೆ ಯಿಂದ ಹೊರಟಿತು. ಮಸ್ಜಿದ್ ಮುಭಾರಕ್ ಇಸ್ಲಾಮಾಬಾದ್‌ನಿಂದ ಫಜರ್ ನಮಾಝ್ ನಂತರ ಹುಝೂರ್ ಅನ್ವರ್(ಅತಬಅ) ಪ್ರೀತಿಯಿಂದ ಘೋಷಣೆಯೊಂದಿಗೆ ತಂಡಕ್ಕೆ ಬೀಳ್ಕೊಟ್ಟರು. ಹಾಫಿಝ್ ಈಜಾಝ್ ಅಹ್ಮದ್ ತಾಹಿರ್ ಸಾಹಿಬ್ ತಂಡದ ನಾಯಕರಾಗಿದ್ದರು. ಅವರು ಮಜ್‌ಲಿಸ್ ಅನಸುರುಲ್ಲಾ ಯು.ಕೆ ಯ ಸ್ಟೆಕಲಿಂಗ್ (Sicling club) ನ ಚೇರ್ಮನ್ ಸಹ ಆಗಿದ್ದರು. Dover ಯಿಂದ Fary ಮೂಲಕ ಪ್ರಯಾಣ ಬೆಳೆಸಿ Dunkirk ತಲುಪಿದರು. ನಗರ Ostende ತಲುಪಿದರು. ಮತ್ತು ರಾತ್ರಿ ಜಮಾಅತ್‌ನ ಸೆಂಟರ್‌ನಲ್ಲಿ ತಂಗಿದರು. ಮತ್ತೆ 27–ಆಗಸ್ಟ್ ರಂದು 110 ಕಿ.ಮೀ, 28, ಆಗಸ್ಟ್ ರಂದು 167 ಕಿ.ಮೀ, 29, ಆಗಸ್ಟ್ ರಂದು 149 ಕಿ.ಮೀ ಮತ್ತು 30–ಆಗಸ್ಟ್ ರಂದು 181 ಕಿ.ಮೀ ಪ್ರಯಾಣ ಮಾಡಿದರು. ಮತ್ತು ಕೊನೆಯ ದಿನ 31–ಆಗಸ್ಟ್‌ರಂದು mannheim ಜರ್ಮನಿಯಿಂದ ಹೊರಟು 129 ಕಿ.ಮೀ ದೂರ ಕ್ರಮಿಸಿ Stuttgart ಜಲ್ಸಾ ಸ್ಥಳಕ್ಕೆ ತಲುಪಿದರು. ಈಗ್ಗೆ ಒಟ್ಟು 842 ಕಿ.ಮೀ ದೂರದ ಪ್ರಯಾಣ ಮಾಡಿದರು. ಈ ಪ್ರಯಾಣದಲ್ಲಿ ಭಾಗವಹಿಸಿದ 3 ಅನ್‌ಸಾರರ ವಯಸ್ಸು 60 ಕ್ಕೆ ಸಮೀಪವಿತ್ತು.

ಆನಂತರ ಹುಝೂರ್ ಅನ್ವರ್(ಅತಬಅ) ಇತಿಹಾಸ ವಿಭಾಗದನ್ವಯ ಏರ್ಪಡಿಸಿದ ವಸ್ತು ಪ್ರದರ್ಶನ ವೀಕ್ಷಿಸಿದರು. ವಸ್ತು ಪ್ರದರ್ಶನದ ಭೇಟಿಯ ನಡುವೆ ಹುಝೂರ್ ಅನ್ವರ್(ಅತಬಅ) 2 ವೆಬ್‌ಸೈಟ್‌ನ್ನು ಉದ್ಘಾಟಿಸಿದರು. ಒಂದು ವೆಬ್‌ಸೈಟ್ ಜರ್ಮನಿಯ ಮಾಸಿಕ ಪತ್ರಿಕೆ ಅಹ್ಮದಿಯಾ ಆಗಿತ್ತು. ಎರಡನೇ ವೆಬ್‌ಸೈಟ್ ಅಹಮದಿಯ ಜಮಾಅತ್ ಜರ್ಮನಿಯ ಇತಿಹಾಸ ವಿಭಾಗಕ್ಕೆ ಸಂಬಂಧಿಸಿದ್ದಾಗಿತ್ತು. ವಸ್ತು ಪ್ರದರ್ಶನದಲ್ಲಿ ವಿವಿಧ ರೀತಿಯ Flaxess ಹಾಕಲಾಗಿತ್ತು. ಅದರಲ್ಲಿ ಹಝ್ರತ್ ಅಖದ್ದಸ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರ ಕಾಲದಿಂದ ಹಿಡಿದು ಪಂಚಮ ಖಲೀಫರ ಕಾಲದವರೆಗಿನ ಅಹ್ಮದಿಯಾ ಜಮಾಅತ್ ಜರ್ಮನಿಯ ಇತಿಹಾಸದ ವಿವಿಧ ಅಧ್ಯಾಯಗಳನ್ನು ಸರಳ ಭಾಷೆಯಲ್ಲಿ ಪ್ರಸ್ತುತಪಡಿಸಲಾಗಿತ್ತು. ಈ ಫ್ಲಾಕ್ಸೆಸ್‌ಗಳು ಜರ್ಮನ್ ಮತ್ತು ಇಂಗ್ಲೀಷ್ ಎರಡೂ ಭಾಷೆಗಳಲ್ಲಿದ್ದರು.

ಈ ವಸ್ತು ಪ್ರದರ್ಶನದಲ್ಲಿ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರು 1885 ರಲ್ಲಿ ವಿವಿಧ ಸಮುದಾಯಗಳ ಮುಖಂಡರಿಗೆ ಮತ್ತು ಅಮೀರರಿಗೆ ಮತ್ತು ದೇಶದ ಮುಖಂಡರಿಗೆ ಬರೆದ ಪತ್ರಗಳ ವಿವರವು ಇತ್ತು. ಅದರ ಪರಿಣಾಮವಾಗಿ ಜರ್ಮನಿಯಿಂದ ಹೊರಟ ಬಂಧುಗಳು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರನ್ನು ಸಂಪರ್ಕಿಸಿದಿದರು. ಅದೇ ರೀತಿ 1923 ರಲ್ಲಿ ನಿರ್ಮಾಣಗೊಳ್ಳಲಾಗದ ಮಸೀದಿ ಬರ್ಲಿನ್ ಮತ್ತು, ಪ್ರಾರಂಭಿಕ ಮಸೀದಿಗಳಲ್ಲಿ ಮಸ್ಜಿದ್ ಫಜಲಿ ಉಮರ್ ಹೆಂಬರ್ಗ್ ಮತ್ತು ಮಸ್ಜಿದ್ ನೂರ್ ಫ್ರೆಂಕ್‌ಫರ್ಟ್‌ನ ಒಂದು ಫ್ಲ್ಯಾಕ್ಸ್ ಮೇಲೆ ಹಾಕಲಾಗಿತ್ತು. ಅಲ್ಲದೇ ಈ Flaxes ನಲ್ಲಿ ಹಝ್ರತ್ ಖಲೀಫತುಲ್ ಮ್ಮಖುಜಿ ಸಾನಿ(ಡಿ) ಹಝ್ರತ್ ಖಲೀಫತುಲ್ ಮಸೀಹ್ ಸಾಲಿಸ್(ರಹ್), ಹಝ್ರತ್ ಖಲೀಫತುಲ್ ಮಸೀಹ್ ರಾಬೀ(ರಹ್) ಮತ್ತು ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್(ಅತಬಿಅ) ಅವರುಗಳ ಜರ್ಮನಿ ಪ್ರವಾಸವನ್ನು ಅತ್ಯಂತ ಮನೋಹರಕರ ರಿತಿಯಲ್ಲಿ ಪ್ರಸ್ತುತಪಡಿಸಲಾಗಿತ್ತು.

ಅನಂತರ ಹುಝೂರ್ ಅನ್ವರ್(ಅತಬಅ) ತಬ್ಲೀಗ್ಬ್ ವಿಭಾಗದಿಂದ ಇಸ್ಲಾಂ ಧರ್ಮದ ಕುರಿತಾಗಿ ಹಾಗೂ ವಿವಿಧ ಭಾಷೆಯ ಅಹ್ಮದಿಯಾ ಸಾಹಿತ್ಯಗಳ ವಸ್ತು ಪ್ರದರ್ಶನವನ್ನು ವೀಕ್ಷಿಸಿದರು.

ತುರ್ಕಿ, ಫಾರ್ಸಿ, Balkan ಭಾಷೆ, ಬಾಂಗ್ಲಾ, ರಶಿಯನ್, ಚೀನಿ ಮತ್ತು ವಿವಿಧ ಆಫ್ರಿಕನ್ ಭಾಷೆಗಳ ಸಾಹಿತ್ಯ ತುಂಬಾ ಸುಂದರವಾಗಿ ಪ್ರದರ್ಶಿಸಲಾಗಿತ್ತು.

ಇಸ್ಲಾಂ ಧರ್ಮದ ಕುರಿತು ವಸ್ತು ಪ್ರದರ್ಶನದಲ್ಲಿ ಇಸ್ಲಾಮಿ ವಿಶ್ವಾಸದ ಮೂಲಭೂತ ತತ್ವಗಳನ್ನು ವಿವಿಧ ಫ್ಲ್ಯಾಕ್ಸ್‌ನಲ್ಲಿ ಹಾಕಲಾಗಿತ್ತು. ಅದರಲ್ಲಿ ಅಲ್ಲಾಹುತಾಲಾ, ಪವಿತ್ರ ಖುರ್‌ಆನ್, ಪವಿತ್ರ ಪ್ರವಾದಿ(ಸ) ಮತ್ತು ಅವರ ಕುರಿತು ವಿವಿಧ ಚಿಂತಕರ ಅಭಿಪ್ರಾಯಗಳು, ಇಸ್ಲಾಂ ಮತ್ತು ವಿಜ್ಞಾನ, ಇಸ್ಲಾಮಿನ ತತ್ವಗಳು, ಸಿಹಾಸತ್ತ (ಹದೀಸ್), ಜಿಹಾದ್, ಹಝ್ರತ್ ಅಖದಸ್ ಮಸೀಹ್ ಮೌಊದ್(ಅ), ಸೂರ್ಯ ಚಂದ್ರ ಗ್ರಹಣ, ಹತ್ತು ಬೈಅತ್ತಿನ ಶರತ್ತುಗಳು, ಖಿಲಾಪತ್ ಅಹ್ಮದಿಯಾ, ಖಾದಿಯಾನ್, ಮಿನಾರತುಲ್ ಮಸೀಹ್, ಹುಝೂರ್ ಅನ್ವರ್(ಅತಬಅ) ಅವರ ಹನ್ನೆರಡು ಸಂದೇಶಗಳು ಇತ್ಯಾದಿ ಶಾಮೀಲಾಗಿದ್ದವು.

ಈ Exhibition ನಲ್ಲಿ ಖುರ್‌ಆನ್‌ನ ವಿವಿಧ ಭಾಷೆಗಳ ಅನುವಾದ ಸಹ ಪ್ರದರ್ಶಿಸಲಾಗಿತ್ತು. ಹಾಗೂ 2020 ರಿಮದ ಇಲ್ಲಿಯವರೆಗಿನ ತಬ್ಲೀಗ್ಬ್ ಪ್ರಯತ್ನಗಳ ಅಂಕೆ ಸಂಖ್ಯೆಗಳನ್ನು ಪ್ರಸ್ತುತಪಡಿಸಲಾಗಿತ್ತು.

ವಸ್ತು ಪ್ರದರ್ಶನ ವೀಕ್ಷಣೆಯ ನಂತರ ಹುಝೂರ್ ಅನ್ವರ್(ಅತಬಅ) ಹೊರಗೆ ಬಂದಾಗ ಒಂದು ಸ್ಥಳದಲ್ಲಿ ಆಫ್ರೀಕನ್ ಬಂಧುಗಳು ತಮ್ಮ ವಿಶಿಷ್ಠ ಶೈಲಿಯಲ್ಲಿ, **‘ಲಾ ಇಲಾಹ ಇಲ್ಲಲ್ಲಾಹ್ ಮುಹಮ್ಮದುರ್ ರಸೂಲುಲ್ಲಾಹ್”** ಪಠಿಸುತ್ತಿದ್ದರು, ಮತ್ತು ಎತ್ತರದ ಧ್ವನಿಯಲ್ಲಿ **“ಇನ್ನಿ ಮಅಕ ಯಾ ಮಸ್ರೂರ್”** ಹೇಳುತ್ತಿದ್ದರು. ಹುಝೂರ್ ಅನ್ವರ್(ಅತಬಅ) ಪ್ರೀತಿಪೂರ್ವಕವಾಗಿ ಅವರ ಬಳಿ ಸ್ವಲ್ಪ ಹೊತ್ತು ಕಳೆದರು ಮತ್ತು ಅವರಿಗೆ ಹೇಳಿದರು. ನೀವು ಯಾವ ದೇಶದಿಂದ ಬಂದಿರುವಿರಿ, ಆಗ ಅವರು ಹೇಳಿದರು. ಗಿನಿಬಿಸಾವುದಿಂದ.

ಅನಂತರ ಹುಝೂರ್ ಅನ್ವರ್(ಅತಬಅ) ಉಪಹಾರ ಗೃಹಕ್ಕೆ ಬಂದರು, ಒಂದು ಭಾಗದಲ್ಲಿ ವಿವಿಧ ಧವಸ ಧಾನ್ಯಗಳು ಮತ್ತು ಇತರೆ ಸಾಮಾನುಗಳು ಸಂಗ್ರಹಿಸಲಾಗಿತ್ತು. ಹುಝೂರ್ ಇದನ್ನು ನೋಡುತ್ತಾ ಉಪಹಾರ ಗೃಹಕ್ಕೆ ತೆರಳಿದರು. ಸಾಯಂಕಾಲದ ಊಟಕ್ಕಾಗಿ ಬೇಳೆ ಮತ್ತು ಮಾಂಸ ಬಟಾಟೊ ತಯಾರಿಸಲಾಗಿತ್ತು. ಹುಝೂರ್ ಅನ್ವರ್(ಅತಬಅ) ಪ್ರೀತಿಪೂರ್ವಕವಾಗಿ ಬೆಂದಿದ ಬಟಾಟೊ ಮಾಂಸದ ಒಂದು ತುತ್ತು ಸೇವಿಸಿ ನೋಡಿದರು. ಇದು ಸರಿಯಾಗಿದೆಯೇ ಇಲ್ಲವೋ ಎಂದು ಪರೀಕ್ಷಿಸಿದರು. ಹುಝೂರ್ ಅನ್ವರ್(ಅತಬಅ) ಬೇಳೆಯನ್ನು ಸಹ ಪರೀಕ್ಷಿಸಿದರು ಮತ್ತು ಊಟದ ವ್ಯವಸ್ಥೆ ಉತ್ತಮವಾಗಿದೆಯೇ ಇಲ್ಲ ಎಂಬುದನ್ನು ಪರೀಕ್ಷಿಸಿದರು.

ಅನಂತರ ಹುಝೂರ್ ಅನ್ವರ್(ಅತಬಅ) ವಿವಿಧ ದೇಶಗಳಿಂದ ಬಂದ ಅತಿಥಿಗಳ ವ್ಯವಸ್ಥೆ ಅವರ ಸ್ವಭಾವ ಮತ್ತು ಅಗತ್ಯಗಳ ಪ್ರಕಾರ ಆಗಿದೆಯೇ ಇಲ್ಲ ಎಂಬುದನ್ನು ಹುಝೂರ್ ಅನ್ವರ್(ಅತಬಅ) ವೀಕ್ಷಿಸಿದರು.

ಉಪಹಾರ ಗೃಹದ ಕಾರ್ಯಕರ್ತರು ಒಂದು ದೊಡ್ಡ ಗಾತ್ರದ ಕೇಕ್ ತಯಾರಿಸಿದ್ದರು. ಹುಝೂರ್ ಅನ್ವರ್(ಅತಬಅ) ಪ್ರೀತಿಪೂರ್ವಕವಾಗಿ ಕಾರ್ಯಕರ್ತರಿಗಾಗಿ ಆ ಕೇಕ್‌ಅನ್ನು ಕತ್ತರಿಸಿಕೊಟ್ಟರು. ಅನಂತರ ಕಾರ್ಯಕರ್ತರೆಲ್ಲರೂ ಸೇರಿ ಹುಝೂರ್ ಅನ್ವರ್(ಅತಬಅ)ರ ಜೊತೆ ಚಿತ್ರ ತೆಗೆಯಿಸಿಕೊಳ್ಳುವ ಭಾಗ್ಯ ಪಡೆದರು.

ಅತಿಥಿ ಗೃಹದ ಹೊರಗೆ ವಾಷಿಂಗ್ ಮೆಷಿನ್ ಇಡಲಾಗಿತ್ತು. ಇದು ಹಿಂದಿನ ಹನ್ನೆರಡು ಹದಿಮೂರು ವರ್ಷಗಳಿಂದ ಇದೆ. ಸಮಯ ಸಮಯಕ್ಕೆ ಅದಕ್ಕೆ ಉತ್ತಮಪಡಿಸುತ್ತಿದ್ದೇವೆ. ಈ ಮೆಷಿನ್ ಅಹ್ಮದಿ ಇಂಜಿನಿಯರೇ ಸ್ವತ: ತಯಾರಿಸಿದ್ದಾರೆ. ಈ ಮೆಷಿನಿನ ವಿಶೇಷತೆ ಏನೆಂದರೆ ಸ್ವಚ್ಛತೆಗಾಗಿ ಹೇಗೆ ಇಟ್ಟರೆ ಅದು automatic ಆಗಿ Function ಪ್ರಾರಂಭಿಸುತ್ತದೆ. ಇಂತಹ ಒಂದು ಸೀನಿಯರ್ System ಅಳವಡಿಸಲಾಗಿದೆ. ಅದರಿಂದ Automatic ಕಾರ್ಯ ಆರಂಭವಾಗುತ್ತದೆ ಮತ್ತು ಸ್ವಚ್ಛತೆ ಕಾರ್ಯ ಮುಗಿದ ನಂತರವೇ Automatic ಆಗಿ ಹೊರಗೆ ಬರುತ್ತದೆ.

Messee Stuttgart ನಲ್ಲಿ ಹತ್ತು ದೊಡ್ಡ ಸಭಾಂಗಣಗಳಿವೆ. ಅದರಲ್ಲಿ ಪುರುಷರ ಮಹಿಳೆಯರ ಜಲ್ಸಗಾಹ್ ಮತ್ತು ವಸತಿ ಭಾಗಗಳು ಮತ್ತು ಊಟ ಮಾಡಿಸುವ ವ್ಯವಸ್ಥೆ ಅಲ್ಲದೇ ವಿವಿಧ ವಿಭಾಗಗಳ ಕಚೇರಿಗಳು ಸಹ ಸ್ಥಾಪಿಸಲಾಗಿದೆ.

ಸಭಾಂಗಣ ಸಂಖ್ಯೆ 1 : ಇದರಲ್ಲಿ ಪುರುಷರ ಜಲ್ಸಗಾಹ್ ಇದೆ.

**(ಮುಂದುವರಿಯುವುದು)**

---

**ಜಾಗತಿಕ ಅಹ್ಮದಿಯ ಮುಸ್ಲಿಮ್ ಜಮಾಅತ್ತಿನ ವಾರಪತ್ರಿಕೆ “ಬದರ್” ಇದೀಗ ಕನ್ನಡದಲ್ಲಿ ಪ್ರಕಟಗೊಳ್ಳುತ್ತಿದೆ.**

ಈ ಪತ್ರಿಕೆಯ ಹೆಸರು **“ಬದರ್”** ಎಂದಾಗಿದೆ. ಪೂರ್ಣ ಚಂದ್ರ ಎಂದರ್ಥ. ಇದು ಜಮಾಅತೆ ಅಹ್ಮದಿಯದ ಒಂದು ಧಾರ್ಮಿಕ ಪತ್ರಿಕೆ ಆಗಿದೆ ಅದರ ಮೂಲ ಉದ್ದೇಶ ಜಮಾಅತ್ತಿನ ಸದಸ್ಯರ ತರಬೇತಿ, ಶಿಕ್ಷಣ, ಒಳ್ಳೆ ನೈತಿಕತೆ ಕಲಿಸುವುದಾಗಿದೆ.

ನಮ್ಮ ಎರಡು ಉದ್ದೇಶಗಳಿವೆ. ಒಂದು ಅಲ್ಲಾಹನ ಹಕ್ಕನ್ನು ನಿಭಾಯಿಸುವುದು ಇನ್ನೊಂದು ದಾಸರ ಹಕ್ಕನ್ನು ಈಡೇರಿಸುವುದಾಗಿದೆ.

ಅಲ್ಲಾಹನ ಹಕ್ಕು ಏನಾಗಿದೆ ಎಂದರೆ ಅವನನ್ನು ಆರಾಧಿಸುವುದು ಅವನು ಎಲ್ಲಾ ಸ್ತುತಿ ಸರ್ವ ಲೋಕಗಳ ಪರಿಪಾಲಕನಾಗಿದ್ದಾನೆ ಮತ್ತು ಅವನ ಉಪಕಾರಗಳನ್ನು ನೆನಪಿಸಿಕೊಂಡು ಅವನಿಗೆ ವಿಧೇಯತೆ ತೋರಿಸುವುದಾಗಿದೆ.

ಇನ್ನೊಂದು ದಾಸರ ಹಕ್ಕನ್ನು ಈಡೇರಿಸುವುದಾಗಿದೆ. ದಾಸರ ಹಕ್ಕುಗಳೇನಂದರೆ ಅಗತ್ಯವುಳ್ಳವರನ್ನು ಸಹಾಯ ಮಾಡುವುದು, ಯಾರನ್ನು

ದುಃಖ, ತೊಂದರೆ ಅಥವಾ ಸಂಕಷ್ಟ ಕೊಡಬಾರದು, ರಾಷ್ಟ್ರದಲ್ಲಿ ಕಿಡಿಗೇಡಿತನ ಹುಟ್ಟಿಸಬಾರದು, ಸ್ವದೇಶ ಪ್ರೇಮ ಈಮಾನಿನ ಒಂದು ಭಾಗವಾಗಿದೆ ಹಾಗೂ ಸ್ವದೇಶದ ಅಭಿವೃದ್ಧಿಗಾಗಿ ಶ್ರಮವಹಿಸುವುದಾಗಿದೆ.

ಈ ಪತ್ರಿಕೆಯು 100 ವರ್ಷಕ್ಕಿಂತ ಹೆಚ್ಚು ಕಾಲಾವಧಿಯಿಂದ ಈ ಉದ್ದೇಶದ ಪ್ರಕಾರ ಜಮಾಅತ್ತಿನ ಸದಸ್ಯರ ಶೈಕ್ಷಣಿಕವಾಗಿ ತರಬೇತಿ ಮಾಡುತ್ತಾ ಬಂದಿದೆ. ಅದರ ಪ್ರತಿ ಫಲವಾಗಿ ನಮಗೆ ಅಲ್ಲಾಹನ ಅನುಗ್ರಹದಿಂದ ಶಾಂತಿಯುತ ಪಂಗಡ ಎಂದು ವಿಶ್ವದಾದ್ಯಂತ ಪರಿಗಣಿಸುತ್ತಾರೆ.

ಅಕ್ಟೋಬರ್ 1902ರಲ್ಲಿ ಜಾಗತಿಕ ಅಹ್ಮದಿಯ ಮುಸ್ಲಿಮ್ ಜಮಾಅತ್ತಿನ ಸಂಸ್ಥಾಪಕರಾದ ಹರ್ಝರತ್ ಮಿರ್ಝಾ ಗುಲಾಮ್ ಅಹ್ಮದ್ ಖದಿಯಾನಿ(ಅಲೈಹಿಸ್ಸಲಾಮ್) ಅವರು ಈ ಪತರಿಕೆಯನ್ನು ಉರ್ದು ಭಾಷೆಯಲ್ಲಿ ಉದ್ಘಾಟಿಸಿದರು. ಇಂದು ಈ ಪತ್ರಿಕೆಯು ಭಾರತದ ಏಳು ಭಾಷೆಗಳಲ್ಲಿ ಭಾಷಾಂತರವಾಗಿ ಪ್ರಕಟಗೊಳ್ಳುತ್ತಿದೆ. ಉರ್ದುವನ್ನು ಬಿಟ್ಟು ಹಿಂದಿ, ತಮಿಳು, ತೆಲುಗು, ಬಾಂಗ್ಲ, ಉಡಿಯಾ, ಮಳಯಾಳಂ ಹಾಗೂ ಕನ್ನಡ. ಕಳೆದ 5 ವರ್ಷದಿಂದ ಕನ್ನಡದಲ್ಲಿಯು ಈ ಪತ್ರಿಕೆಯು ಪ್ರಕಟಗೊಳ್ಳುತ್ತಿರಿವುದು ಬಹಳ ಸಂತೋಷದ ವಿಷಯವಾಗಿದೆ. ಈ ಪತ್ರಿಕೆಯು ಧಾರ್ಮಿಕ ಪತ್ರಿಕೆ ಆದ್ದರಿಂದ ರಾಜಕೀಯ ನಿಟ್ಟಿನಲ್ಲಿ ಯಾವ ಸಂಬಂಧವೂ ಇಲ್ಲ.

ಈ ಪತ್ರಿಕೆಯಲ್ಲಿ ಜಾಗತಿಕ ಅಹ್ಮದಿಯ ಮುಸ್ಲಿಮ್ ಜಮಾಅತ್ತಿನ ಪಂಚಮ ಖಲೀಫ ಹರ್ಝರತ್ ಮಿರ್ಝಾ ಮಸ್‌ರೂರ್ ಅಹ್ಮದ್‌ರವರ ಶುಕ್ರವಾರದ ಪ್ರವಚನ (ಖುತ್‌ಬ ಜುಮುಅ) ವಿಶೇಷವಾಗಿರುತ್ತದೆ. ಆ ಖುತ್‌ಬದಲ್ಲಿ ಅವರು ಪವಿತ್ರ ಖುರ್‌ಆನ್ ಹಾಗೂ ಹದೀಸ್‌ಗಳ ಶಿಕ್ಷಣಗಳ ಪ್ರಕಾರ ತಮ್ಮ ಜಮಾಅತ್ತಿನ ಸದಸ್ಯರನ್ನು ಸಂಬೋಧಿಸುತ್ತಾರೆ. ನಿಮ್ಮ ಈ ಪ್ರವಚನವೂ ಎಂ.ಟಿ.ಎ ಎಂಬ ಚ್ಯಾನಲ್‌ನಲ್ಲಿ ಪ್ರತಿ ಶುಕ್ರವಾರ ನೇರವಾಗಿ ಪ್ರಸಾರವಾಗುತ್ತದೆ. ಅದನ್ನು ಇಡೀ ವಿಶ್ವದಾದ್ಯಂತ ಕೆಳ ಹಾಗೂ ನೋಡಬಹುದು. ತದನಂತರ ಈ ಖುತ್‌ಬ ಪತ್ರಿಕೆಯಲ್ಲಿ ಪಕಟಗೊಳ್ಳುತ್ತದೆ. ಖಲೀಫರ ಖುತ್‌ಬ ಈ ಪತ್ರಿಕೆಯ ಪ್ರಾಣವಾಗಿದೆ.

ಹರ್ಝರತ್ ಮಿರ್ಝಾ ಮಸ್‌ರೂರ್ ಅಹ್ಮದ್ ವಾಗ್ದಾತ್ತ ಮಹೀಹರ 5ನೇ ಖಲೀಫರಾಗಿದ್ದಾರೆ ಅವರು ಲಂಡನ್‌ನಲ್ಲಿ ವಾಸವಾಗಿದ್ದಾರೆ. ಜಾಗತಿಕ ಅಹ್ಮದಿಯ ಮುಸ್ಲಿಮ್ ಜಮಾಅತ್ತಿನ ಇಮಾಮರಾಗಿದ್ದಾರೆ. ಅದಲ್ಲದೆ ಈ ಪತ್ರಿಕೆಯಲ್ಲಿ ಖಲೀಫರ ಪ್ರವಾಸಗಳ ವರದಿಗಳು ಪ್ರಕಟಗೊಳ್ಳುತ್ತದೆ ಅವೂ ಬಹಳ ಕುತೂಹಲಕಾರಿ ಆಗಿರುತ್ತದೆ. ಈ ವರದಿಗಳು ಜಮಾಅತ್ತಿನ ಸದಸ್ಯರ ಜ್ಞಾನ ಅಭಿವೃದ್ಧಿಯಲ್ಲಿ ವಿಶೇಶವಾಗಿ ಕಾರ್ಯ ನಿರ್ವಹಿಸುತ್ತದೆ. ಇದಲ್ಲದೆ ಜಮಾಅತ್ತಿನ ಕಾರ್ಯಗಳ ವರದಿಗಳು ಮತ್ತು ಆಧ್ಯಾತ್ಮಿಕ ಹಾಗೂ ಶೈಕ್ಷಣಿಕ ಅಭಿಮೃದ್ಧಿಸುವಂತಹ ಜ್ಞಾನ ಭರಿತ ಲೇಖನಗಳು ಪ್ರಕಟಗೊಳ್ಳುತ್ತದೆ.

ಹೀಗಾಗಿ ಈ ಪತ್ರಿಕೆಯು ಮಹತ್ವಪೂರ್ಣವಾದ ಪತ್ರಿಕೆ ಆಗಿದೆ.

ಎಲ್ಲಾ ಓದುಗರಲ್ಲಿ ಈ ಪತ್ರಿಕೆಯನ್ನು ಕೊಂಡುಕೊಳ್ಳಬೇಕಾಗಿ ವಿನಂತಿಸಲಾಗುತ್ತಿದೆ.

ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ: +91 99153 79255, 9902678609, 9760468663 (ವ್ಯವಸ್ಥಾಪಕರು)

## ಖಾದಿಯಾನ್ ದಾರುಲ್ ಅಮಾನ್‌ನಲ್ಲಿ ಸಾಲಾನ ಇಜ್ತೆಮಾ 2024 ನಡೆಯುವ ದಿನಾಂಕಗಳು

ಸಯ್ಯದನಾ ಹರ್ಝರತ್ ಅಮೀರುಲ್ ಮೂಮಿನೀನ್ ಅಯ್ಯದಹುಲ್ಲಾಹು ತಆಲಾ ಬಿನಸ್ರಿಹಿಲ್ ಅಝೀಝ್‌ರವರು ಭಾರತದಲ್ಲಿ ಅಂಗ ಸಂಸ್ಥೆಗಳ (ಮಜ್ಲಿಸ್ ಅನ್ಸರುಲ್ಲಾ, ಮಜ್ಲಿಸ್ ಖುದ್ದಾಮುಲ್ ಅಹ್ಮದಿಯಾ, ಲಜ್ನಾ ಇಮಾಇಲ್ಲಾ) ರಾಷ್ಟ್ರೀಯ ವಾರ್ಷಿಕ ಕೂಟಗಳನ್ನು (ಇಜ್ತೆಮಾ) 25, 26 ಮತ್ತು 27ನೇ ಅಕ್ಟೋಬರ್ 2024 ರಂದು (ಶುಕ್ರವಾರ, ಶನಿವಾರ, ಭಾನುವಾರ) ಆಯೋಜಿಸಲು ಅನುಮತಿ ನೀಡಿದ್ದಾರೆ.

ಎಲ್ಲಾ ಉಪ ಸಂಸ್ಥೆಗಳ ಸದಸ್ಯರು ಖಾದಿಯಾನಿನಲ್ಲಿ ಈ ಆಧ್ಯಾತ್ಮಿಕ ಪರಿಸರದಲ್ಲಿ ಆಯೋಜಿಸಲಾಗುವಂತಹ ಇಜ್ತೆಮಾಗಳಲ್ಲಿ ಪಾಲ್ಗೊಳ್ಳಲು ಇಂದಿನಿಂದಲೆ ತಯಾರಿ ಪ್ರಾರಂಭಿಸಿರಿ. ಈ ಇಜ್ತೆಮಾಗಳು ತರಬೇತಿಯ ಮುಖ್ಯ ಮೂಲವಾಗಿದೆ.

**(ಸದರ್ ಮಜ್ಲಿಸ್ ಖುದ್ದಾಮುಲ್ ಅಹ್ಮದಿಯಾ ಭಾರತ)**

**"ಮೇಲಿನ ಕೈ ಕೆಳಗಿನ ಕೈಗಿಂತ ಉತ್ತಮವಾಗಿದೆ. (ಎಂದರೆ ಧಾನಧರ್ಮ ಕೊಡುವವನು ಅದನ್ನು ಪಡೆದುಕೊಳ್ಳುವವನಿಗಿಂತ ಉತ್ತಮವಾಗಿದ್ದಾನೆ)"**

(ಹರ್ಝರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿವ ಸಲ್ಲಮ್)

ದುಆವಿನ ಆಕಾಂಕ್ಷಿ:
**M.B. Nasir Ahmed & Family, Bengaluru, Karnataka**

**ಇನ್ಸಾನಿಯತ್ ಝಿಂದಾಬಾದ್, ಮಾನವೀಯತೆ ಚಿರಕಾಲ ಬಾಳಲಿ**

## ಜಲ್ಸ ಸಾಲಾನ ಖಾದಿಯಾನ್

ಹರ್ಝರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ: "ಈ ಜಲ್ಸದೊಂದಿಗೆ ಅನೇಕ ಅನುಗ್ರಹಗಳು ಅನಿವಾರ್ಯವಾಗಿ ಸೇರಿಕೊಂಡಿರುವುದರಿಂದ ದಾರಿ ಖರ್ಚಿಗೆ ಸಾಮರ್ಥ್ಯವಿರುವ ಪ್ರತಿಯೊಬ್ಬನು ಈ ಜಲ್ಸಕ್ಕೆ ಆಗಮಿಸಬೇಕು. ಚಳಿಗಾಲಕ್ಕೆ ಆವಶ್ಯಕವಾದ ಹಾಸುವ ಮತ್ತು ಹೊದಿಕೆ ಬಟ್ಟೆಗಳನ್ನು ಆವಶ್ಯಕವಾದಷ್ಟು ತರಬೇಕು. ಅಲ್ಲಾಹನ ಮತ್ತು ಅವನ ರಸೂಲರ ಮಾರ್ಗದಲ್ಲಿ ಚಿಕ್ಕಪುಟ್ಟ ಅಡ್ಡಿ ಆತಂಕಗಳನ್ನು ನಿರ್ಲಕ್ಷಿಸಬೇಕು. ಅಲ್ಲಾಹನು ನಿಷ್ಠಾವಂತನಿಗೆ ಪ್ರತಿಯೊಂದು ಹೆಜ್ಜೆಯಲ್ಲಿಯೂ ಅನುಗ್ರಹ ನೀಡುತ್ತಾನೆ. ಅವನ ಮಾರ್ಗದಲ್ಲಿ ಪಡುವ ಕಷ್ಟಗಳನ್ನು ವ್ಯರ್ಥಗೊಳಿಸುವುದಿಲ್ಲ. ನಾನು ಪುನರಾವರ್ತಿಸಿ ಬರೆಯುತ್ತೇನೆ ಈ ಜಲ್ಸವನ್ನು ಮಾನವರ ಸಾಮಾನ್ಯ ಜಲ್ಸದ ಹಾಗೆಂದು ಯೋಚಿಸಬೇಡಿರಿ. ಇದು ಸತ್ಯಕ್ಕೆ ಬೆಂಬಲ ನೀಡುವ ಮತ್ತು ಇಸ್ಲಾಮಿನ ಪ್ರಚಾರ ಮಾಡುವ ಅಸ್ತಿಭಾರವನ್ನು ಹೊಂದಿದೆ. ಈ ಜಮಾಅತಿನ ಅಸ್ತಿಭಾರವನ್ನು ಅಲ್ಲಾಹನು ತನ್ನ ಕೈಯಿಂದ ಹಾಕಿದ್ದಾನೆ. ಇದಕ್ಕೋಸ್ಕರ ಅಲ್ಲಾಹನು ಸಮುದಾಯಗಳನ್ನು ಸಿದ್ಧಪಡಿಸಿಟ್ಟಿದ್ದಾನೆ. ಅವರು ಬೇಗನೆ ಇದರಲ್ಲಿ ಬಂದು ಸೇರುವರು. ಯಾಕೆಂದರೆ ಇದು ಸರ್ವಶಕ್ತನಾದವನ ಕೆಲಸವಾಗಿದೆ. ಅವನಿಗೆ ಅಸಾಧ್ಯವಾದುದು ಏನೂ ಇಲ್ಲ."

ಹರ್ಝರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಪುನಃ ಹೇಳುತ್ತಾರೆ: "ಅಲ್ಲಾಹನಿಗೋಸ್ಕರ ಈ ಜಲ್ಸದಲ್ಲಿ ಭಾಗವಹಿಸಲು ಪ್ರಯಾಣ ಮಾಡುವ ಪ್ರತಿಯೊಬ್ಬನ ಜೊತೆಗೆ ಅಲ್ಲಾಹನು ಜೊತೆಗಾರನಾಗಿರಲಿ. ಅವನಿಗೆ ಬೃಹತ್ತಾದ ಪ್ರತಿಫಲ ನೀಡಲಿ. ಅವರೆಲ್ಲರಿಗೆ ಕಾರುಣ್ಯದೋರಲಿ. ಅವರ ಕಷ್ಟಗಳನ್ನೂ ಆತಂಕಭರಿತ ಸ್ಥಿತಿಯನ್ನೂ ನಿವಾರಿಸಿ ಅವರಿಗೆ ಸೌಲಭ್ಯ ನೀಡುವಂತಾಗಲಿ. ಅವರ ಚಿಂತೆಗಳನ್ನೂ ದುಃಖಗಳನ್ನೂ ದೂರ ಸರಿಸಲಿ. ಅವರಿಗೆ ಪ್ರತಿಯೊಂದು ಕಷ್ಟದಿಂದ ಮುಕ್ತಿಯನ್ನು ದಯಪಾಲಿಸಲಿ. ಅವರ ಇಚ್ಛೆಗಳ ಮಾರ್ಗಗಳನ್ನು ಅವರಿಗೆ ತೆರೆದುಕೊಡಲಿ. ಆಖಿರತ್‌ನಲ್ಲಿ ಅಲ್ಲಾಹನು ಅವರನ್ನು ತಾನು ಅನುಗ್ರಹ ಮತ್ತು ಕಾರುಣ್ಯ ನೀಡಿದ ತನ್ನ ದಾಸರೊಂದಿಗೆ ಎದ್ದೇಳಿಸಲಿ. ಅವರ ಪ್ರಯಾಣದ ಅಂತ್ಯದ ವರೆಗೂ ಅವರ ಬದಲು ಅವರ ಪ್ರತಿನಿಧಿಯಾಗಿರಲಿ. ಓ ಅಲ್ಲಾಹ್, ಕೀರ್ತಿಶಾಲಿಯೂ ವರದಾನ ನೀಡುವವನೂ ಕಾರುಣ್ಯಮಯನೂ ಕಷ್ಟ ಪರಿಹರಿಸುವವನೂ ಆಗಿರುವ ನೀನು ಈ ಎಲ್ಲ ಪ್ರಾರ್ಥನೆಗಳನ್ನೂ ಅಂಗೀಕರಿಸು. ನಮ್ಮ ವಿರೋಧಿಗಳ ವಿರುದ್ಧ ಪ್ರಕಾಶಮಾನವಾದ ದೃಷ್ಟಾಂತಗಳ ಮೂಲಕ ನಮಗೆ ಜಯವನ್ನು ನೀಡು. ಎಲ್ಲಾ ಶಕ್ತಿಸಾಮರ್ಥ್ಯಗಳು ನಿನ್ನಲ್ಲಿ ಮಾತ್ರ ಇವೆ" – ಆಮೀನ್ ಸುಮ್ಮ ಆಮೀನ್. **(ಮಜ್‌ಮೂಅ ಇಶ್ತಿಹಾರಾತ್ ಸಂಪುಟ–1 ಪುಟ 341–342, ಇಶ್ತಿಹಾರ್ 1892 ಡಿಸೆಂಬರ್ ದಿನಾಂಕ 7)**

## *129 ನೇ ಜಲ್ಸಾ ಸಾಲಾನ ಖಾದಿಯಾನ್ 27, 28, 29 ಡಿಸೆಂಬರ್ 2024ರಂದು ಆಯೋಜಿಸಲಾಗುವುದು*

ಸಯ್ಯದನಾ ಹುಝೂರ್ ಅನ್ವರ್ ಅಯ್ಯದಹುಲ್ಲಾಹು ತಆಲಾ ಬಿನಸ್ರಿಹಿಲ್ ಅಝೀಝ್‌ರವರು 129ನೇ (ವಾರ್ಷಿಕ ಸಮ್ಮೇಳನ) ಜಲ್ಸಾ ಸಾಲನ ಖಾದಿಯಾನಿಗೆ 27, 28 ಮತ್ತು 29ನೇ ಡಿಸೆಂಬರ್ 2024 (ಶುಕ್ರವಾರ, ಶನಿವಾರ ಮತ್ತು ಭಾನುವಾರ) ದ ದಿನಾಂಕಗಳ ಅನುಮತಿ ನೀಡಿದ್ದಾರೆ. ಎಲ್ಲಾ ಸದಸ್ಯರು ಇಂದಿನಿಂದಲೇ ದುಆ ಮಾಡಬೇಕಾಗಿ ಹಾಗೂ ಈ ಸಮ್ಮೇಳನದಲ್ಲಿ ಭಾಗವಹಿಸಲು ವಿನಂತಿ. ಅಲ್ಲಾಹನು ನಮಗೆಲ್ಲ ಈ ಸಮ್ಮೇಳನದಲ್ಲ ಭಾಗಿಯಾಗಲು ತೌಫೀಕ್ ನೀಡಲೀ. ಜಲ್ಸಾ ಸಾಲಾನ ಪ್ರತಿಯೊಂದು ವಿಷಯದಲ್ಲೂ ಅನುಗ್ರಹದಾಯಕವಾಗಲಿ ಅದೇ ರೀತಿ ಶುದ್ಧ ಆತ್ಮಗಳ ಮಾರ್ಗದರ್ಶನಕ್ಕೆ ಕಾರಣವಾಗಲಿ ಎಂದು ದುಆ ಮಾಡುತ್ತಾಯಿರಿ. **ಜಝಾಕುಮಲ್ಲಾಹ್.**

**(ನಾಝಿರ್ ಇಸಾಹ್–ವ–ಇರ್‌ಶಾದ್ ಖಾದಿಯಾನ್)**

**"ಯಾರು ಜನರಿಗೆ ಕೃತಜ್ಞತೆ ಸಲ್ಲಿಸುವುದಿಲ್ಲವೋ ಅವನು ಅಲ್ಲಾಹನಿಗೂ ಕೃತಜ್ಞತೆ ಸಲ್ಲಿಸುವುದಿಲ್ಲ."**

(ಹರ್ಝರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿವ ಸಲ್ಲಮ್)

ದುಆವಿನ ಆಕಾಂಕ್ಷಿ:
**Mubarak Ahmed Naseem & Family, Shimoga, Karnataka**

EDITOR
TARIQ AHMED IDRIS.
Mobile : +91 9902678609
e-mail: kannadabadar@gmail.com
website:www.akhbarbadr.in

REGISTERED WITH THE REGISTRAR OF THE NEWSPAPER FOR INDIA AT NO RN PUNKAN/2020/78613
Weekly BADAR Qadian
Distt: Gurdaspur (Pb.) INDIA Qadian - 143516
Postal Reg. No: 3000039689/2023-25 Vol No.05, Thursday, 03 October 2024, Issue No. 40

MANAGER
SHAIKH MUJAHID AHMAD.
Mobile : +91 99153 79255
e-mail:managerbadrqnd@gmail.com
www.alislam.org/badr

ANNUAL SUBSCRIPTION: Rs.600/- (Per Issue: 10/- ) (WEIGHT: 20-50, grms / issue)

# ಸೈಯಿದುನಾ ಹಝ್ರತ್ ಅಮೀರುಲ್ ಮುಮಿನೀನ್ ಖಲೀಫತುಲ್ ಮಸೀಹ್ ಖಾಮಿಸ್(ಅತಬಿಅ)ರವರ ಜರ್ಮನಿಯ ಪ್ರವಾಸ ಆಗಸ್ಟ್, ಸೆಪ್ಟೆಂಬರ್ 2023

*(ಬದರ್ ಸಂಚಿಕೆ-39ರ ಉಳಿದ ಭಾಗ ಮುಂದುವರಿಸಲಾಗಿದೆ)*

**ಅನಿಸಿಕೆಗಳು**

ಇಂದು ಈ ಸಮಾರಂಭದಲ್ಲಿ ಭಾಗವಹಿಸಿದ ಬಹುತೇಕ ಅತಿಥಿಗಳು ತಮ್ಮ ಭಾವನೆಗಳನ್ನು ಅನಿಸಿಕೆಗಳನ್ನು ವ್ಯಕ್ತಪಡಿಸಿದ್ದಾರೆ. ಇಲ್ಲಿ ಕೆಲವು ಅತಿಥಿಗಳ ಅನಿಸಿಕೆಗಳನ್ನು ಪ್ರಸ್ತುತಪಡಿಸಲಾಗುತ್ತದೆ.

Mario Beck ಅವರು CDU ನ ಲೋಕಲ್ ಪಾರ್ಟಿಯ ಮುಖಂಡರು, ಅವರು ಹೇಳುತ್ತಾರೆ. ನಾನು ಈ ಹಿಂದೆ ಎಂದೂ ಯಾವ ಧಾರ್ಮಿಕ ಆಧ್ಯಾತ್ಮಿಕ ವ್ಯಕ್ತಿಯೊಡನೆ ಭೇಟಿಯಾಗಲಿಲ್ಲ, ಮತ್ತು ಖಲೀಫರೊಡನೆ ಭೇಟಿಯಾಗಿದ್ದು ನನಗೆ ಗೌರವದ ವಿಷಯವಾಗಿದೆ. ಖಲೀಫರು ಮಾತನಾಡುವುದನ್ನು ಪ್ರಾರಂಭಿಸಿದಾಗ ನನಗೆ ತುಂಬಾ ಹಿತವೆನಿಸಿತು. ಅವರು ಒಬ್ಬ ಸಾಮಾನ್ಯ ವ್ಯಕ್ತಿಯಂತೆ ಸಂಬೋಧಿಸುತ್ತಿದ್ದರು. ಇಷ್ಟೊಂದು ಮಹಾನ್ ವ್ಯಕ್ತಿಯಾಗಿದ್ದರೂ ಅವರೊಂದಿಗೆ ನಿಕಟ ಸಂಬಂಧವಿದ್ದಂತೆ ಭಾಸವಾಗುತ್ತಿತ್ತು. ಅವರು ಎಲ್ಲ ಭಾಷಣಗಾರರ ಮಾತುಗಳನ್ನು ಉಲ್ಲೇಖಿಸಿ ಮಾತನಾಡಿದ್ದನ್ನು ನನಗೆ ತುಂಬಾ ಮೆಚುಗೆಯಾಯಿತು. ಅದರಿಂದ ತಿಳಿದುಬರುವುದೇನೆಂದರೆ ಅವರು ಕೇವಲ ತಮ್ಮ ಮಾತುಗಳನ್ನು ಹೇಳಲು ಮೊದಲು ಯಾವುದೇ ತಯಾರಿ ಮಾಡಿಕೊಂಡು ಬಂದಿರಲಿಲ್ಲ. ಬದಲು ಸ್ಥಳೀಯ ಅಗತ್ಯಕ್ಕನುಗುಣವಾಗಿ ಮಾತುಗಳನ್ನು ಆಡಿದರು. ಖಲೀಫರ ಈ ಮಾತು ಮಸೀದಿಯು ನಗರದ ನಡುವೆ ಇದೆ. ಇದು ತುಂಬಾ ಒಳ್ಳೆಯ ಮಾತಾಗಿದೆ ಎಂದು ಹೇಳಿದ್ದು. ಅದರಿಂದ ಸ್ಪಷ್ಟವಾಗುವುದೇನೆಂದರೆ ಜಮಾಅತ್ ನಮ್ಮ ಜೊತೆ ಇರಬಯಸುತ್ತದೆ ಮತ್ತು ಪ್ರೀತಿ ಪ್ರೇಮದ ವಾತಾವರಣ ಸೃಷ್ಟಿಸಬಯಸುತ್ತದೆ. ಖಲೀಫರು ಹೇಳಿದಂತೆ ಪ್ರಾರಂಭದಲ್ಲಿ ಮಸೀದಿಗೆ ವಿರೋಧ ಮಾಡುವವರಿದ್ದರು. ಈಗ ನಮ್ಮ ಮಿತ್ರರಾಗಿದ್ದಾರೆ. ನಾನು ಅದನ್ನೇ ಗ್ರಹಿಸಿಕೊಂಡಿದ್ದೇನೆ. ಎಲ್ಲರ ಮನಸ್ಸಿನಿಂದ ಶಂಕೆಗಲು ದೂರವಾಗಿವೆ. ಖಲೀಫರ ಭಾಷಣದಿಂದ ನಮಗೆ ತಿಳಿಯಿತು. ಇಸ್ಲಾಂ ಉಗ್ರವಾದದ ಧರ್ಮವಲ್ಲ, ಜನರು ಸಾಮಾನ್ಯವಾಗಿ ಸೌದಿ ಅರಬ್‌ನತ್ತ ನೋಡುತ್ತಾರೆ. ಮತ್ತು ಅದೇ ನಿಜವಾದ ಧರ್ಮ ಎಂದು ತಿಳಿದುಕೊಂಡಿದ್ದಾರೆ. ಆದರೆ ಖಲೀಫರು ಸ್ಪಷ್ಟಪಡಿಸಿದರು. ಇಸ್ಲಾಂ ಎಂದರೇನು ಮತ್ತು ಯಾವುದು ಇಲ್ಲ.

ಓರ್ವ ಮಹಿಳಾ ಅತಿಥಿ Margret Haas ಅವರ ಸಂಬಂಧ New zealand ಇಂದ ಇದೆ. ಆದರೆ ಈಗ ಅವರು ಜರ್ಮನಿ ನಿವಾಸಿಯಾಗಿದ್ದಾರೆ. ಅವರಿಗೆ 1998 ರಲ್ಲಿ ಹಝುರತ್ ಖಲೀಫತುಲ್ ಮಸೀಹ್ ಚತುರ್ಥರೊಂದಿಗೆ ಭೇಟಿ ಮಾಡುವ ಅವಕಾಶ ಜರ್ಮನಿಯಲ್ಲೇ ದೊರಕಿತ್ತು. ಅವರು ಹೇಳಿದರು. ಖಲೀಫರ ಭಾಷಣ ರೋಚಕವಾಗಿತ್ತು. ವಿಶೇಷವಾಗಿ ಖಲೀಫರ ಈ ಮಾತು ಧರ್ಮಗಳು ಶಾಂತಿಯ ಮಾಧ್ಯಮವಾಗಿವೆ, ಯಾವ ಧರ್ಮಕ್ಕೂ ಸಂಬಂಧಿಸಿದವರಾಗಲಿ ಅವರಲ್ಲಿ Tolemant (ಸಹಿಷ್ಣುತೆ) ಇರಬೇಕು. ನನ್ನ ದೃಷ್ಟಿಯಲ್ಲಿ ಈ ಮಾತು ಶಾಂತಿ ಸ್ಥಾಪನೆಗೆ ತುಂಬಾ ಮುಖ್ಯವಾಗಿದೆ. ನನಗೆ ಖಲೀಫರು ತುಂಬಾ ವಿನಯವಂತರಾಗಿ ಕಂಡುಬಂದರು.

ಓರ್ವ ಸ್ಥಳೀಯ ರಾಜಕಾರಣಿ Alban Krasmigi ಹೇಳುತ್ತಾರೆ. ನನಗೆ ಇಂದು ತಿಳಿಯಿತು. ಇಸ್ಲಾಂ ಸರ್ವರ ಒಳಿತನ್ನು ಬಯಸುತ್ತದೆ. ಖಲೀಫರ ವ್ಯಕ್ತಿತ್ವದಿಂದ ನಾನು ತುಂಬಾ ಪ್ರಭಾವಿತನಾಗಿದ್ದೇನೆ. ಅವರೊಡನೆ ಭೇಟಿಯ ಅವಕಾಶ ದೊರೆತಿದ್ದು ತುಂಬಾ ಹೆಮ್ಮೆಯ ವಿಷಯವಾಗಿದೆ. ಇಸ್ಲಾಮಿನ ಯಥಾರ್ಥತೆ ತಿಳಿಯಿತು. ನನಗೆ ಖಲೀಫರ ಈ ಮಾತು ತುಂಬಾ ಹಿತವೆನಿಸಿತು. ನಮಗೆ ಶಾಂತಿ ಸ್ಥಾಪಿಸಲು ಎಲ್ಲಾ ರೀತಿಯಿಂದ ಪ್ರಯತ್ನಿಸಬೇಕಾಗಿದೆ, ಈ ಕಾರ್ಯದಲ್ಲಿ ಇತರರಿಗೂ ಸಹಾಯ ಮಾಡಬೇಕು. ನಮಗೆ ಅದೊಂದು ಸಾಧಾರಣ ಮಾತಾಗಿದೆ, ನನಗೆ ಧಾರ್ಮಿಕ ಸ್ವಾತಂತ್ರ್ಯ ಲಭಿಸಿದೆ. ಆದರೆ ಇಂದು ನಾನು ಕಲಿಯುವಂತಾಯಿತು. ಲೋಕದಲ್ಲಿ ಇಂತಹ ಶಾಂತಿಪ್ರಿಯ ಜನರು ಇದ್ದಾರೆ, ಅವರಿಗೆ ಕಷ್ಟಗಳನ್ನು ನೀಡಲಾಗುತ್ತದೆ. ಮತ್ತು ಅವರಿಗೆ ಧಾರ್ಮಿಕ ಸ್ವಾತಂತ್ರ್ಯವಿಲ್ಲ, ಖಲೀಫರು ಆಫ್ರಿಕಾದಲ್ಲಿರುವವನ್ನೂ ಮತ್ತು ವಿಶೇಷವಾಗಿ ಆಫ್ರಿಕನ್ ಮಕ್ಕಳ ಸ್ಥಿತಿಗಳನ್ನು ಅವರೇನು ವರ್ಣಿಸಿದ್ದಾರೆ ಮತ್ತು ಜಮಾಅತ್ ಯಾವ ರೀತಿ ನಿಸ್ವಾರ್ಥ ಸೇವೆ ಸಲ್ಲಿಸುತ್ತಿದೆ ಎಂಬುದನ್ನೂ ವಿವರಿಸಿದ್ದಾರೆ. ಅದರಿಂದ ನನ್ನ ಹೃದಯ ತುಂಬಿ ಬಂತು. ಖಲೀಫರು ಹೇಳುವ ಶೈಲಿ ತುಂಬಾ ಒಳ್ಳೆಯದಾಗಿದೆ. ಅವರಿಂದ ಶಾಂತಿ ನೆಮ್ಮದಿಯ ಕಿರಣಗಳು ಭಾಸವಾಗುತ್ತಿವೆ. ಅವರ ಮಾತುಗಳು ತುಂಬಾ ಅರ್ಥಗರ್ಭಿತವಾಗಿವೆ.

ಓರ್ವ ಮಹಿಳಾ ಅತಿಥಿ Kmistina sehusten ಅವರು ಕ್ಯಾಥೋಲಿಕ್ ಸಮುದಾಯಕ್ಕೆ ಸೇರಿದವರಾಗಿದ್ದಾರೆ, ಹೇಳಿದರು. ಖಲೀಫರ ಭಾಷಣದಿಂದ ನಾನು ತುಂಬಾ ಪ್ರಭಾವಿತನಾಗಿದ್ದೇನೆ. ಖಲೀಫರು ಓರ್ವ ಧಾರ್ಮಿಕ ಮುಖಂಡರಾಗಿದ್ದಾರೆ. ಆದ್ದರಿಂದ ಅವರು ಕೇವಲ ತಮ್ಮ ಧರ್ಮ ಹಾಗೂ ಅದರ ಶಿಕ್ಷಣ ಮತ್ತು ಅದರ ಮಹಿಮೆಯ ಕುರಿತೇ ಮಾತನಾಡುವರು ಎಂದು ಭಾವಿಸಿದ್ದೆ. ಅದರೆ ಖಲೀಫರು ಹೀಗೆ ಹೇಳಿದರು. ನನಗೆ ಅವರ ಮಾತು ಒಳ್ಳೆಯದ್ದೇ ಎಂದು ಭಾವಿಸುತ್ತಿದೆ. ಆದರೆ ನನಗೆ ಅವರ ಈ ಮಾತು ಬಹಳಷ್ಟು ಮೆಚ್ಚುಗೆಯಾಯಿತು. ಅವರು ಸಾಮಾನ್ಯರ ಬಗ್ಗೆಯೂ ಮಾಥನಾಡಿದರು. ನಾವು ಅದಕ್ಕೆ ಸಂಬಂಧಿಸಿದವರಾಗಿದ್ದೇವೆ. ಖಲಿಫರ ಭಾಷಣದಿಂದ ಮುಖ್ಯವಾದ ಮಾತು ಎನಿಸಿದ್ದು, ನಮಗೆ ಒಟ್ಟುಗೂಡಿ ಪ್ರೀತಿ, ಪ್ರೇಮ ಮತ್ತು ಶಾಂತಿಯಿಂದ ನೆಲೆಸಬೇಕಾಗಿದೆ. ಇದು ಇಸ್ಲಾಮಿನ ಮೂಲಭೂತ ಶಿಕ್ಷಣವಾಗಿದೆ. ಕ್ರಿಸ್ತರು ಈ ಬಗ್ಗೆ ಹೆಚು ಒಲವು ತೋರಿಸಬೇಕಿತ್ತು. ಖಲೀಫರ ಭಾಷಣದಿಂದ ಮತ್ತೊಮ್ಮೆ ಆ ಅವಶ್ಯಕವಾದ ಕಾರ್ಯಗಳ ಮನವರಿಕೆಯಾಯಿತು. ಖಲೀಫರ ವ್ಯಕ್ತಿತ್ವ ಕುರಿತು ನನ್ನ ಹೃದಯದಲ್ಲಿ ಒಂದು ವಿಶಿಷ್ಠ ಸ್ಥಾನ ಹುಟ್ಟಿಕೊಂಡಿದೆ. ಯಾವ ರೀತಿ ನಮಗೆ ಪೋಪರೊಡನೆ ಭೇಟಿ ಮಾಡುವುದು ಒಂದು ಗೌರವದ ವಿಷಯವಾಗಿದೆ. ಅದೇ ರೀತಿಯಲ್ಲಿ ನಿಶ್ಚಿತವಾಗಿಯೂ ಅಹ್ಮದಿಯರಿಗೆ ತಮ್ಮ ಖಲೀಫರೊಂದಿಗಿನ ಭೇಟಿ ಒಂದು ಅತಿ ಹೆಮ್ಮೆಯ ವಿಷಯವಾಗಿದೆ. ಆದರೆ ನನಗೆ ಸಹ ಖಲೀಫರ ಸಭೆಯಲ್ಲಿ ಪಾಲ್ಗೊಂಡಿದ್ದು ತುಂಬಾ ಗೌರವದ ಮಾತಾಗಿದೆ.

ಓರ್ವ ಮಹಿಳಾ ಅತಿಥಿ Gabniella Ratazzistoll ಅವರೋರ್ವ ಸಾಮಾಜಿಕ ಕಾರ್ಯಕರ್ತೆಯಾಗಿದ್ದಾರೆ. ಅವರು ಹೇಳಿದರು. ಖಲೀಫರ ಭಾಷಣ ಒಂದು ಶಾಂತಿಯ ಭಾಷಣವಾಗಿತ್ತು. ನನಗೆ ಅವರ ಭಾಷಣದಲ್ಲಿ ಮೆಚ್ಚುಗೆಯಾದ ಮಾತೇನೆಂದರೆ ನಾವು ಪರಸ್ಪರ ಗೌರವ ಮತ್ತು ಇತರರ ಬಗ್ಗೆ ಗಮನಹರಿಸುವಂತೆ ಮೂಲ ತತ್ವಗಳನ್ನು ಅನುಸರಿಸಿದರೆ ನಾವೆಲ್ಲರೂ ಶಾಂತಿ ಮತ್ತು ಪ್ರೀತಿಯಿಂದ ಎಲ್ಲರ ಜೊತೆ ಇರಬಹುದಾಗಿದೆ. ಅವರು ಂಯಾವುದೇ ವರ್ಣದವರಾಗಲಿ, ಬಣ್ಣದವರಾಗಲಿ, ಅಥವಾ ಸಮುದಾಯದವರಾಗಲಿ, ಖಲೀಫರು ಕೆಲವು ಮೂಲಭೂತ ತತ್ವಗಳನ್ನು ವಿವರಿಸಿದ್ದಾರೆ. ಅದರಂತೆ ನಡೆಯುವುದು ಅವಶ್ಯಕವಾಗಿದೆ. ಖಲೀಫರ ಭಾಷಣದಿಂದ ನನಗೆ ಈ ಅಂಶವು ತಿಳಿಯಿತು. ಅಹ್ಮದಿಯತ್ ಟಿ.ವಿ ಮತ್ತು ಮಾಧ್ಯಮಗಳಲ್ಲಿ ತೋರಿಸುವ ಇಸ್ಲಾಂ ಅಲ್ಲ, ಖಲೀಫರ ಭಾಷಣದಿಂದ ನನಗೆ ಈ ಅಂಶವು ತಿಳಿಯಿತು. ಅಹ್ಮದಿಅತ್ ಟಿ.ವಿ ಮತ್ತು ಮಾಧ್ಯಮಗಳಲ್ಲಿ ತೋರಿಸುವ ಇಸ್ಲಾಂ ಅಲ್ಲ, ಖಲಿಫರ ಮಾತುಗಳು ತುಮಬಾ

*(ಪುಟ ಸಂಖೆ 08 ರಲ್ಲಿ ಮುಂದುವರಿಸಲಾಗಿದೆ)*

**ಇಸ್ಲಾಮ್ ಮತ್ತು ಅಹ್ಮದಿಯ್ಯತ್‌ನ ಮಾಹಿತಿಗಾಗಿ ನಮ್ಮನ್ನು ಸಂಪರ್ಕಿಸಿ:**
**NATIONAL TOLL FREE : 1800-103-2131**
**ಸಮಯ: ಬೆಳಿಗ್ಗೆ 08:30 ಯಿಂದ ರಾತ್ರಿ 10:30ಯವರೆಗೆ**
**(ಶುಕ್ರವಾರ ರಜೆ)**

Printed & Published by: Jameel Ahmed Nasir on behalf of Nigran Board of Badar. Name of Owner: Nigran Board of Badar. And printed at Fazle-Umar Printing Press. Harchowal Road, Qadian, Distt. Gurdaspur-143516, Punjab. And published at office of the Weekly Badar Mohallah - Ahmadiyya, Qadian Distt. Gsp-143516, Punjab. India. Editor: Tariq Ahmed Idris.